
12 ಅಕ್ಟೋಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 212 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ


ಸಂಪಾದಕ : ಜೆ.ಆರ್. ಕೆಂಚೇಗೌಡ



ದೆಹಲಿಯಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ನಡೆಯುತ್ತಿರುವ 2ನೇ ಟೆಸ್ಟ್ ಪಂದ್ಯದಲ್ಲಿ 3 ವಿಕೆಟ್ ಪಡೆದು ಸಂಭ್ರಮಿಸಿದ ಭಾರತದ ರವೀಂದ್ರ ಜಡೇಜ...



ಏಕತೆಯ ಶಕ್ತಿ: ಜಯಪ್ರಕಾಶ್ ನಾರಾಯಣ್ » 2



ಔರಂಗಜೇಬನ ಬದುಕಿನಲ್ಲೂ, ಸಾವಿನ ಬಳಿಕವೂ ಸತ್ಯವಾದ ಭವಿಷ್ಯ ವಾಣಿ » 3



ಬಸವಣ್ಣನನ್ನು ನಕಲ್ ನಾಯಕ ಮಾಡಲು ಹೊರಟಿದ್ದಾರೆ » 4

## ಒಂದೇ ದಿನ 1 ಕೋ.ರೂ. ಸಂಗ್ರಹ

• ಪ್ರಜೋದಯ ವರದಿ

**ಹಾಸನ:** ವರ್ಷಕ್ಕೊಮ್ಮೆ ದರ್ಶನ ನೀಡುವ ಹಾಸನಾಂಬ ದರ್ಶನದಲ್ಲಿ ಒಂದೇ ದಿನ 1 ಕೋಟಿ ರೂಪಾಯಿಗೂ ಹೆಚ್ಚು ಆದಾಯ ಹರಿದುಬಂದಿದೆ.

ವಾರಾಂತ್ಯದ ಹಿನ್ನಲೆ ಟಿಕೆಟ್ ಮಾರಾಟದಿಂದ ದಾಖಲೆ ಆದಾಯ ಸಂಗ್ರಹವಾಗಿದೆ. ಒಂದು ಸಾವಿರ ರೂ. ಮೌಲ್ಯದ ಟಿಕೆಟ್ ಮಾರಾಟದಿಂದ 65 ಲಕ್ಷ ರೂ. ಸಂಗ್ರಹವಾಗಿದ್ದು, 300 ರೂ. ಮೌಲ್ಯದ ಟಿಕೆಟ್ ಮಾರಾಟದಿಂದ 35 ಲಕ್ಷ ರೂ. ಆದಾಯ ಸಂಗ್ರಹ ವಾಗಿದೆ.

ಇನ್ನು ಆದಾಯ ಸಂಗ್ರಹದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಮಾಹಿತಿ ನೀಡಿ, ಆರಂಭದ ದಿನಗಳಲ್ಲೇ ಹಾಸನಾಂಬ ದರ್ಶನದಲ್ಲಿ ದಾಖಲೆ ಆದಾಯ ಸಂಗ್ರಹವಾಗುತ್ತಿದೆ. ಶನಿವಾರ ಒಂದೇ ದಿನ 1000 ರೂ. ಹಾಗು 300 ರೂ. ಟಿಕೆಟ್ ಮಾರಾಟದಿಂದ 1 ಕೋಟಿ ರೂ. ಸಂಗ್ರಹವಾಗಿದೆ. ಶುಕ್ರವಾರ 67 ಲಕ್ಷ ರೂ. ಆದಾಯ ಸಂಗ್ರಹವಾಗಿತ್ತು. ಕಳೆದ ವರ್ಷ 12 ಕೋಟಿ ರೂ. ಆದಾಯ ಸಂಗ್ರಹವಾಗಿತ್ತು. ಈ ವರ್ಷ 15 ಕೋಟಿಗೂ ಹೆಚ್ಚು ಆದಾಯ ಸಂಗ್ರಹ ನಿರೀಕ್ಷೆ ಇದೆ. ಪ್ರತಿದಿನ ಕನಿಷ್ಠ 2 ಲಕ್ಷ ಭಕ್ತರು ಬರುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

# ಮುಖ್ಯಮಂತ್ರಿಯಾಗಲು ನನಗೆ ಆತುರವಿಲ್ಲ

## ಭಗವಂತ ಯಾವಾಗಲಾದರೂ ಅವಕಾಶ ಕೊಡಲಿ | ಡಿ.ಕೆ.ಶಿವಕುಮಾರ್ ಪ್ರತಿಕ್ರಿಯೆ

• ಪ್ರಜೋದಯ ವರದಿ

**ಬೆಂಗಳೂರು:** ಬಿಹಾರ ಚುನಾವಣೆ ಬಳಿಕ ರಾಜ್ಯ ಸಚಿವ ಸಂಪುಟದಲ್ಲಿ ಭಾರೀ ಬದಲಾವಣೆ ಯಾಗುತ್ತದೆಯೆಂಬ ಚರ್ಚೆಗಳಿಂದ ಹಾಲಿ ಸಚಿವರು ಹಾಗು ಸಚಿವಾಕಾಂಕ್ಷಿಗಳ ನಡುವೆ ಲೆಕ್ಕಾಚಾರ ಶುರುವಾಗಿರುವ ಮಧ್ಯೆಯೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಹುದ್ದೆ ಅಲಂಕರಿಸುವ ಆತುರದಲ್ಲಿ ಇಲ್ಲವೆಂದಿದ್ದಾರೆ.

ಡಿ.ಕೆ.ಶಿವಕುಮಾರ್ ಅವರ ಈ ಹೇಳಿಕೆ ಸಾಕಷ್ಟು ಚರ್ಚೆಗೆ ಗ್ರಾಸವಾಗಿದ್ದು ಮುಂದಿನ ದಿನ ಗಳಲ್ಲಿ ಯಾವ ಸ್ವರೂಪ ಪಡೆಯುತ್ತ ದೆಂಬ ಕುತೂಹಲ ಹೆಚ್ಚಿದೆ. ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಆಗುವ ಕಾಲ ಹತ್ತಿರ ಬಂದಿದೆ ಎಂದು ನಾನು ಹೇಳಿಲ್ಲ. ಕೆಲವು ಮಾಧ್ಯ ಮಗಳು ಸುದ್ದಿ ತಿರುಚಿ ವಿವಾದ ಸೃಷ್ಟಿಸುತ್ತಿವೆ. ನಾನು ಸಾರ್ವಜನಿಕರ ಭೇಟಿಗೆ ಬಂದಾಗ ಕೆಲವರು ನೀವು ಮುಖ್ಯಮಂತ್ರಿ ಆಗಬೇಕು, ಆ ಸಮಯ ಹತ್ತಿರ ಬರುತ್ತಿದೆಯೇ ಎಂದು ಕೇಳಿದರು. ಆದರೆ ಮುಖ್ಯಮಂತ್ರಿ ಆಗುವ ಕಾಲ ಹತ್ತಿರ ಬರುತ್ತಿದೆಯೆಂದು ನಾನೇ ಹೇಳಿ ದ್ದೇನೆಂದು ಕೆಲವು ಮಾಧ್ಯಮಗಳು ಸುದ್ದಿ ತಿದ್ದಿ ಪ್ರಸಾರ ಮಾಡುತ್ತಿವೆ. ನೀವು ಹಾಗೆಲ್ಲ ಸುದ್ದಿ ತಿರುಚಿ ತೋರಿಸಬೇಡಿ ಎಂದರು.

ನಾನು ಮುಖ್ಯಮಂತ್ರಿ ಹುದ್ದೆ ಅಲಂಕರಿ ಸುವ



ಆತುರದಲ್ಲಿ ಇಲ್ಲ. ನಾನು ಇಲ್ಲಿಗೆ ಬಂದಿರುವುದು ಸಾರ್ವಜನಿಕರ ಸೇವೆ ಮಾಡಲು. ರಾಜಕಾರಣ ಮಾಡಲು ಅಲ್ಲ. ಜನರ ಸೇವೆ ಮಾಡಲು ಹಗಲು ರಾತ್ರಿ ತಿರುಗುತ್ತಿದ್ದೇನೆ. ನೀವು ಇದೇ ರೀತಿ ಸುದ್ದಿ ತಿರುಚುವುದಾದರೆ, ನಾನು ನಿಮಗೆ ಸಹಕಾರ ನೀಡುವುದಿಲ್ಲ. ಕಾರ್ಯಕ್ರಮಗಳಿಗೆ ಕರೆಯುವುದೂ ಇಲ್ಲ, ಮಾಧ್ಯಮಗೋಷ್ಠಿ ಕರೆಯು ವುದೂ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಾನು ಆ ಹೇಳಿಕೆ ಎಲ್ಲಿ ಹೇಳಿದ್ದೇನೆ. ಮಾಧ್ಯಮಗಳು ರಾಜಕಾರಣ ಮಾಡುವುದು ಬೇಡ. ನಾನು ಆ ರೀತಿ ಹೇಳಿಲ್ಲ, ಅದರ ಅಗತ್ಯವೂ ನನಗೆ ಇಲ್ಲ. ನನಗೆ ನನ್ನ ಗುರಿ ಗೊತ್ತಿದೆ. ಭಗವಂತ ನನಗೆ ಯಾವಾಗ ಅವಕಾಶ ಕೊಡುತ್ತಾನೋ ಕೊಡಲಿ. ರಾಜ್ಯದ ಜನರ ಸೇವೆ ಹಾಗು ಬೆಂಗಳೂರಿನ ನಾಗರೀಕರಿಗೆ ಉತ್ತಮ ಆಡಳಿತ ನೀಡಲು ಶ್ರಮಿಸುತ್ತಿದ್ದೇನೆ. ಆದರೆ ಒಳ್ಳೆಯ ಕೆಲಸ ಬಿಟ್ಟು ವಿವಾದ ಸೃಷ್ಟಿಸಲು ಕೆಲವು ಮಾಧ್ಯ ಮಗಳು ಪ್ರಯತ್ನಿಸುತ್ತಿವೆ ಎಂದಿದ್ದಾರೆ.

> **ನಾನು ಮುಖ್ಯಮಂತ್ರಿ ಆಗುತ್ತೇನೆಂದು ಎಲ್ಲಿಯೂ ಹೇಳಿಲ್ಲ. ಇದೇ ರೀತಿ ನನ್ನ ವಿಚಾರದಲ್ಲಿ ಸುಳ್ಳು ಸುದ್ದಿ ಪ್ರಸಾರ ಮಾಡಿ ದಾರಿ ತಪ್ಪಿಸುವ ಪ್ರಯತ್ನ ಮಾಡಿದರೆ ಮಾನ ನಷ್ಟ ಮೊಕದ್ದಮೆ ದಾಖಲಿಸಬೇಕಾಗುತ್ತದೆ.**
> **-ಡಿ.ಕೆ.ಶಿವಕುಮಾರ್, ಡಿಸಿಎಂ**

**ನಾಳೆ ಸಿದ್ದರಾಮಯ್ಯ ಡಿನ್ನರ್ ಮೀಟಿಂಗ್**

ಮುಖ್ಯಮಂತ್ರಿ ಸಿದ್ದರಾಮಯ್ಯ ಅ.13ರ ಸೋಮವಾರ ತಮ್ಮ ಸಂಪುಟ ಸಹೋದ್ಯೋಗಿಗಳನ್ನು ಔತಣಕೂಟಕ್ಕೆ ಆಹ್ವಾನಿಸಿರುವುದು ಕುತೂಹಲ ಮೂಡಿಸಿದೆ. ಸಂಪುಟ ಪುನಾ ರಚನೆ ಬಗ್ಗೆ ತೀವ್ರ ಉತ್ಸುಕರಾಗಿರುವ ಸಿದ್ದ ರಾಮಯ್ಯನವರ ಆಪ್ತ ಮತ್ತು ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ಈ ವಿಷಯ ಔತಣಕೂಟ ವೇಳೆ ಚರ್ಚೆಗೆ ಬರಬಹುದೆಂದು ಭಾವಿಸಿದ್ದಾರೆ. ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಸಂಪುಟ ಪುನಾರಚನೆ ಮಾಡಬೇಕೆಂಬ ಒತ್ತಾಯ ಕೇಳಿಬರುತ್ತಿದೆ. ಆದರೆ ಈ ವಿಷಯವನ್ನು ಹೈಕಮಾಂಡ್‌ಗೆ ಬಿಡಲಾಗಿದೆ. ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ಸಂಪುಟ ಪುನಾರಚನೆ ಯಾಗುತ್ತದೆಯೇ ಎಂದು ಗೊತ್ತಿಲ್ಲ ಎಂದರು.

**ಹೈಕಮಾಂಡ್ ತೀರ್ಮಾನವೇ ಅಂತಿಮ**

ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಮಾತನಾಡಿ, ಸಚಿವರ ಬದಲಾವಣೆಯಾಗಲಿ, ಸಂಪುಟ ಪುನಾರಚನೆಯಾಗಲಿ ಅಥವಾ ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸೇರಿಸಿಕೊಳ್ಳುವುದಾಗಲಿ ಯಾವುದರ ಬಗ್ಗೆಯೂ ಗೊತ್ತಿಲ್ಲ. ಹೈ ಕಮಾಂಡ್ ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿದ್ದು ಅದಕ್ಕೆ ಬದ್ಧರಾಗಿರಬೇಕೆಂದರು.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾತನಾಡಿ, ಸಚಿವರ ಮೌಲ್ಯಮಾಪನ ನಿರಂತರ ಪ್ರಕ್ರಿಯೆ. ಸಂಪುಟ ಪುನಾರಚನೆಯನ್ನು ಮುಖ್ಯಮಂತ್ರಿಯವರ ಔತಣಕೂಟದ ಜೊತೆ ಹೋಲಿಸುವ ಅಗತ್ಯವಿಲ್ಲವೆಂದರು.

ಉಡುಪಿಯಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಮಾತನಾಡಿ, ಮುಖ್ಯಮಂತ್ರಿ ಪ್ರತಿವರ್ಷ ಔತಣಕೂಟ ಕರೆಯುತ್ತಾರೆ. ಇದು ಹೊಸದೇನಲ್ಲ. ಕಳೆದ ಬಾರಿಯೂ ಕರೆಯಲಾಗಿತ್ತು. ಮುಖ್ಯ ಮಂತ್ರಿ ಅವರು ವೈಯಕ್ತಿಕವಾಗಿ ಮಾತನಾಡುತ್ತಾರೆ. ಸಂಪುಟ ವಿಸ್ತರಣೆ ಅಥವಾ ಪುನಾರಚನೆ ಸಾಮಾನ್ಯ ವಿದ್ಯಮಾನ. ಅದು ಯಾವಾಗ ಆಗಬೇಕೆಂದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗು ಹೈಕಮಾಂಡ್ ನಿರ್ಧರಿಸುತ್ತಾರೆಂದರು.

## ಹಸಿರು ಪಟಾಕಿಗಷ್ಟೇ ಅವಕಾಶ: ಮಾಲಿನ್ಯ ನಿಯಂತ್ರಣ ಮಂಡಳಿ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಾದ್ಯಂತ ಪರಿಸರ ಸ್ನೇಹಿ ದೀಪಾವಳಿ ಆಚರಣೆಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೂಚಿಸಿದ್ದು, ಹಸಿರು ಪಟಾಕಿ ಗಳಿಗೆ ಮಾತ್ರ ಅವಕಾಶ ನೀಡಬೇಕೆಂದು ಜಿಲ್ಲಾಧಿಕಾರಿಗಳು, ಪೊಲೀಸರಿಗೆ ತಾಕೀತು ಮಾಡಿದೆ.

ನಿಷೇಧಿಸಿರುವ ಪಟಾಕಿಗಳನ್ನು ಮಾರಾಟ ಮಾಡುವವರು, ದಾಸ್ತಾನು ಹೊಂದಿರುವವರ ವಿರುದ್ಧ ಪರಿಸರ ಕಾಯ್ದೆಯಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಗಿದೆ. ಅಲ್ಲದೆ, ಶಬ್ದ ಮಾಲಿನ್ಯವನ್ನು ನಿಯಂತ್ರಿಸಲು 2004ರಲ್ಲಿ ಪ್ರತಿ ಜಿಲ್ಲೆಯಲ್ಲೂ ಸ್ಥಾಪನೆಯಾಗಿ ರುವ ಜಿಲ್ಲಾ ಪರಿಸರ ಸಂರಕ್ಷಣೆ ಪ್ರಾಧಿಕಾರಕ್ಕೆ ಜವಾಬ್ದಾರಿ ವಹಿಸಲಾಗಿದೆ. ರಾಸಾಯನಿಕ ಹೊಂದಿರುವ ಪಟಾಕಿಗಳ ಬಳಕೆಯಿಂದ ವಾತಾವರಣದಲ್ಲಿ ರಾಸಾಯನಿಕ ಬಿಡುಗಡೆಯಾಗಿ ವಾಯು ಮಾಲಿನ್ಯವಾಗುತ್ತದೆ. ಪಟಾ ಕಿಗಳನ್ನು ಅಸುರಕ್ಷಿತ ಸ್ಥಳಗಳಲ್ಲಿ ಸಂಗ್ರಹಿಸಿ ಅವುಗಳು ಸ್ಫೋಟ ಗೊಂಡು ಅನೇಕ ಜನರ ಪ್ರಾಣಹಾನಿ/ಆರೋಗ್ಯಕ್ಕೆ ತೊಂದರೆಯಾಗಿದೆ. ಹಬ್ಬದ ಸಮಯದ ವಾಯು ಮಾದರಿಗಳಲ್ಲಿ ವಾಯು ಮಾಲಿನ್ಯ ವಿಪರೀತವಾಗಿರುವುದು ಕಂಡು ಬಂದಿದೆ. ಅದನ್ನೆಲ್ಲ ಗಮನಿಸಿ ಸುಪ್ರೀಂ ಕೋರ್ಟ್ ಮಾಲಿನ್ಯ ತಡೆಗಟ್ಟಲು ತೀರ್ಪು ನೀಡಿರುತ್ತದೆ. ಅದರಂತೆ ಸರ್ಕಾರವೂ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅವುಗಳನ್ನು ಪರಿ ಣಾಮಕಾರಿಯಾಗಿ ವಿವಿಧ ಇಲಾಖೆ ಗಳು, ಪ್ರಾಧಿಕಾರಗಳು ಜಾರಿಗೆ ತರ ಬೇಕೆಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಸುಪ್ರೀಂ ಕೋರ್ಟ್ 2005ರಲ್ಲಿ ಪಟಾಕಿ ಬಳಕೆ ಕುರಿತಂತೆ ಸ್ಪಷ್ಟ ನಿರ್ದೇಶನಗಳನ್ನು ನೀಡಿದ್ದು, 2015, 2018ರಲ್ಲಿ ಹಲವಾರು ನಿರ್ದೇಶನಗಳನ್ನೂ ನೀಡಿದೆ. ಬೆಳಿಗ್ಗೆ 8 ರಿಂದ ರಾತ್ರಿ 10ವರೆಗೆ ಮಾತ್ರ ಪಟಾಕಿ ಸಿಡಿಸಬಹುದು. ಉಳಿದ ಸಮಯದಲ್ಲಿ ಪಟಾಕಿ ಸಿಡಿ ಸುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಈ ನಿರ್ದೇಶನದ ಮೇರೆಗೆ ದೀಪಾವಳಿ ಹಬ್ಬವನ್ನು ಪರಿಸರ ಸ್ನೇಹಿ ದೀಪಾವಳಿಯಾಗಿ ಆಚರಿಸಲು ಅರಣ್ಯಪರಿಸರ ಸಚಿವರು ಸೂಚಿಸಿದ್ದಾರೆ.

ಹಸಿರು ಪಟಾಕಿಗಳನ್ನು ಮಾತ್ರ ಬಳಸಲು ಅವಕಾಶವಿದ್ದು, ಇತರೆ ಪಟಾಕಿ ಗಳನ್ನು ನಿಷೇಧಿ ಸಬೇಕು. ಅದಕ್ಕೆ ಸ್ಥಳೀಯ ಸಂಸ್ಥೆಗಳು, ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

## ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಗೆ ಮೂರು ಹಂತದ ಸಭೆ

• ಪ್ರಜೋದಯ ವರದಿ

**ಹಾಸನ:** ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಗೆ ಮೂರು ಹಂತದಲ್ಲಿ ಪ್ರತ್ಯೇಕ ಸಭೆಗಳನ್ನು ನಡೆಸಿ ಮುಖ್ಯಮಂತ್ರಿ ಸಮ್ಮುಖದ ಉನ್ನತಮಟ್ಟ ಸಭೆಯಲ್ಲಿ ಅರ್ಹರನ್ನು ಆಯ್ಕೆ ಮಾಡುತ್ತೇವೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್.ತಂಗಡಗಿ ಅವರು ತಿಳಿಸಿದರು.

ಶನಿವಾರ ಹಾಸನಾಂಬ ದೇವಿ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಸಮಿತಿ ರಚನೆ ಮಾಡಿ ಶುಕ್ರವಾರ ಆದೇಶ ಮಾಡಿದ್ದೇವೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯ ಮೊದಲ ಸಭೆ ಅ.15 ರಂದು ನಿಗದಿಯಾಗಿದೆ. ಒಟ್ಟಾರೆ ಎರಡರಿಂದ ಮೂರು ಸಭೆಗಳು ನಡೆಯುತ್ತವೆ, ಆದಾದ ಮೇಲೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಉನ್ನತ ಮಟ್ಟದ ಸಭೆ ಮಾಡಿ ಅಂತಿಮ ಮಾಡುತ್ತೇವೆ. ಎರಡು ಸಭೆಯನ್ನು ನಾನು ನಡೆಸುತ್ತೇನೆ, ಉನ್ನತ ಮಟ್ಟದ ಸಭೆಯಲ್ಲಿ ಮುಖ್ಯಮಂತ್ರಿ, ಸಚಿವರು ಇರುತ್ತಾರೆಂದು ತಿಳಿಸಿದರು.



ಈ ಬಾರಿ ಉತ್ತಮ ರೀತಿಯಲ್ಲಿ ಹಾಸನಾಂಬ ದೇವಿ ದರ್ಶನ ಪಡೆದಿದ್ದೇವೆ, ನಮ್ಮ ರಾಜ್ಯದ ಜನರಿಗೆ, ರೈತರಿಗೆ, ಎಲ್ಲರಿಗೂ ಒಳ್ಳೆಯದಾಗಲಿ ಎಂದು ಕೇಳಿಕೊಂಡಿದ್ದೇನೆ. ಕಳೆದ ಬಾರಿ ಒಬ್ಬನೇ ಬಂದಿದ್ದೆ, ಈ ಬಾರಿ ಪತ್ನಿ ಜೊತೆ ಬಂದಿದ್ದೇನೆ. ವಿಶಿಷ್ಟವಾಗಿ, ಅದ್ಭುತವಾಗಿ ಹಾಸನಾಂಬ ದೇವಿ ದರ್ಶನ ಆಯ್ತು. ವ್ಯವಸ್ಥೆಯಲ್ಲಿ ವ್ಯತ್ಯಾಸ ಕಾಣುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರು ಬಹಳ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದಾರೆ. ಜನರಿಗೆ ಯಾವುದೇ ತೊಂದರೆಯಾಗುತ್ತಿಲ್ಲ, ಸುಮಗಮವಾಗಿ ದೇವಿ ದರ್ಶನ ನಡೆಯುತ್ತಿದೆಂದು ಸಂತಸ ವ್ಯಕ್ತ ಪಡಿಸಿದರು. ನೇರವಾಗಿ ದೇವಸ್ಥಾನಕ್ಕಿಂತ ಪ್ರವಾಸಿ ಮಂದಿರಕ್ಕೆ ಹೋಗಿ ಅಲ್ಲಿಂದ ಜಿಲ್ಲಾಡಳಿತ ಮಾಡಿರುವ ವಾಹನದಲ್ಲಿ ಆಗಮಿಸಿ ದೇವರ ದರ್ಶನ ಪಡೆದಿದ್ದೇನೆಂದರು.

# ಹಾಸನಾಂಬ ದರ್ಶನಕ್ಕೆ ಲಕ್ಷಕ್ಕೂ ಅಧಿಕ ಭಕ್ತರ ಆಗಮನ

## ನೂಕುನುಗ್ಗಲು, ಗೊಂದಲವಿಲ್ಲದೆ ದರ್ಶನೋತ್ಸವ ಸುಗಮ | ಗಣ್ಯರ ಸಂಖ್ಯೆ ಕಡಿಮೆ, ಸಾಮಾನ್ಯ ಸಾಲಿನಲ್ಲಿ ಭಕ್ತರ ದಂಡು

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದೇವಿ ಸಾರ್ವಜನಿಕ ದರ್ಶನದ 2ನೇ ದಿನವಾದ ಶನಿವಾರ 1 ಲಕ್ಷಕ್ಕೂ ಅಧಿಕ ಸಂಖ್ಯೆಯ ಭಕ್ತರು ಯಾವುದೇ ಗೊಂದಲ, ನೂಕುನುಗ್ಗಲು ಇಲ್ಲದೆ ಸುಗಮವಾಗಿ ದರ್ಶನ ಪಡೆದುಕೊಂಡರು.

ದೇವಿಯ ದರ್ಶನಕ್ಕೆ ಮುಂಜಾನೆ 4 ಗಂಟೆಯಿಂದಲೇ ಅಧಿಕ ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸಿ ಹಾಸನಾಂಬ ಹಾಗು ಶ್ರೀ ಸಿದ್ದೇಶ್ವರಸ್ವಾಮಿ ದರ್ಶನ ಪಡೆದು ಪಾವನರಾದರು. ಕೆಲವರು ಮಧ್ಯರಾತ್ರಿಯಿಂದಲೇ ಸರತಿ ಸಾಲಿನಲ್ಲಿ ಕಾದು ನಿಂತಿದ್ದರು. ವಾರಂತ್ಯದ ಹಿನ್ನಲೆ ಭಕ್ತರ ಸಂಖ್ಯೆ ಸಹಜವಾಗಿಯೇ ಹೆಚ್ಚುಗಿತ್ತು. 1 ಸಾವಿರ ರೂ. ಟಿಕೆಟ್‌ನ ಸಾಲು ಖಾಲಿ ಇದ್ದರೆ, 300 ರೂ. ವಿಶೇಷ ದರ್ಶನದ ಸರತಿ ಸಾಲು ಸಂಪೂರ್ಣ ಭರ್ತಿಯಾಗಿತ್ತು.

ಗೋಲ್ಡನ್ ಪಾಸ್‌ನಲ್ಲಿ ಬೆಳಿಗ್ಗೆ 8ರಿಂದ 10ವರೆಗೆ ಸಾವಿರಾರು ಜನರು ದರ್ಶನಕ್ಕೆ ಆಗಮಿಸಿ ದರು. ಬೆಳಿಗ್ಗೆ 10 ರಿಂದ 12 ಗಂಟೆವರೆಗೆ ಶಿಷ್ಟಾಚಾರದ ಅನ್ವಯ ನೀಡಿದ್ದ ಸಮಯದಲ್ಲಿ ಕನ್ನಡ ಮತ್ತು ಸಾಂಸ್ಕೃತಿಕ ಸಚಿವ ಶಿವರಾಜ್ ತಂಗಡಗಿ, ಶಾಸಕ ಅರವಿಂದ ಬೆಲ್ಲದ್ ಅವರು ತನ್ನ ಕುಟುಂಬದ ಸಮೇತ ಹಾಗು ಸಂಸದ ಸುನೀಲ್ ಬೋಸ್, ನ್ಯಾಯಾಧೀಶರು ದೇವಿ ದರ್ಶನ ಪಡೆದರು.

» ನಾಲ್ಕನೇ ಪುಟದಲ್ಲಿ



**ಇಂದಿನ ದರ್ಶನ ಸಮಯ**

ಬೆಳಿಗ್ಗೆ 5 ಗಂಟೆಯಿಂದ ಮಧ್ಯಾಹ್ನ 2 (ಮಧ್ಯಾಹ್ನ 2 ರಿಂದ 3.30 ದರ್ಶನ ಸಮಯ) ಮಧ್ಯಾಹ್ನ 3.30 ರಿಂದ ಸೋಮವಾರ ಮುಂಜಾನೆ 3ಗಂಟೆವರೆಗೆ ನಿರಂತರವಾಗಿ ದರ್ಶನ ಇರಲಿದೆ.

**1000 ರೂ. ಟಿಕೆಟ್ ಸಾಲು ಖಾಲಿ..ಖಾಲಿ**

ಹಾಸನಾಂಬ ದರ್ಶನಕ್ಕಾಗಿ ವಿಶೇಷವಾಗಿ 1 ಸಾವಿರ ರೂ. ಟಿಕೆಟ್ ಸಾಲು ಜನರಿಲ್ಲದೆ ಖಾಲಿ ಹೊಡೆಯುತ್ತಿತ್ತು. 300 ರೂ. ಟಿಕೆಟ್ ಸಾಲಿನಲ್ಲೇ ಕೇವಲ 15 ನಿಮಿಷದಲ್ಲಿ, ಧರ್ಮ ದರ್ಶನದ ಸಾಲಿನಲ್ಲಿ ಒಂದರಿಂದ ಒಂದುವರೆ ಗಂಟೆಯಲ್ಲೇ ದೇವಿಯ ದರ್ಶನವಾಗುತ್ತಿದ್ದರಿಂದ 1 ಸಾವಿರ ರೂ. ಟಿಕೆಟ್ ಪಡೆದು ದರ್ಶನಕ್ಕೆ ಬರುವವರ ಸಂಖ್ಯೆ ಕಡಿಮೆಯಾಗಿತ್ತು. ಧರ್ಮ ದರ್ಶನದ ಸಾಲಿನಲ್ಲಿ ಬರುವವರ ಸಂಖ್ಯೆ ಹೆಚ್ಚಾಗಿದ್ದರೂ ಎಲ್ಲಿಯೂ ನಿಲ್ಲದಂತೆ ವೇಗವಾಗಿ ಸಾಗಿ ದೇವಿ ದರ್ಶನ ಪಡೆದುಕೊಂಡರು. ಅದರಿಂದ ಪೊಲೀಸರು, ಅಧಿಕಾರಿಗಳು ನಿಶ್ಚಿಂತೆ ಯಿಂದ ಕರ್ತವ್ಯ ನಿರ್ವಹಿಸಿದರು.

## ಮಹಿಳೆ ಮೇಲೆ ಕಾಡು ಕೋಣ ದಾಳಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಲೆನಾಡು ಭಾಗದಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಾಡು ಕೋಣ ಬಯಲು ಸೀಮೆಗೆ ಲಗ್ಗೆ ಇಟ್ಟಿದ್ದು ಶನಿವಾರ ಮಹಿಳೆಯೊಬ್ಬರ ಮೇಲೆ ದಾಳಿ ನಡೆಸಿದೆ.

ಪಟ್ಟಣದ ಕುವೆಂಪು ನಗರದಲ್ಲಿ ಓಡಾಡಿರುವ ಕಾಡು ಕೋಣ ಜನರಲ್ಲಿ ಆತಂಕ ಸೃಷ್ಟಿಸಿತ್ತು. ಜನರನ್ನು ಕಂಡು ಏಕಾಏಕಿ ಗಾಬರಿಯಲ್ಲಿ ಓಡಾಡಿದ ಕಾಡುಕೋಣ ಒಂದು ಕಾರು ಜಖಂಗೊಳಿಸಿದೆ. ಮಹಿಳೆಯೊಬ್ಬರ ಮೇಲೆ ದಾಳಿ ನಡೆಸಿ ಗಂಭೀರ ಗಾಯಗೊಳಿಸಿದೆ.

ಗೂರನಹಳ್ಳಿ ಮಂಟಿ ಅರಣ್ಯದ ಕಡೆಯಿಂದ ಕಾಡುಕೋಣ ಪಟ್ಟಣದ



ಒಳಕ್ಕೆ ಬಂದಿದೆ ಎಂದು ಶಂಕಿಸಲಾಗಿದೆ. ಕುವೆಂಪುನಗರದ ಜನತಾ ಹೌಸ್‌ನಲ್ಲಿ ಬೀಡುಬಿಟ್ಟಿದ್ದ ಕಾಡುಕೋಣಕ್ಕೆ ಅರವಳಿಕೆ ಚುಚ್ಚುಮದ್ದು ನೀಡಿ ಕ್ರೇನ್ ಮೂಲಕ ಲಾರಿಗೆ ಹತ್ತಿಸಿ ಸ್ಥಳಾಂತರ ಮಾಡಲಾಯಿತು.

## ಟಿಕೆಟ್ ಹಣದಿಂದ ದೇವಾಲಯ ನಡೆಸುವ ಅನಿವಾರ್ಯತೆ ಇಲ್ಲ : ಕೃಷ್ಣಬೈರೇಗೌಡ

# ಆದಾಯದ ಚಿಂತೆಯಿಲ್ಲ, ಭಕ್ತರು ಖುಷಿಯಾಗಿ ದರ್ಶನ ಪಡೆಯಲಿ

• ಪ್ರಜೋದಯ ವರದಿ

**ಹಾಸನ:** ಭಕ್ತರಿಗೆ ಸಾಮಾನ್ಯ ಸಾಲಿನಲ್ಲೇ ಉತ್ತಮ ವಾಗಿ ದರ್ಶನವಾಗುತ್ತಿರುವುದರಿಂದ ಟಿಕೆಟ್ ಖರೀದಿ ಕಡಿಮೆಯಾಗಬಹುದು. ಆದಾಯ ಸಂಪೂರ್ಣ ನಿಂತರೂ ಚಿಂತೆಯಿಲ್ಲ, ಭಕ್ತರು ಖುಷಿಯಾಗಿ ದರ್ಶನ ಮಾಡಿ ಹೋದರೆ ಅದೇ ಖುಷಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ತಿಳಿಸಿದರು.

ಶನಿವಾರ ಧರ್ಮ ದರ್ಶನ ಸಾಲು, 300 ರೂ. ವಿಶೇಷ ದರ್ಶನದ ಸಾಲುಗಳನ್ನು ಪರಿಶೀಲಿಸಿ, ವ್ಯವಸ್ಥೆ ಬಗ್ಗೆ ದೇವಿ ದರ್ಶನಕ್ಕೆ ನಿಂತಿದ್ದ ಭಕ್ತರು ಹಾಗು ದೇವಿ ದರ್ಶನದ ಪಡೆದವರನ್ನು ವಿಚಾರಿಸಿ ಮಾಹಿತಿ ಪಡೆದ ಬಳಿಕ ಮಾತನಾಡಿದ ಅವರು, ಈ ವರ್ಷ ಆದಾಯ ಕಡಿಮೆ ಆಗಲಿದೆ.



ಭಕ್ತರ ಟಿಕೆಟ್ ಹಣದಿಂದ ದೇವಾಲಯ ನಡೆಸುವ ಅನಿವಾ ರ್ಯತೆ ಸರ್ಕಾರಕ್ಕೆ ಇಲ್ಲ. ಹಾಗಾಗಿ ನಮಗೆ ಆದಾಯ ಮುಖ್ಯ ಅಲ್ಲ. ಆದಾಯದ ಮೇಲೆ ನಾವು ಅವಲಂಬನೆಯಾಗಿಲ್ಲ. ನಮ್ಮ ಸ್ವಾರ್ಥಕ್ಕೆ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿಲ್ಲ, » ನಾಲ್ಕನೇ ಪುಟದಲ್ಲಿ

**ಅ.18 ರಿಂದ ಹೆಚ್ಚು ಭಕ್ತರು ಬರುವ ನಿರೀಕ್ಷೆ**

ಯಾರೂ, ಯಾವುದೇ ಆತಂಕ ಇಲ್ಲದೆ ದರ್ಶನ ಪಡೆಯುತ್ತಿದ್ದಾರೆ. ಯಾವುದೇ ಗೊಂದಲ ಇಲ್ಲದೆ ದರ್ಶನ ಚೆನ್ನಾಗಿ ಆಗುತ್ತಿದೆ. ಅ.18 ರಿಂದ 22ರವರೆಗೆ ಭಾರೀ ಭಕ್ತರು ಬರುವ ನಿರೀಕ್ಷೆ ಇದೆ. ದಿನಕ್ಕೆ ಕನಿಷ್ಠ 2 ಲಕ್ಷ ಭಕ್ತರು ಬರುವ ಸಾಧ್ಯತೆ ಇದೆ. ಅ.15ರಂದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಬರುವ ಸಮಯ ನಿಗದಿಯಾಗಿದೆ. ಅವರು ಯಾವ ಸಮಯಕ್ಕೆ ಬಂದರೆ ಜನರಿಗೆ ತೊಂದರೆ ಆಗಲ್ಲ ಎಂದು ಜಿಲ್ಲಾಡಳಿತಕ್ಕೆ ಕೇಳಿದ್ದೇನೆ. ಜನರು ಕಡಿಮೆ ಇರುವ ಸಮಯದಲ್ಲಿ ಅವರನ್ನು ಕರೆತಂದು ದರ್ಶನ ಮಾಡಿಸುತ್ತೇವೆಂದು ತಿಳಿಸಿದರು.

## ಕೋಟಿ ಕೋಟಿ ದೋಚಿದ್ದ ಸೈಬರ್ ವಂಚಕ ಸೆರೆ

• ಪ್ರಜೋದಯ ವರದಿ

**ಹಾಸನ:** ದೇಶದ ವಿವಿಧ ಭಾಗಗಳ ಜನರ ಬ್ಯಾಂಕ್ ಖಾತೆಯಿಂದ ಹಣ ದೋಚುತ್ತಿದ್ದ ಸೈಬರ್ ವಂಚಕನನ್ನು ದಾವಣಗೆರೆ ಸೈಬರ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೇಲೂರು ಪಟ್ಟಣದ ಶಾಂತಿನಗರ ನಿವಾಸಿ ಸೈಯದ್ ಅರ್ಫಾತ್ (28) ಬಂಧಿತ ಆರೋಪಿ. ಈತನ ಖಾತೆಯಲ್ಲಿ ಕೋಟಿ ಕೋಟಿ ವಹಿವಾಟು ನೋಡಿ ಪೊಲೀಸರೇ ಅಚ್ಚರಿ ಪಟ್ಟಿದ್ದಾರೆ. ಇನ್ನೂ ತಲೆ ಮರೆಸಿಕೊಂಡಿರುವ ಇಬ್ಬರು ಆರೋಪಿಗಳಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.



ಆರೋಪಿಯ ಮೊಬೈಲ್ ವಶಪಡಿಸಿಕೊಂಡು ಪರಿಶೀಲನೆ ನಡೆಸಿದಾಗ, ಆರೋಪಿಗಳ ಖಾತೆಯಲ್ಲಿ ಜುಲೈ 27 ರಿಂದ ಆಗಸ್ಟ್ 19ರವರೆಗೆ

» ನಾಲ್ಕನೇ ಪುಟದಲ್ಲಿ

## ಹಾಸನ ರೈಲು ನಿಲ್ದಾಣದಲ್ಲಿ ಅಮೃತ ಸಂವಾದ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಕೇಂದ್ರ ಸರ್ಕಾರದ ವಿಶೇಷ ಸ್ವಚ್ಛತಾ ಅಭಿಯಾನ 5.0ರ ಅಂಗವಾಗಿ ನೈಋತ್ಯ ರೈಲ್ವೆಯ ಮೈಸೂರು ವಿಭಾಗದಿಂದ ಶನಿವಾರ ನಗರದ ರೈಲು ನಿಲ್ದಾಣದಲ್ಲಿ ಅಮೃತ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು ಮೂಡಿಸುವುದು, ನೈರ್ಮಲ್ಯ ಕಾಪಾಡಿಕೊಳ್ಳುವುದು ಕಾರ್ಯಕ್ರಮದ ಪ್ರಮುಖಉದ್ದೇಶವಾಗಿದೆ. ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಅವರು, ರೈಲು ನಿಲ್ದಾಣಕ್ಕೆ ಭೇಟಿ ನೀಡಿ ನಿಲ್ದಾಣದ ಸ್ವಚ್ಛತೆ, ನೈರ್ಮಲ್ಯ ಮತ್ತು ಮೂಲ ಸೌಕರ್ಯಗಳ ಕುರಿತು ಪರಿಶೀಲನೆ ನಡೆಸಿದರು. ಪ್ಲಾಸ್ಟಿಕ್ ಮುಕ್ತ ಅಭಿಯಾನದ ಕುರಿತು ಪ್ರಯಾಣಿಕರಲ್ಲಿ ಜಾಗೃತಿ ಮೂಡಿಸಿದರು.

ನಂತರ ಪ್ರಯಾಣಿಕರೊಂದಿಗೆ ಸಂವಾದ ನಡೆಸಿ, ಅಮೃತ್ ಭಾರತ್ ಯೋಜನೆ ಅಡಿಯಲ್ಲಿ ಹಾಸನ ರೈಲು ನಿಲ್ದಾಣದಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿ ಕುರಿತು ವಿವರಿಸಿದರು. ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಜೆ. ಲೋಹಿತೇಶ್ವರ ಮತ್ತಿತರರು ಇದ್ದರು.



**ಸಂಸದರ ಭೇಟಿಯಾದ ಡಿಆರ್‌ಎಂ**

ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಅವರು ಶುಕ್ರವಾರ ಬೆಳಿಗ್ಗೆ ಸಂಸದರ ಕಚೇರಿಯಲ್ಲಿ ಸಂಸದ ಶ್ರೇಯಸ್ ಪಟೇಲ್ ಅವರನ್ನು ಭೇಟಿಯಾಗಿ ವಿವಿಧ ಕಾಮಗಾರಿ ಕುರಿತು ಚರ್ಚೆ ನಡೆಸಿದರು.

ನಗರದ ರಾಜಘಟ್ಟದಲ್ಲಿ ನಡೆಯುತ್ತಿರುವ ಗೂಡ್ಸ್ ರೈಲ್ವೆ ಶೆಡ್ ಕಾಮಗಾರಿಗಾಗಿ ಸಾರ್ವಜನಿಕ ರಸ್ತೆ ಬಳಸಿಕೊಳ್ಳುತ್ತಿರುವ ಕುರಿತು ಸ್ಥಳೀಯರಿಂದ ದೂರು ಬಂದ ಹಿನ್ನಲೆಯಲ್ಲಿ ಸಂಸದರು ಸಮಸ್ಯೆ ವಿವರಿಸಿದರು. ಹಲವು ವರ್ಷಗಳಿಂದ ರಾಜಘಟ್ಟ, ಗವೇನಹಳ್ಳಿ ಹಾಗು ಸುತ್ತಲಿನ ಜನರ ಸಂಪರ್ಕ ರಸ್ತೆಗೆ ಧಕ್ಕೆ ತರುವುದು ಬೇಡ. ಕಾಮಗಾರಿಗೆ ಪರ್ಯಾಯ ಮಾರ್ಗ ಕಂಡು ಕೊಳ್ಳಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು.

ಜೊತೆಗೆ ಹೊಳೆನರಸೀಪುರದ ಅಂಬೇಡ್ಕರ್ ಭವನದಲ್ಲಿ ಆರ್‌ಓಪಿ ಪ್ಲಾಂಟ್, ಅರಸೀಕೆರೆ ರೈಲ್ವೆ ನಿಲ್ದಾಣದಲ್ಲಿ ಸ್ವಚ್ಛತೆ ಹಾಗು ಕಡೂರು ನಿಲ್ದಾಣದಲ್ಲಿ ಶೌಚಾಲಯ ವ್ಯವಸ್ಥೆ ಸರಿಪಡಿಸಬೇಕೆಂದು ಅಧಿಕಾರಿಗೆ ನಿರ್ದೇಶನ ನೀಡಿದರು.

**ಈಗ ಬರುತ್ತಿರುವ ಹಣ ಸ್ಥಗಿತವಾಗುವ ಆತಂಕ | ಜಿಲ್ಲೆಯಲ್ಲಿ 8,440 ಫಲಾನುಭವಿಗಳು**

# ಯುವನಿಧಿ ಪ್ಲಸ್‌ಗೆ ಫಲಾನುಭವಿಗಳ ನಿರಾಸಕ್ತಿ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಯುವನಿಧಿ ಫಲಾನುಭವಿಗಳಿಗೆ ಯುವ ನಿಧಿ ಪ್ಲಸ್ ತರಬೇತಿಗೆ ನೋಂದಣಿ ಮಾಡಿಕೊಳ್ಳಬೇಕೆಂದು ಸರ್ಕಾರ ಕಟ್ಟಪ್ಪಣೆ ಹೊರ ಡಿಸಿದ್ದು ಮಾಹಿತಿ ಕೊರತೆ ಹಾಗು ಈಗ ಬರುತ್ತಿರುವ ಹಣ ಸ್ಥಗಿತಗೊಳ್ಳುತ್ತದೆಂಬ ಭಯದಿಂದ ಆತಂಕಕ್ಕೆ ಒಳಗಾಗಿದ್ದಾರೆ.

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಜಾರಿಗೆ ತರಲಾದ ಯುವನಿಧಿ ಪ್ಲಸ್ ಕೌಶಲಾಭಿವೃದ್ಧಿ ತರಬೇತಿಗೆ ಜಿಲ್ಲೆಯಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಎರಡು ವರ್ಷಗಳಲ್ಲಿ ಪದವಿ, ಡಿಪ್ಲೋಮಾ ಪೂರೈಸಿದ ನಿರುದ್ಯೋಗಿಗಳಿಗೆ ರಾಜ್ಯ ಸರ್ಕಾರ ಯುವನಿಧಿ ಯೋಜನೆ ಜಾರಿಗೆ ತಂದಿದೆ. ಪದವೀಧರರಿಗೆ 3,000 ರೂ., ಡಿಪ್ಲೋಮಾ ಪಡೆದವರಿಗೆ 1,500 ರೂ. ನಿರುದ್ಯೋಗ ಭತ್ಯೆಯಿದೆ. ಈ ಫಲಾನುಭವಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ವಿವಿಧ ಕೌಶಲಾಧಾರಿತ ಕೋರ್ಸ್‌ಗಳನ್ನು ಆರಂಭಿಸಿದ್ದರೂ ನಿರೀಕ್ಷಿತ ಸಂಖ್ಯೆ ಯಲ್ಲಿ ಫಲಾನುಭವಿಗಳು ತರಬೇತಿ ಪಡೆಯುತ್ತಿಲ್ಲ.





ಜಿಲ್ಲೆಯಲ್ಲಿ ಒಟ್ಟು 8,440 ಯುವನಿಧಿ ಫಲಾನುಭವಿಗಳಿದ್ದಾರೆ. ಆದರೆ, ಅವರಲ್ಲಿ 100 ಕ್ಕಿಂತ ಕಡಿಮೆ ಮಂದಿ ಮಾತ್ರ ಕೌಶಲಾಧಾರಿತ ಕೋರ್ಸ್‌ಗಳ ತರಬೇತಿ ಪಡೆದಿದ್ದಾರೆ. ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್), ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ), ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ (ಕೆಜಿಟಿಟಿಐ), ಮುಖ್ಯಮಂತ್ರಿಗಳ ಕೌಶಲ ಕರ್ನಾಟಕ ಯೋಜನೆಯಡಿ 14 ಸಂಸ್ಥೆಗಳಿಂದ ತರಬೇತಿ ನೀಡಲಾಗುತ್ತಿದೆ. ತರಬೇತಿ ಪಡೆದರೂ ಫಲಾನುಭವಿಗಳಿಗೆ ಎರಡು ವರ್ಷ ನಿರುದ್ಯೋಗ ಭತ್ಯೆ ಸಿಗಲಿದೆಯೆಂದು ಸರ್ಕಾರ ಸ್ಪಷ್ಟಪಡಿಸಿದೆಯಾದರೂ ಫಲಾನುಭವಿಗಳು ಆ ಬಗ್ಗೆ ಆಸಕ್ತಿ ತೋರುತ್ತಿಲ್ಲ.

> **ಜಿಲ್ಲೆಯಲ್ಲಿ 8440 ವಿದ್ಯಾವಂತ ಯುವಕ ಯುವತಿಯರು ಯುವ ನಿಧಿ ಯೋಜನೆಗೆ ಅರ್ಜಿ ಸಲ್ಲಿಸಿದ್ದು ಜುಲೈ ತಿಂಗಳಲ್ಲಿ 6751 ಜನರಿಗೆ ಹಣ ಪಾವತಿಯಾಗಿದೆ. ಯುವನಿಧಿ ಪ್ಲಸ್‌ಗೆ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದ್ದು ಎಷ್ಟು ಜನರು ನೋಂದಣಿ ಮಾಡಿಕೊಂಡಿದ್ದಾರೆಂಬ ಮಾಹಿತಿ ನಮಗೆ ಗೊತ್ತಾಗುವುದಿಲ್ಲ.**
> **-ವಿಜಯಲಕ್ಷ್ಮಿ, ಜಿಲ್ಲಾ ಉದ್ಯೋಗಾಧಿಕಾರಿ**

**ಎರಡು ತಿಂಗಳಿಂದ ಬಂದಿಲ್ಲ ಹಣ**


ಪ್ರಸಕ್ತ ಸಾಲಿನಲ್ಲಿ ಜುಲೈ ತಿಂಗಳ ವರೆಗೆ ಯುವ ನಿಧಿ ಹಣ ಫಲಾನುಭವಿಗಳ ಖಾತೆಗೆ ಜಮೆಯಾಗಿದ್ದು ಆಗಸ್ಟ್-ಸೆಪ್ಟೆಂಬರ್‌ನ ಎರಡು ತಿಂಗಳ ಹಣ ಬಂದಿಲ್ಲ. ಜುಲೈನಲ್ಲಿ 2,00,56,500 ರೂ. ಹಣ 6,751 ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆಯಾಗಿದೆ. 2025ರ ಜನವರಿ 24 ರಿಂದ ಜುಲೈ 25ರೊಳಗೆ ಒಟ್ಟು 59,790 ಫಲಾನುಭವಿಗಳಿಗೆ 17,79,42,000 ಹಣ ಪಾವತಿಯಾಗಿದೆ.

**ಯುವ ಪ್ಲಸ್‌ನ ಉದ್ದೇಶ ಏನು**

ಪದವಿ ಹಾಗು ವೃತ್ತಿ ಆಧಾರಿತ ಶಿಕ್ಷಣ ಪಡೆದರೂ ಪಡೆದರೂ ಉದ್ಯೋಗ ಸಿಗದೆ ಯುವಕ-ಯುವತಿಯರು ಪರದಾಡುವ ಪರಿಸ್ಥಿತಿ ಇದೆ. ಪದವಿ ವರೆಗೆ ಪೋಷಕರು ಆರ್ಥಿಕ ನೆರವು ನೀಡಿರುತ್ತಾರೆ. ಆ ಬಳಿಕ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಹಾಗು ಖಾಸಗಿ ಕಂಪನಿಗಳ ಸಂದರ್ಶನಕ್ಕೆ ತೆರಳಲು ನೆರವಾಗಲೆಂದು ರಾಜ್ಯ ಸರ್ಕಾರ 2 ವರ್ಷಗಳ ವರೆಗೆ ಯುವನಿಧಿ ಯೋಜನೆ ಜಾರಿಗೊಳಿಸಿದೆ. ಸರ್ಕಾರ ನೀಡಿದ ಎರಡು ವರ್ಷಗಳಲ್ಲಿ ಫಲಾನುಭವಿಗಳು ಉದ್ಯೋಗ ಪಡೆದಿರಬೇಕು. ಇಲ್ಲದಿದ್ದರೆ ಆ ಬಳಿಕ ಹಣ ಸಂದಾಯವಾಗುವುದು ಸ್ಥಗಿತ ಗೊಳ್ಳುತ್ತದೆ. ಜೊತೆಗೆ ಈಗ ಹಣ ಪಡೆಯುತ್ತಿರುವವರು ಮೂರು ತಿಂಗಳೊಳಗೆ ತಾವು ಯಾವುದೇ ಉದ್ಯೋಗ ಮಾಡುತ್ತಿಲ್ಲವೆಂದು ಸ್ವಯಂ ದೃಢೀಕರಣವನ್ನು ಸಲ್ಲಿಸಬೇಕು. ಇಲ್ಲವಾದರೆ ಅಂತವರನ್ನು ಯೋಜನೆಯಿಂದ ಹೊರಗಿಡಲಾಗುತ್ತದೆ.

» ನಾಲ್ಕನೇ ಪುಟದಲ್ಲಿ

# ಏಕತೆಯ ಶಕ್ತಿ: ಜಯಪ್ರಕಾಶ್ ನಾರಾಯಣ್



**ಲೋಕನಾಯಕ**

**ಸಿ.ಪಿ..ರಾಧಾಕೃಷ್ಣನ್**

1902ರ ಅಕ್ಟೋಬರ್ 11ರಂದು, ಬಿಹಾರದ ಧರ್ಮ, ಸಂಸ್ಕೃತಿ ಮತ್ತು ಜ್ಞಾನಭೂಮಿಯಲ್ಲಿ, ಗಂಗಾ ಮತ್ತು ಘಾಘ್ರ ನದಿಗಳ ಸಂಗಮದಲ್ಲಿರುವ ಸಿತಾಬ್ದಿಯಾರ ಎಂಬ ಗ್ರಾಮದಲ್ಲಿ ಪ್ರಜಾ ಪ್ರಭುತ್ವದ ಪ್ರತಿಪಾದಕರಾದ ಲೋಕನಾಯಕ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಜನಿಸಿದರು. ಈ ವರ್ಷ, ಸಂಪೂರ್ಣ ಕ್ರಾಂತಿಯ ಈ ಹರಿಕಾರರ 123ನೇ ಜಯಂತಿಯನ್ನು ನಾವು ಆಚರಿಸುತ್ತಿದ್ದೇವೆ.

ಜೆಪಿ ಎಂದೇ ಪ್ರೀತಿಯಿಂದ ಕರೆಸಿಕೊಳ್ಳುತ್ತಿದ್ದ ಅವರು, ತಮ್ಮ ಬಗ್ಗೆ ಎಂದಿಗೂ ಯೋಚಿಸದೆ, ದೇಶದ ಬಡವರನ್ನೇ ತಮ್ಮ ಮೊದಲ ಆದ್ಯತೆಯಾಗಿರಿಸಿಕೊಂಡಿದ್ದ ಒಬ್ಬ ಶ್ರೇಷ್ಠ ರಾಜನೀತಿಜ್ಞರಾಗಿದ್ದರು. ಅವರಿಗೆ ಲೋಕನಾಯಕ ಎಂಬ ಬಿರುದನ್ನು ಯಾವುದೇ ಮಹಾನ್ ವ್ಯಕ್ತಿ ನೀಡಿಲ್ಲ - ಇದನ್ನು 1974ರ ಜೂನ್ 5ರಂದು ಪಟನಾದ ಗಾಂಧಿ ಮೈದಾನದಲ್ಲಿ ಒಟ್ಟುಗೂಡಿದ್ದ ಲಕ್ಷಾಂತರ ಭಾರತೀಯರು ಪ್ರೀತಿಯಿಂದ ನೀಡಿದರು.

ಈ ದಿನದಂದು, ಅವರ ಜೀವನ ಮತ್ತು ತತ್ವಗಳನ್ನು ಬಿಂಬಿಸುವ ಈ ಲೇಖನದ ಮೂಲಕ, ನಾನು ಆ ಮಹಾನ್ ನಾಯಕನಿಗೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ. ರಾಜಕೀಯ ಜಾಗೃತಿಯ ಆರಂಭ: ಸೀತಾಬ್ದಿಯಾರಾದಲ್ಲಿನ ಲೋಕನಾಯಕರ ಆರಂಭಿಕ ಸಾಧಾರಣ ಜೀವನವು, ಬಡವರ ದಿನನಿತ್ಯದ ಬವಣೆಗಳು ಮತ್ತು ಜೀವನಶೈಲಿಗೆ ಅವರು ಸದಾ ಬದ್ಧರಾಗಿರಲು ಸಹಾಯ ಮಾಡಿತು.

ಅಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ ನಂತರ, ಪಟನಾದಲ್ಲಿನ ವಿದ್ವತ್ಪೂರ್ಣ ಮತ್ತು ತೀವ್ರ ರಾಷ್ಟ್ರೀಯತೆಯ ವಾತಾವರಣವು ಅವರಲ್ಲಿ ದೇಶಪ್ರೇಮದ ಬೀಜಗಳನ್ನು ಬಿತ್ತಿತು. ಅವರು ಇಂಟರ್‌ಮೀಡಿಯೆಟ್ ಶಿಕ್ಷಣ ಪಡೆಯುತ್ತಿದ್ದ ಕಾಲದಲ್ಲಿ, ಬ್ರಿಟಿಷರ ವಿರುದ್ಧ ಭಾರತದಾದ್ಯಂತ ವ್ಯಾಪಿಸುತ್ತಿದ್ದ ಅಹಿಂಸಾತ್ಮಕ ಅಸಹಕಾರ ಚಳುವಳಿಯ ಘೋಷಣೆಗಳು ಅವರ ಮೇಲೆ ಅತಿದೊಡ್ಡ ಪ್ರಭಾವ ಬೀರಿದವು. ಪರಿಣಾಮವಾಗಿ ಅವರು ಎಲ್ಲಾ ಐಷಾರಾಮಗಳನ್ನೂ ತ್ಯಜಿಸಿ ಸಂಪೂರ್ಣ ಸ್ವದೇಶಿಯಾದರು.

ಅಮೆರಿಕದಲ್ಲಿ 7 ವರ್ಷ ವಿದ್ಯಾಭ್ಯಾಸ ಮಾಡುವಾಗ, ಅವರು ಮಾರ್ಕ್ಸ್ ವಾದದತ್ತ ಆಕರ್ಷಿತರಾದರು. ಆ ಹೊತ್ತಿಗೆ, ಭಾರತದ ಎಲ್ಲ ಸಮಸ್ಯೆಗಳಿಗೂ ಪರಿಹಾರ ಮಾರ್ಕ್ಸ್ ವಾದದಲ್ಲಿಯೇ ಇದೆ ಎಂದು ಅವರು ನಂಬಿದ್ದರು. ಆದರೆ, ಭಾರತಕ್ಕೆ ಮರಳಿ, ಮಾರ್ಕ್ಸ್ ವಾದದ ಸಿದ್ಧಾಂತವನ್ನು ಭಾರತೀಯ ಸನ್ನಿವೇಶಕ್ಕೆ ಅಳವಡಿಸುವ ಕಾರ್ಯಸಾಧ್ಯತೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಮೇಲೆ, ಪ್ರಜಾಸತ್ತಾತ್ಮಕ ಸಮಾಜವಾದ ಮತ್ತು ಸರ್ವೋದಯವೇ ನಮ್ಮ ದೇಶದ ಸಮಸ್ಯೆಗಳಿಗೆ ನಿಜವಾದ ಔಷಧ ಎಂಬ ಅರಿವು ಅವರಿಗಾಯಿತು.

ಜೆ.ಪಿ.ಯವರ ಈ ಪ್ರಾಯೋಗಿಕ ಮತ್ತು ದೂರದೃಷ್ಟಿಯ ಚಿಂತನೆ, ಅವರ ವಿವೇಕ ಮತ್ತು ರಾಜನೀತಿಜ್ಞತೆಗೆ ಸಾಕ್ಷಿಯಾಗಿದೆ. ಅವರ ಜೀವನದ ಈ ನಿರ್ಣಾಯಕ ಘಟ್ಟವು, ಅವರು ಕೇವಲ ಸಿದ್ಧಾಂತಗಳ ಬೆಂಬಲಿಗರಾಗಿರಲಿಲ್ಲ, ಬದಲಿಗೆ ಸಮಾಜದಲ್ಲಿ ಪರಿವರ್ತನೆ ಮತ್ತು ನೈಜ ಬದಲಾವಣೆಯನ್ನು ತರಲು ಬಯಸಿದ ನಿಜವಾದ ನಾಯಕರಾಗಿದ್ದರು ಎಂಬುದನ್ನು ಸ್ಪಷ್ಟವಾಗಿ ಸಾರುತ್ತದೆ.

ಭೂದಾನ ಚಳವಳಿ: 1952ರಲ್ಲಿ, ವಿನೋಬಾ ಭಾವೆಯವರ ಭೂದಾನ ಚಳವಳಿಯನ್ನು ಸರ್ವೋದಯ ತತ್ವದೊಂದಿಗೆ ಸಂಯೋಜಿಸಿದರೆ, ಭಾರತದ ಜ್ವಲಂತ ಭೂಸಮಸ್ಯೆಗೆ ವಾಸ್ತವಿಕ ಪರಿಹಾರ ಸಿಗಲಿದೆ ಎಂಬುದನ್ನು ಅವರು ಮನಗಂಡರು. 1954-1973ರ ಅವಧಿಯಲ್ಲಿ ಅವರು ಕೈಗೊಂಡ ಚಂಬಲ್ ಕಣಿವೆಯ ದರೋಡೆಕೋರರ ಪುನರ್ವಸತಿ ಮತ್ತು ಅಹಿಂಸಾತ್ಮಕ ಸಂಪೂರ್ಣ ಕ್ರಾಂತಿಯಂಥ ಉಪಕ್ರಮಗಳನ್ನು ಜಾಗತಿಕವಾಗಿ ಗುರುತಿಸಿ ಗೌರವಿಸಲಾಗಿದೆ.

ನಿರ್ದಿಷ್ಟವಾಗಿ ಭಾರತಕ್ಕೆ ಮತ್ತು ಸಾಮಾನ್ಯವಾಗಿ ಸಮಸ್ತ ಮಾನವಕುಲಕ್ಕೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮತ್ತು ಶಾಂತಿಯನ್ನು ತಂದುಕೊಡಬೇಕೆಂದು ಅವರು ನಿರಂತರವಾಗಿ ತುಡಿಯುತ್ತಿದ್ದರು.

ಅನುಭವದಿಂದ ಮೂಡಿದ ಶ್ರಮದ ಮಹತ್ವ: ಅವರ ಶ್ರಮದ ಘನತೆಯ ಪರಿಕಲ್ಪನೆಯು ಕೇವಲ ಪುಸ್ತಕಕ್ಕೆ ಸೀಮಿತವಾಗಿರಲಿಲ್ಲ. ಬದಲಾಗಿ ಅದು ಸ್ವಂತ ಅನುಭವದಿಂದ ಬಂದಿತ್ತು. ಅಮೆರಿಕದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಅವರು ಕಲಿಯುತ್ತಲೇ ಗಳಿಸಬೇಕಾದ ಅನಿವಾರ್ಯತೆಗೆ ಸಿಲುಕಿದ್ದರು ಮತ್ತು ತಮ್ಮ ವಿದ್ಯಾಭ್ಯಾಸದ ಖರ್ಚಿಗಾಗಿ ಹಲವು ಬಗೆಯ ಸಣ್ಣಪುಟ್ಟ ಕೆಲಸಗಳನ್ನು ಮಾಡಿದ್ದರು. ಈ ಅನುಭವಗಳು ಕಾರ್ಮಿಕ ವರ್ಗದ ಸಮಸ್ಯೆಗಳ ಕುರಿತು ಅವರಿಗೆ ಆಳವಾದ ಒಳನೋಟವನ್ನು ನೀಡಿದವು. ಪ್ರಾಮಾಣಿಕ ದುಡಿಮೆಗೆ ಗೌರವ, ನ್ಯಾಯಯುತ ವೇತನ ಮತ್ತು ಮಾನವೀಯ ಕೆಲಸದ ವಾತಾವರಣ ಸಿಗಲೇಬೇಕು ಎಂಬ ಅವರ ನಂಬಿಕೆಯನ್ನು ಇದು ಮತ್ತಷ್ಟು ದೃಢಗೊಳಿಸಿತು.

ಕೈಗಾರಿಕಾ ಸಮಾಜಗಳು ಸಮೃದ್ಧಿಯಿಂದ ಮೆರೆಯುತ್ತಿದ್ದರೂ, ದುಡಿಯುವ ವರ್ಗ ಮಾತ್ರ ಬಡತನದಲ್ಲಿಯೇ ಬದುಕು ಸವೆಸುತ್ತಿರುವುದನ್ನು ಅವರು ಕಂಡರು. ಭಾರತಕ್ಕೆ ಮರಳಿದಾಗ, ನ್ಯಾಯಪರ ಸಮಾಜದ ಅಡಿಪಾಯವು ದುಡಿಯುವ ವರ್ಗದ ಕಲ್ಯಾಣದ ಮೇಲೆಯೇ ನಿಂತಿರಬೇಕು ಎಂಬ ದೃಢ ಸಂಕಲ್ಪವನ್ನು ತಮ್ಮೊಂದಿಗೆ ಹೊತ್ತು ತಂದರು.


ಇದಕ್ಕೆ ಪೂರಕವಾಗಿ, 1947ರಲ್ಲಿ ಅವರು 3 ಪ್ರಮುಖ ಅಖಿಲ ಭಾರತ ಕಾರ್ಮಿಕ ಸಂಘಟನೆಗಳಾದ ಅಖಿಲ ಭಾರತ ರೈಲ್ವೇಮೆ ಫೆಡರೇಷನ್, ಅಖಿಲ ಭಾರತ ಅಂಚೆ ಮತ್ತು ಟೆಲಿಗ್ರಾಫ್ ಕೆಳದರ್ಜೆ ನೌಕರರ ಸಂಘ ಹಾಗೂ ಅಖಿಲ ಭಾರತ ಆರ್ಡಿನೆ ಫ್ಯಾಕ್ಟರಿ ಕಾರ್ಮಿಕರ ಸಂಘಗಳ ಅಧ್ಯಕ್ಷರಾಗಿ ಆಯ್ಕೆಯಾದರು.

ಬಿಹಾರದ ಬರಗಾಲ: ಜಯಪ್ರಕಾಶರ ಕಾರ್ಯಯಾತ್ರೆ ಕೇವಲ ಸ್ವಾತಂತ್ರ್ಯ ಚಳವಳಿಗೆ ಸೀಮಿತವಾಗಿರಲಿಲ್ಲ. ಅಧಿಕಾರದ ಆಸೆ ಅವರನ್ನು ಎಂದಿಗೂ ಸೆಳೆಯಲಿಲ್ಲ, ಬದಲಾಗಿ ಜನಸೇವೆಯಲ್ಲಿಯೇ ತೊಡಗಿಸಿಕೊಳ್ಳಲು ಅವರು ಸದಾ ತುಡಿಯುತ್ತಿದ್ದರು. 1960ರ ದಶಕದಲ್ಲಿ, ಮುಂಗಾರು ಕೈಕೊಟ್ಟಿದ್ದರಿಂದ ಬಿಹಾರವು ಭೀಕರ ಬರಗಾಲದ ದವಡೆಗೆ ಸಿಲುಕಿತ್ತು. ಆಗ ಅವರು, ಭೂದಾನ ಚಳವಳಿಯ ತಮ್ಮ ಸಹವರ್ತಿಗಳು ಮತ್ತು ಅನುಯಾಯಿಗಳೊಂದಿಗೆ ಸೇರಿ, ಜನರ ಸಂಕಷ್ಟವನ್ನು ನೀಗಿಸಲು ಪರಿಹಾರ ಕಾರ್ಯಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು.

ಬಿಹಾರ ರಾಹತ್ ಸಮಿತಿಯ ಪರಿಹಾರ ಕಾರ್ಯದಲ್ಲಿ ತೊಡಗಿದ್ದಾಗ, ಆರೆಸ್ಸೆಸ್ ಸ್ವಯಂಸೇವಕರ ರಾಷ್ಟ್ರಸೇವಾ ಮನೋಭಾವವನ್ನು ಹತ್ತಿರದಿಂದ ಕಂಡು, ಅವರ ಕಾರ್ಯತತ್ಪರತೆಯಿಂದ ಪ್ರಭಾವಿತರಾದರು.

ನನ್ನ ವೈಯಕ್ತಿಕ ಅನುಭವ: ಬದುಕಿನ ಸರ್ವಕ್ಷೇತ್ರಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿರುವುದನ್ನು ಕಂಡ ಲೋಕನಾಯಕರಿಗೆ, ಭಾರತೀಯ ಸಮಾಜದ ಪುನರುಜ್ಜೀವನ-ಪುನರ್‌ನಿರ್ಮಾಣಕ್ಕೆ ಮುನ್ನುಡಿ ಬರೆಯಲು ದೇಶದ ಯುವಜನತೆಯನ್ನು ಪ್ರೇರೇಪಿಸಬೇಕಾದ ಅನಿವಾರ್ಯತೆ ಮನದಟ್ಟಾಯಿತು.













ಪ್ರಜಾಸತ್ತಾತ್ಮಕ ಸಂಸ್ಥೆಗಳ ಮೇಲೆಯೇ ಜನರು ನಂಬಿಕೆ ಕಳೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ, ಈ ಚಳವಳಿಯ ಮೂಲಕ ಅವರು ಪ್ರಜಾಪ್ರಭುತ್ವದ ಶಕ್ತಿಯಲ್ಲಿ ಜನರ ಭರವಸೆಯನ್ನು ಮರುಸ್ಥಾಪಿಸಿದರು. 1973ರಲ್ಲಿ ವಿನೋಬಾ ಭಾವೆಯವರ ಪವನಾರ್ ಆಶ್ರಮದಿಂದ ಅವರು ಸಂಪೂರ್ಣ ಕ್ರಾಂತಿಯ ಕಹಳೆ ಮೊಳಗಿಸಿದರು. ಈ ಚಳವಳಿಯ ಅಂತಿಮ ಧ್ಯೇಯವು, ಮಾನವೀಯ ಮೌಲ್ಯಗಳನ್ನೊಳಗೊಂಡ ಆದರ್ಶ ಸಮಾಜವನ್ನು ನಿರ್ಮಿಸುವುದಾಗಿತ್ತು.

ಅಂದಿನ ರಾಜಕೀಯದಲ್ಲಿ ಆಳವಾಗಿ ಬೇರೂರಿದ್ದ ಭ್ರಷ್ಟಾಚಾರದ ವಿರುದ್ಧದ ಅವರ ಅವಿರತ ಧ್ವನಿಯು, ಪ್ರಜಾಪ್ರಭುತ್ವದಲ್ಲಿ ಜನಶಕ್ತಿಯನ್ನು ಮರುಸ್ಥಾಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿತು. ಜನರನ್ನು ಒಗ್ಗೂಡಿಸಿ, ಅವರ ಆಕ್ರೋಶಕ್ಕೆ ಒಂದು ದಿಕ್ಕು ತೋರಿ, 1977ರಲ್ಲಿ ಭಾರತದಲ್ಲಿ ಒಂದು ಹೊಸ ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸಿದ ಅವರ ಸಾಮರ್ಥ್ಯ ಅದ್ಭುತವಾದದ್ದು. ಪ್ರಜಾಪ್ರಭುತ್ವವೆಂದರೆ ಜನರ ಮೇಲೆ ಅಧಿಕಾರ ಚಲಾಯಿಸುವುದಲ್ಲ, ಅದು ಜನಸಾಮಾನ್ಯರ ಧ್ವನಿಯಾಗಬೇಕು ಎಂಬುದನ್ನು ಅವರು ಈ ಚಳವಳಿಯ ಸಾರಿದರು.

ನಾನು 19 ವರ್ಷದ ಯುವಕನಾಗಿದ್ದಾಗ, ಕೊಯಮತ್ತೂರಿನ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಸಂಪೂರ್ಣ ಕ್ರಾಂತಿ ಚಳವಳಿಯಲ್ಲಿ ಅಳಿಲುಸೇವೆ ಸಲ್ಲಿಸುವ ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ. ಭಾರತದ ಇತಿಹಾಸದ ಆ ನಿರ್ಣಾಯಕ ಘಟ್ಟದಲ್ಲಿ, ಈ ಚಳವಳಿಯಲ್ಲಿದ್ದಾಗ ಕಲಿತ ಪಾಠಗಳು, ನನ್ನನ್ನು ಒಬ್ಬ ಸಾಮಾನ್ಯ ಯುವಕನಿಂದ ಆತ್ಮವಿಶ್ವಾಸವುಳ್ಳ, ಸಾಮಾಜಿಕ ಪ್ರಜ್ಞೆಯುಳ್ಳ ನಾಯಕನಾಗಿ ಪರಿವರ್ತಿಸಿದವು. ಈ ಚಳವಳಿಯು ನನ್ನಲ್ಲಿ ಪ್ರಬುದ್ಧತೆ, ನೈತಿಕ ವಿವೇಚನೆ ಮತ್ತು ನಾಗರಿಕ ಪ್ರಜ್ಞೆಯಂಥ ನಾಯಕತ್ವದ ಗುಣಗಳನ್ನು ಪೋಷಿಸಿತು.

ಜಯಪ್ರಕಾಶ್‌ರನ್ನು ಇಂದು ನಾವು ಸ್ಮರಿಸುತ್ತಿರುವಾಗ, ಅವರ ಧರ್ಮಪತ್ನಿ ಶ್ರೀಮತಿ ಪ್ರಭಾವತಿ ದೇವಿಯವರ ಅಚಲ ಬೆಂಬಲವನ್ನು ಮರೆಯುವಂತಿಲ್ಲ. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳುವುದಕ್ಕಾಗಿ ಅವರು ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಿದ್ದರು, ತಮ್ಮ ಸಂಪೂರ್ಣ ಶಕ್ತಿಯನ್ನು ಗಾಂಧಿಯವರ ಆದರ್ಶಗಳನ್ನು ಪಾಲಿಸುವುದಕ್ಕಾಗಿಯೇ ಮುಡಿಪಾಗಿಟ್ಟಿದ್ದರು.

ಜಯಪ್ರಕಾಶರ ಪರಂಪರೆ: 1942ರ ಚಲೇಜಾವ್ ಚಳವಳಿಯಿಂದ ಹಿಡಿದು 1970ರ ದಶಕದಲ್ಲಿ ಅವರು ಮುನ್ನಡೆಸಿದ ಸಂಪೂರ್ಣ ಕ್ರಾಂತಿಯವರೆಗೆ, ಅವರನ್ನು ಸದಾ ಮುನ್ನಡೆಸಿದ ಏಕೈಕ ಚಾಲಶಕ್ತಿ ಎಂದರೆ ಅಚಲ ದೇಶಪ್ರೇಮ. ಸರಕಾರದಲ್ಲಿ ತಮಗೆ ಬೇಕಾದ ಯಾವುದೇ ಉನ್ನತ ಹುದ್ದೆಯನ್ನು ಅಲಂಕರಿಸುವ ಅವಕಾಶವಿದ್ದರೂ, ಅವರು ಅಧಿಕಾರದ ಆಸೆಗೆ ಬಲಿಯಾಗದೆ, ರಾಷ್ಟ್ರಸೇವೆಗಾಗಿಯೇ ಸಮರ್ಪಿಸಿಕೊಂಡಿದ್ದರು.

> ಜೆಪಿ ಎಂದೇ ಪ್ರೀತಿಯಿಂದ ಕರೆಸಿಕೊಳ್ಳುತ್ತಿದ್ದ ಅವರು, ತಮ್ಮ ಬಗ್ಗೆ ಎಂದಿಗೂ ಯೋಚಿಸದೆ, ದೇಶದ ಬಡವರನ್ನೇ ತಮ್ಮ ಮೊದಲ ಆದ್ಯತೆಯಾಗಿರಿಸಿಕೊಂಡಿದ್ದ ಒಬ್ಬ ಶ್ರೇಷ್ಠ ರಾಜನೀತಿಜ್ಞರಾಗಿದ್ದರು. ಅವರಿಗೆ ಲೋಕನಾಯಕ ಎಂಬ ಬಿರುದನ್ನು ಯಾವುದೇ ಮಹಾನ್ ವ್ಯಕ್ತಿ ನೀಡಿಲ್ಲ - ಇದನ್ನು 1974ರ ಜೂನ್ 5ರಂದು ಪಟನಾದ ಗಾಂಧಿ ಮೈದಾನದಲ್ಲಿ ಒಟ್ಟುಗೂಡಿದ್ದ ಲಕ್ಷಾಂತರ ಭಾರತೀಯರು ಪ್ರೀತಿಯಿಂದ ನೀಡಿದರು.

ಬಡವರು, ದೀನದಲಿತರ ಉನ್ನತಿಗಾಗಿ ಅವರಲ್ಲಿದ್ದ ತ್ಯಾಗ ಮನೋಭಾವ ಅನನ್ಯವಾದುದು. ಸವಾಲುಗಳು ಎಷ್ಟೇ ದುಸ್ತರವಾಗಿದ್ದರೂ ಜನಶಕ್ತಿಯು ಎಂಥ ಬದಲಾವಣೆಯನ್ನು ಬೇಕಾದರೂ ತರಬಲ್ಲದು ಎಂಬುದಕ್ಕೆ ಜಯಪ್ರಕಾಶರ ಜೀವನ-ಬೋಧನೆಗಳೇ ಸಾಕ್ಷಿ. ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ರಕ್ಷಿಸುವುದಕ್ಕೆ, ಸಮಾನತೆ, ನ್ಯಾಯ ಹಾಗೂ ಶಾಂತಿಯಿರುವ ಸಮಾಜದ ನಿರ್ಮಾಣಕ್ಕೆ ಶ್ರಮಿಸುವುದಕ್ಕೆ ಅವರ ಬೋಧನೆಗಳು ಒತ್ತುನೀಡುತ್ತವೆ.

ಸಾಮಾಜಿಕ ಮತ್ತು ಆರ್ಥಿಕ ನ್ಯಾಯದಿಂದ ರಾಜಕೀಯ ಸ್ವಾತಂತ್ರ್ಯವನ್ನು ಬೇರ್ಪಡಿಸಲಾಗದು ಎಂದು ಘೋಷಿಸಿದ ಅವರು ಒಬ್ಬ ದಾರ್ಶನಿಕ ನಾಯಕರಾಗಿದ್ದರು. ಅವರ ಬೋಧನೆಗಳು ರಾಜಕಾರಣಿಗಳಿಗಷ್ಟೇ ಅಲ್ಲ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮತ್ತು ಸಮಾನತೆಯ ಆದರ್ಶಗಳಲ್ಲಿ ನಂಬಿಕೆಯಿಟ್ಟ ಪ್ರತಿಯೊಬ್ಬ ಭಾರತೀಯರಿಗೂ ಸ್ಫೂರ್ತಿಯ ಸೆಲೆಯಾಗಿವೆ.

ಕ್ರಾಂತಿಯನ್ನು ಸಾಮಾನ್ಯವಾಗಿ ಹಿಂಸೆಯ ಪ್ರತಿರೂಪ ಎಂದೇ ಭಾವಿಸಲಾಗುತ್ತದೆ. ಆದರೆ, ಜಯಪ್ರಕಾಶರು ಮುನ್ನಡೆಸಿದ ಸಂಪೂರ್ಣ ಕ್ರಾಂತಿಯು ಅಹಿಂಸಾ ಮಾರ್ಗವನ್ನು ಆಧರಿಸಿತ್ತು. ಅಹಿಂಸಾತ್ಮಕ ಜನಾಂದೋಲನದ ಮೂಲಕವೇ, ವ್ಯವಸ್ಥೆ ಮತ್ತು ಸಮಾಜದೊಳಗೆ ಮಾನವೀಯತೆ ಹಾಗೂ ನೈತಿಕ ಮೌಲ್ಯಗಳ ಮೇಲೆ ಪ್ರಗತಿ ಹೊಂದುವಂಥ ಭಾರತದ ನಿರ್ಮಾಣಕ್ಕೆ ಅವರು ಅಡಿಪಾಯ ಹಾಕಿದರು. ಈ ಮಹಾನ್ ಚೇತನವನ್ನು ಪ್ರೀತಿಯಿಂದ ಸ್ಮರಿಸುತ್ತಾ, ಗೌರವ ನಮನಗಳನ್ನು ಸಲ್ಲಿಸುವ ಈ ಸಂದರ್ಭದಲ್ಲಿ, ಅವರು ರಕ್ಷಿಸಿದ ಪ್ರಜಾಪ್ರಭುತ್ವದ ಜಾಗೃತ ಕಾವಲುಗಾರರಾಗಿರಲು ಪ್ರತಿಜ್ಞೆ ಮಾಡೋಣ.

ನಮ್ಮ ಆತ್ಮಸಾಕ್ಷಿಯನ್ನು ಜಾಗೃತಗೊಳಿಸಿ, ನಿಸ್ವಾರ್ಥ ಸೇವೆ ಮತ್ತು ಸತ್ಯದ ಮಾರ್ಗದಲ್ಲಿ ಭಾರತದ ಉನ್ನತಿಗಾಗಿ ಶ್ರಮಿಸುವುದೇ ನಾವು ಈ ದಿನದಂದು ಅವರಿಗೆ ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿ. ರಾಷ್ಟ್ರ ನಿರ್ಮಾಣಕ್ಕೆ ಅವರು ನೀಡಿದ ಕೊಡುಗೆಗಳಿಗಾಗಿ, ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಆದರೆ ಈ ಮಹಾನ್ ಚೇತನಕ್ಕೆ ಆ ಗೌರವವೂ ತೀರಾ ಕಡಿಮೆಯೆಂದೇ ನನ್ನ ಭಾವನೆ. ಏಕೆಂದರೆ, ಅವರು ನಿಜಕ್ಕೂ ಭಾರತ ರತ್ನವಾಗಿದ್ದರು.

## 12-10-2025 ದಿನ ಭವಿಷ್ಯ

**ಮೇಷ:** ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಹೆಚ್ಚು ಖರೀದಿಸಲು ಧಾವಿಸುವ ಮೊದಲು ನೀವು ಈಗಾಗಲೇ ಹೊಂದಿರುವುದನ್ನು ಬಳಸಿ. ಮನೆಯಲ್ಲಿನ ಕೆಲವು ಬದಲಾವಣೆಗಳು ನಿಮ್ಮನ್ನು ಭಾವುಕರನ್ನಾಗಿಸಬಹುದು- ಆದರೆ ನಿಮಗೆ ಮುಖ್ಯವಾದವರಿಗೆ ನೀವು ನಿಮ್ಮ ಭಾವನೆಗಳನ್ನು ಪರಿಣಾಮಕಾರಿಯಾಗಿ ಹೇಳಲು ಸಾಧ್ಯವಾಗುತ್ತದೆ.

**ವೃಷಭ:** ನೀವು ಭಯವೆಂಬ ದೈತ್ಯನ ಜೊತೆ ಹೋರಾಡಲು ಸಿದ್ಧವಾಗುತ್ತಿದ್ದ ಹಾಗೆ ನಿಮ್ಮ ಆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಿ. ಇಲ್ಲದಿದ್ದಲ್ಲಿ ನೀವು ಈ ರಾಕ್ಷಸನಿಗೆ ಒಬ್ಬ ಜಡ ಮತ್ತು ನಿಷ್ಕರುಣೆಯ ಬಲಿಯಾಗುತ್ತೀರಿ. ನಿಮ್ಮ ಸಂಗಾತಿಯ ಆರೋಗ್ಯದ ಚಿಂತೆ ಉಂಟುಮಾಡಬಹುದು ಮತ್ತು ಸ್ವಲ್ಪ ವೈದ್ಯಕೀಯ ಗಮನದ ಅಗತ್ಯವಿದೆ.

**ಮಿಥುನ:** ದೈಹಿಕ ಲಾಭಕ್ಕಾಗಿ ವಿಶೇಷವಾಗಿ ಮಾನಸಿಕ ದೃಢತೆಗಾಗಿ ಧ್ಯಾನ ಮತ್ತು ಯೋಗ ಪ್ರಾರಂಭಿಸಿ. ವಿವಾಹಿತ ಜನರು ಇಂದು ತಮ್ಮ ಮಕ್ಕಳ ಶಿಕ್ಷಣದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ನೆರೆಮನೆಯವರ ಜೊತೆಗಿನ ಜಗಳ ನಿಮ್ಮ ಮನಸ್ಸು ಕೆಡಿಸುತ್ತದೆ. ಆದರೆ ನಿಮ್ಮ ಸಹನೆ ಕಳೆದುಕೊಳ್ಳಬೇಡಿ, ಏಕೆಂದರೆ ಇದು ಬೆಂಕಿಗೆ ತುಪ್ಪ ಸುರಿಯುತ್ತದೆ.

**ಕರ್ಕಾಟಕ:** ನೀವು ಇತರರೊಡನೆ ನಿಮ್ಮ ಖುಷಿಯ ಕ್ಷಣಗಳನ್ನು ಹಂಚಿಕೊಳ್ಳುತ್ತಿದ್ದಂತೆ ನಿಮ್ಮ ಆರೋಗ್ಯ ಅರಳುತ್ತದೆ. ಆದರೆ ಇದನ್ನು ನಿರ್ಲಕ್ಷಿಸುವುದು ನಿಮಗೆ ತೊಂದರೆ ತರುತ್ತದೆ. ನೀವು ನಿಮ್ಮ ತಂತ್ರಗಳನ್ನು ಅಳವಡಿಸಿದಲ್ಲಿ ಇಂದು ಸ್ವಲ್ಪ ಹೆಚ್ಚುವರಿ ಹಣ ಸಂಪಾದಿಸುತ್ತೀರಿ. ನೀವು ಭಾವಿಸಿದ್ದಕ್ಕಿಂತ ಹೆಚ್ಚಾಗಿ ನಿಮ್ಮ ಸಹೋದರರು ನಿಮ್ಮ ಅಗತ್ಯಗಳಿಗೆ ಬೆಂಬಲ ನೀಡುತ್ತಾರೆ.

**ಸಿಂಹ:** ನಿಮ್ಮ ದಯಾಳು ಪ್ರಕೃತಿ ಇಂದು ಅನೇಕ ಸಂತೋಷದ ಕ್ಷಣಗಳನ್ನು ತರುತ್ತದೆ. ವಿದೇಶದಲ್ಲಿ ಮಲಗಿರುವ ನಿಮ್ಮ ಭೂಮಿಯನ್ನು ಇಂದು ಉತ್ತಮ ಬೆಲೆಗೆ ಮಾರಾಟ ಮಾಡಬಹುದು, ಅದು ನಿಮಗೆ ಲಾಭದಾಯಕವಾಗಲಿದೆ. ಮಕ್ಕಳು ಮತ್ತು ಕುಟುಂಬ ಇಂದು ನಿಮ್ಮ ಕೇಂದ್ರಬಿಂದುವಾಗಿರುತ್ತದೆ. ಇಂದು ನೀವು ಮಾನಸಿಕ ಶಾಂತಿಯನ್ನು ಅನುಭವಿಸುವಿರಿ.

**ಕನ್ಯಾ:** ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ತಪ್ಪದೆ ಮಾಡಿ. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ ಏಕೆಂದರೆ ನಿಮ್ಮ ಮೂಲಕ ಕೊಟ್ಟಿರುವ ಹಣ ಇಂದು ನಿಮಗೆ ಮರಳಿ ಸಿಗಬಹುದು. ಧೈರ್ಯದಿಂದ ಕೆಲಸ ಮಾಡಿದರೆ ಎಲ್ಲರ ಮನಸ್ಥಿತಿಯನ್ನು ಉತ್ತಮಗೊಳಿಸಬಹುದು.

**ತುಲಾ:** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಯಾರ ಹತ್ತಿರವಾದರು ಸಾಲವನ್ನು ತೆಗೆದುಕೊಂಡಿರುವ ಜನರು, ಇಂದು ಯಾವುದೇ ಪರಿಸ್ಥಿತಿಯಲ್ಲೂ ಸಾಲವನ್ನು ಮರುಪಾವತಿಸಬೇಕಾಗುತ್ತದೆ, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ದುರ್ಬಲವಾಗುತ್ತದೆ.

**ವೃಶ್ಚಿಕ:** ನೀವು ಒಂದು ದೀರ್ಘ ಪ್ರಯಾಣಕ್ಕೆ ಹೋಗಲು ಯೋಜನೆ ಹಾಕುತ್ತಿದ್ದ ಹಾಗೆ ನಿಮ್ಮ ಆರೋಗ್ಯ ಮತ್ತು ಇಂಧನ ಸಂರಕ್ಷಣೆಯ ಹವ್ಯಾಸ ನಿಮಗೆ ಅಪಾರವಾದ ಉಪಯೋಗವುಂಟುಮಾಡುತ್ತದೆ. ಬಿಡುವಿಲ್ಲದ ಕೆಲಸಗಳ ಹೊರತಾಗಿಯೂ ನೀವು ಆಯಾಸವನ್ನು ನಿಭಾಯಿಸಲು ಶಕ್ತರಾಗಿರುತ್ತೀರಿ.

**ಧನು:** ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು.

**ಮಕರ:** ಪ್ರವಾಸ-ಪಾರ್ಟಿಗಳು ಮತ್ತು ಆನಂದ ವಿಹಾರಗಳು ಇಂದು ನಿಮ್ಮನ್ನು ಉತ್ತಮ ಮೂಡ್‌ನಲ್ಲಿಡುತ್ತವೆ. ಇಂದು ಮಾಡಿದ ಹೂಡಿಕೆ ನಿಮ್ಮ ಅಭ್ಯುದಯ ಮತ್ತು ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತದೆ. ನಿಮ್ಮ ಅತಿಯಾದ ಜೀವನಶೈಲಿ ಮನೆಯಲ್ಲಿ ಆತಂಕ ಸೃಷ್ಟಿಸಬಹುದು ಆದ್ದರಿಂದ ತಡರಾತ್ರಿಯನ್ನು ಹಾಗೂ ಇತರರ ಮೇಲೆ ಬಹಳ ಖರ್ಚು ಮಾಡುವುದನ್ನು ತಪ್ಪಿಸಿ.

**ಕುಂಭ:** ಕೋಪದ ಬಡಿದೆಬ್ಬಿಸುವಿಕೆ ವಾದ ಮತ್ತು ಘರ್ಷಣೆಗೆ ಕಾರಣವಾಗಬಹುದು. ಕೆಲವು ದುಃಖದ ಸಮಯದಲ್ಲಿ ನೀವು ಸಂಗ್ರಹಿಸುವ ಹಣ ಮಾತ್ರ ನಿಮ್ಮ ಕೆಲಸಕ್ಕೆ ಬರುತ್ತದೆ ಎಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಿ. ಆದ್ದರಿಂದ ಇಂದು ಹಣವನ್ನು ಸಂಗ್ರಹಿಸುವ ಬಗ್ಗೆ ಆಲೋಚಿಸಿ. ಸಂಬಂಧಿಗಳು / ಸ್ನೇಹಿತರು ಒಂದು ಅದ್ಭುತ ಸಂಜೆಗಾಗಿ ಬರುತ್ತಾರೆ.

**ಮೀನ:** ಅದೃಷ್ಟವನ್ನು ಅವಲಂಬಿಸಬೇಡಿ, ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದೆ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ, ಆದರೆ ಇದರೊಂದಿಗೆ ನೀವು ದಾನವನ್ನು ಸಹ ಮಾಡಬೇಕು ಏಕೆಂದರೆ ಇದರಿಂದ ನಿಮಗೆ ಮಾನಸಿಕ ಶಾಂತಿ ಸಿಗುತ್ತದೆ. ನೀವು ರುಚಿಕರವಾದ ಆಹಾರವನ್ನು ಆನಂದಿಸಬಹುದು.

## ಅಡುಗೆ : ರುಚಿ - ತೃಪ್ತಿ - ಸಮಾನತೆ




ಅಡುಗೆ ಅನುಭವದ ಮೂಸೆಯೊಳಗೆ ಬೆಳೆದು ಬರುವ ವಿಜ್ಞಾನವೆಂಬ ಕಲೆ. ಮನುಷ್ಯ ಬದುಕಿನ ಜೀವದ್ರವ್ಯಗಳಲ್ಲಿ ಗಾಳಿ ಮತ್ತು ನೀರಿನ ನಂತರ ಆಹಾರವೇ ಅತ್ಯಂತ ಪ್ರಮುಖವಾದದ್ದು. ಹಿಂದೆ ಅನಾಗರಿಕ ಮಾನವ ಗೆಡ್ಡೆ, ಗೆಣಸು, ಹಣ್ಣು, ಹಂಪಲು, ಪ್ರಾಣಿ, ಪಕ್ಷಿ, ಕೀಟಗಳನ್ನು ತಿಂದು ಬದುಕುತ್ತಿದ್ದ. ದಿನಗಳೆದಂತೆ ಮನುಷ್ಯನ ಅನಿವಾರ್ಯತೆಗಳು, ಅಗತ್ಯಗಳು, ಆಸೆಗಳು, ದುರಾಸೆಗಳು ಜೊತೆಗೆ ಆತನ ನಾಲಿಗೆ ರುಚಿ ಬಯಸತೊಡಗಿತು ಮತ್ತು ಅದಕ್ಕೆ ತಕ್ಕಂತೆ ಅವಕಾಶಗಳು ಒದಗಿ ಬಂದವು. ನಿರ್ದಿಷ್ಟವಾಗಿ ಹಣ್ಣು, ತರಕಾರಿ, ಪ್ರಾಣಿ, ಪಕ್ಷಿಗಳನ್ನು ಅನುಭವದ ಆಧಾರದ ಮೇಲೆಯೇ ಗುರುತಿಸಿ ಆಹಾರವನ್ನಾಗಿ ಉಪಯೋಗಿಸ ತೊಡಗಿದ. ಕೊನೆಗೆ ಈ 2025 ರಲ್ಲಿ ನಿಂತು ಹಿಂತಿರುಗಿ ನೋಡಿದಾಗ ಆಹಾರಗಳ ವೈವಿಧ್ಯತೆ ಕಲ್ಪನೆಗೂ ಮೀರಿ ಬೆಳೆದಿದೆ.

ದಕ್ಷಿಣದಿಂದ ಉತ್ತರದವರೆಗೂ, ಪೂರ್ವದಿಂದ ಪಶ್ಚಿಮದವರೆಗೂ ಇಡೀ ದೇಶದ ಆಹಾರ ವಿಭಿನ್ನತೆ ಚಕಿತಗೊಳಿಸುತ್ತದೆ. ನಮ್ಮ ದೇಶದಲ್ಲಿ ಹಳ್ಳಿ, ಪಟ್ಟಣ, ನಗರ, ಮೆಟ್ರೋಪಾಲಿಟನ್ ಸಿಟಿ ಸೇರಿ ಹೆಜ್ಜೆ ಹೆಜ್ಜೆಗೂ ಸಣ್ಣ ಗೂಡಂಗಡಿಯಿಂದ ಸೆವೆನ್ ಸ್ಟಾರ್ ಹೋಟೆಲ್ ಗಳವರೆಗೆ ವ್ಯಾಪಕವಾಗಿ ಹಬ್ಬಿಕೊಂಡಿದೆ. ಬಹುಶಃ ದೇಶದ ಜನಸಂಖ್ಯೆಯ ಶೇಕಡಾ 20% ಗೂ ಹೆಚ್ಚು ಜನ ಅಥವಾ ಅದಕ್ಕಿಂತ ಹೆಚ್ಚು ಆಹಾರ ಮತ್ತು ಅದಕ್ಕೆ ಸಂಬಂಧಿಸಿದ ವ್ಯಾಪಾರ, ವ್ಯವಹಾರ ಮತ್ತು ಪೂರಕ ಉದ್ಯಮಗಳಲ್ಲಿ ತೊಡಗಿಸಿಕೊಂಡು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಅದರಲ್ಲೂ ಅನೇಕ ಕಡೆ ಸಂಜೆಯ ಸಮಯದಲ್ಲಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಹೋಟೆಲ್‌ಗಳ ಮುಂದೆ ಸಾಕಷ್ಟು ಜನ ಸರತಿಯ ಸಾಲಿನಲ್ಲಿ ನಿಂತಿರುತ್ತಾರೆ. ಪ್ರವಾಸಿ ಸ್ಥಳಗಳಲ್ಲಿ ಆಹಾರದ ಬೇಡಿಕೆಯನ್ನು ಪೂರೈಸುವುದೇ ಕಷ್ಟ. ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಅಥವಾ ಮಧ್ಯಪ್ರಾಚ್ಯದ ದೇಶಗಳಲ್ಲಿ ಅಥವಾ ಆಫ್ರಿಕನ್ ದೇಶಗಳಲ್ಲಿ ನನಗನಿಸಿದಂತೆ ಇಷ್ಟೊಂದು ವೈವಿಧ್ಯತೆ ಕಾಣುವುದಿಲ್ಲ. ಚೀನಾ ಜಪಾನ್ ನಲ್ಲಿ ಸಹ ವೈವಿಧ್ಯತೆ ಇದ್ದರೂ ಬಹುಶಃ ಭಾರತವನ್ನು ಮೀರಿಸಲಾರದೇನೋ. ಏಕೆಂದರೆ ಭಾರತದ ಉದ್ದಗಲಕ್ಕೂ ಪ್ರತಿ 100-150-200 ಕಿಲೋ ಮೀಟರ್ ಗಳ ಅಂತರಕ್ಕೆ ಆಹಾರ ಪದಾರ್ಥಗಳ ಅಡುಗೆಯ ರೀತಿ ನೀತಿ ಬದಲಾಗುತ್ತಾ ಸಾಗುತ್ತದೆ. ಅದನ್ನು ಪದಗಳಲ್ಲಿ ಹಿಡಿದಿಡಲು ಸಾಧ್ಯವೇ ಇಲ್ಲ. ಅಷ್ಟೊಂದು ವೈವಿಧ್ಯತೆ ಭಾರತದ ಆಹಾರದಲ್ಲಿ ಅಡಗಿದೆ.

ಇನ್ನು ಆಹಾರದ ಮತ್ತೊಂದು ಗುಣಲಕ್ಷಣ ರುಚಿ. ಸಾಂಪ್ರದಾಯಕವಾಗಿ ಆ ರುಚಿ ಭಾರತದಲ್ಲಿ ತಾಯಿಯ ಅಥವಾ ಹೆಣ್ಣಿನ ಕೈಗುಣವನ್ನು ಅವಲಂಬಿಸಿರುತ್ತದೆ ಎನ್ನುವ ಪ್ರತೀತಿಯಿದೆ. ವಾಸ್ತವವಾಗಿ ಮತ್ತು ಸಾಂಕೇತಿಕವಾಗಿ ಪ್ರೀತಿ ಅಭಿಮಾನದಿಂದ ಅದನ್ನು ಕೈಗುಣ ಎಂದು ಕರೆದರೂ ಅದೊಂದು ಅನುಭವದ ಮೂಸೆಯಲ್ಲಿ ಅಡಗಿದ ವೈಜ್ಞಾನಿಕ ಕಲೆ. ಆಹಾರ ಯಾವುದೇ ಇರಲಿ ಅದನ್ನು ತಯಾರಿಸುವ ವ್ಯಕ್ತಿಯ ಮತ್ತು ವಸ್ತುಗಳ ಸಮಯಪ್ರಜ್ಞೆ ಮತ್ತು ಅನುಭವ ಇಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ.

ಒಂದು ಆಹಾರ ತಯಾರಿಸಲು ನೀವು ಬಳಸುವ ಆಹಾರ ಪದಾರ್ಥಗಳ ಗುಣಮಟ್ಟ, ಮಣ್ಣಿನ ಸೊಗಡು ಅಥವಾ ಫಲವತ್ತತೆ, ನೀರು, ಅದನ್ನು ಬೇಯಿಸುವ ಒಲೆ ಅಂದರೆ ಸೌದೆ, ಗ್ಯಾಸ್ ಸ್ಟವ್, ವಿದ್ಯುತ್ ಸ್ಟವ್ ಮುಂತಾದ ಬಿಸಿ ಮಾಡುವ ಸಲಕರಣೆಗಳು, ಅಡುಗೆಯ ಸಂದರ್ಭದಲ್ಲಿ ವಿವಿಧ ಆಹಾರ ಪದಾರ್ಥಗಳ ಸರಿಯಾದ ಸಮಯಕ್ಕೆ ಮಿಶ್ರಣ, ಅದಕ್ಕೆ ಕೊಡಬೇಕಾದ ಬೆಂಕಿಯ ಪ್ರಮಾಣ, ಪೂರಕ ಪದಾರ್ಥಗಳು ಸೇರಿಸಬೇಕಾದ ಸಮಯ, ಬೇಯಲು ಅಥವಾ ರೂಪಗೊಳ್ಳಲು ನಿಗದಿಯಾದ ಸಮಯ, ಎಲ್ಲದರ ಒಟ್ಟು ಸಮ್ಮಿಶ್ರಣ ಹೀಗೆ ಅನೇಕ ಅಂಶಗಳು ಅಡಕವಾಗಿರುತ್ತವೆ.



ಸಾಮಾನ್ಯವಾಗಿ ಮನೆಗಳಲ್ಲಿ ಅಡುಗೆ ಮಾಡುವ ವ್ಯಕ್ತಿ ಮುಖ್ಯವಾಗಿ ಮಹಿಳೆ ಅದನ್ನು ಅತ್ಯಂತ ಸಹಜವಾಗಿಯೇ ನಿರ್ವಹಿಸುತ್ತಾರೆ. (ಇತ್ತೀಚೆಗೆ ಅಡುಗೆ ಮಾಡುವ ಪುರುಷರ ಸಂಖ್ಯೆಯೂ ಹೆಚ್ಚಾಗಿದೆ. ಅದು ಬೇರೆ ವಿಷಯ.) ಅದರ ಆಧಾರದ ಮೇಲೆ ಅಡುಗೆಯ ರುಚಿ ನಿರ್ಧಾರವಾಗಿರುತ್ತದೆ. ಹಾಗೆಂದು ನಾವು ಸಹ ಅಷ್ಟೇ ವಸ್ತುಗಳನ್ನ ಉಪಯೋಗಿಸಿಕೊಂಡು ಅದೇ ರೀತಿಯ ಅಡುಗೆ ಮಾಡಿದರೆ ರುಚಿಯಲ್ಲಿ ಖಂಡಿತ ವ್ಯತ್ಯಾಸವಿರುತ್ತದೆ. ನೂರಕ್ಕೆ ನೂರರಷ್ಟು ತಾಯಿ ಅಥವಾ ಮನೆಯ ಹೆಣ್ಣುಮಗಳು ತಯಾರು ಮಾಡಿದ ರುಚಿ ನಮಗೆ ಸಾಧ್ಯವೇ ಇಲ್ಲ. ಏಕೆಂದರೆ ಅದೊಂದು ಗಣಿತ ವಿಜ್ಞಾನ ಮಾತ್ರವಲ್ಲ ಅದರೊಳಗಡೆ ಇರುವ ಅನುಭವದ ಕಲೆಯೂ ಮುಖ್ಯವಾಗುತ್ತದೆ.

ಅಡುಗೆಯ ರುಚಿ ತಿನ್ನುವವರ ವಯಸ್ಸಿನ ಆಧಾರದ ಮೇಲೆ ಸಹ ಬದಲಾಗುತ್ತಿರುತ್ತದೆ. ನಮ್ಮ ನಾಲಿಗೆ ವಯಸ್ಸಾದಂತೆ ರುಚಿಯನ್ನು ಗ್ರಹಿಸುವ ಸಾಮರ್ಥ್ಯವನ್ನು ನಿಧಾನವಾಗಿ ಸ್ವಲ್ಪ ಸ್ವಲ್ಪ ಮಟ್ಟಿಗೆ ಕಳೆದುಕೊಳ್ಳುತ್ತಾ ಹೋಗುತ್ತದೆ. ಆದ್ದರಿಂದಲೇ ಎಲ್ಲರಿಗೂ ಚಿಕ್ಕ ವಯಸ್ಸಿನಲ್ಲಿ ತಾಯಿ ಮಾಡಿದ ಅಡುಗೆಯ ರುಚಿ ಜೀವನ ಪೂರ್ತಿ ಕಾಡುತ್ತಲೇ ಇರುತ್ತದೆ. ಊಟ ಮಾಡುವ ಸಮಯ, ಸಂದರ್ಭವು ಸಹ ರುಚಿಯ ಮೇಲೆ ಪರಿಣಾಮ ಬೀರುತ್ತದೆ. ಹಸಿವಾದಾಗ ಊಟ ಮಾಡಿದರೆ ಅದರ ರುಚಿಯೇ ಬೇರೆ. ಆಹಾರ ಸೇವಿಸುವಾಗ ನಮ್ಮ ಮನಸ್ಥಿತಿಯೂ ಕೂಡ ಮುಖ್ಯವಾಗಿರುತ್ತದೆ. ಮನಸ್ಸು ಸಂತೋಷದಿಂದ ಇರುವಾಗಲೂ ಆಹಾರದ ರುಚಿ ಹೆಚ್ಚಾಗುತ್ತದೆ. ಮನೆಯವರೊಂದಿಗೆ ಊಟ ಮಾಡಿದಾಗ ಅದು ನೀಡುವ ತೃಪ್ತಿಯೇ ಬೇರೆ.

ಆಹಾರದ ರುಚಿಯ ಗ್ರಹಿಕೆಯಲ್ಲೂ ಸಹ ಸಾಕಷ್ಟು ವ್ಯತ್ಯಾಸಗಳಾಗುತ್ತವೆ. ಅಂದರೆ ಆಹಾರ ತಿನ್ನುವಾಗ ರುಚಿಯಾಗಿದ್ದು ಊಟವಾದ ನಂತರ ಒಂದು ರೀತಿಯ ಅಸಮಾಧಾನ ಅಥವಾ ಅತೃಪ್ತಿ ಅಥವಾ ಹುಳಿತೇಗು ಉಂಟು ಮಾಡಿದರೆ ಆ ಆಹಾರದ ಗುಣಮಟ್ಟ ತಾತ್ಕಾಲಿಕ ರುಚಿಯನ್ನು ಮಾತ್ರ ನೀಡುತ್ತದೆ. ದೀರ್ಘಕಾಲದಲ್ಲಿ ಆ ರೀತಿಯ ಆಹಾರ ಹೆಚ್ಚು ಸೇವಿಸಲಾಗದು ಮತ್ತು ಅದು ಶಾಶ್ವತ ರುಚಿ ಹೊಂದಿರುವುದಿಲ್ಲ.

ಇನ್ನೂ ಕೆಲವು ಆಹಾರ ಪದಾರ್ಥಗಳನ್ನು ತಿನ್ನುವಾಗ ತಕ್ಷಣಕ್ಕೆ ಆ.. ಹಾ.. ಎನ್ನುವಷ್ಟು ರುಚಿ ನೀಡದಿದ್ದರೂ ತಿಂದ ನಂತರ ಆ ಆಹಾರದ ಬಗ್ಗೆ ತೃಪ್ತಿಯ ಭಾವ ಮೂಡುತ್ತದೆ. ಈ ವ್ಯತ್ಯಾಸವನ್ನು ನಾವು ಗಮನಿಸಬಹುದು. ಸಾಮಾನ್ಯವಾಗಿ ಈ ಆಧುನಿಕ ಕಾಲದಲ್ಲಿ ನಾವು ಮನೆ ಊಟವನ್ನು ಜೀವನಪೂರ್ತಿ ಬಹುತೇಕ ಒಂದೇ ಮನಸ್ಥಿತಿಯಲ್ಲಿ ಒಂದೇ ಆಸಕ್ತಿಯಿಂದ ತಿನ್ನಬಹುದು. ಆದರೆ ಹೋಟೆಲ್ ಊಟವನ್ನು ನಿರಂತರವಾಗಿ, ತಿಂಗಳಾನುಗಟ್ಟಲೆ ಸೇವಿಸುವುದು ತುಂಬಾ ಕಷ್ಟ, ಕೆಲವೊಮ್ಮೆ ವಾಕರಿಕೆ ಬರುತ್ತದೆ. ಏಕೆಂದರೆ ಅಲ್ಲೂ ಸಹಜತೆ ಮತ್ತು ಕೃತಕತೆ ಹಾಗೂ ವ್ಯಾಪಾರದ ಉದ್ದೇಶ, ಜೊತೆಗೆ ನೈಜ ಗುಣಮಟ್ಟದ ಕೊರತೆ ಸ್ಪಷ್ಟವಾಗಿ ಗೋಚರಿಸುತ್ತದೆ.

ಹಸಿವಿನಿಂದ ಅಜೀರ್ಣದವರೆಗೆ ಆಹಾರ ನಮ್ಮೆಲ್ಲರ ಬದುಕಿನ ಭಾಗವಾಗಿ ಮುಂದುವರಿಯುತ್ತಲೇ ಇದೆ. ಆಹಾರ ಸೇವನೆಯ ರುಚಿ ಮತ್ತು ತೃಪ್ತಿ ಇಡೀ ಜಗತ್ತಿನಲ್ಲಿ ಏಕ ಪ್ರಕಾರವಾದುದು. ಅದಕ್ಕೆ ಜಾತಿ, ಧರ್ಮ, ಪ್ರದೇಶ, ಭಾಷೆ, ಹಣ, ಅಧಿಕಾರ, ಅಂತಸ್ತು ಏನೂ ಇರುವುದಿಲ್ಲ, ಪ್ರತಿಯೊಬ್ಬ ವ್ಯಕ್ತಿಯ ಸಮಾನತೆ ಈ ಊಟ ನೀಡುವ ತೃಪ್ತಿ - ಅತೃಪ್ತಿಯಲ್ಲಿ ಕಾಣಬಹುದು. ಒಬ್ಬೊಬ್ಬರಿಗೆ ಒಂದೊಂದು ಪದಾರ್ಥ ರುಚಿಯಾಗಬಹುದು. ಒಂದೊಂದು ಹಣ್ಣು ತರಕಾರಿ ರುಚಿ ಆಗಬಹುದು. ಶ್ರೀಮಂತರು ಇಷ್ಟ ಪಟ್ಟಿದ್ದನ್ನೇ ತಿನ್ನಬಹುದು. ಆದರೆ ಆಹಾರ ನೀಡುವ ತೃಪ್ತಿ ಮತ್ತು ಆಹಾರದ ರುಚಿ ಜಗತ್ತಿನ ಎಲ್ಲ ಜನರಿಗೂ ತನ್ನದೇ ವಿಶಿಷ್ಟ ಸಮಾನತೆಯನ್ನು ಉಂಟುಮಾಡುತ್ತದೆ. ಒಟ್ಟಿನಲ್ಲಿ ನೀವು ಯಾರೇ ಆಗಿರಿ ಏನೇ ಆಗಿರಿ ಆಹಾರ ಮಾತ್ರ ನಮ್ಮ ಬದುಕಿನ ಜೀವ ದ್ರವ್ಯವಾಗಿ ಸದಾ ನಮ್ಮೊಂದಿಗೆ ಇರುತ್ತದೆ. ಆದ್ದರಿಂದ ಆಹಾರವನ್ನು ವ್ಯರ್ಥ ಮಾಡಬೇಡಿ. ತಿನ್ನುವ ಹಕ್ಕಿದೆ - ಬಿಸಾಡು ಹಕ್ಕು ನಮಗಿಲ್ಲ.

**- ವಿವೇಕಾನಂದ. ಎಚ್. ಕೆ.,** ಬೆಂಗಳೂರು

## ಅಂಗವಿಕಲ ಮಕ್ಕಳ ಶಿಕ್ಷಣ: ಹಕ್ಕು, ಹಾದಿ ಮತ್ತು ಹೊಣೆಗಾರಿಕೆ



ಭಾರತದ ಸಂವಿಧಾನವು ಪ್ರತಿ ಮಕ್ಕಳಿಗೂ ಜಾತಿ, ಧರ್ಮ, ಲಿಂಗ ಅಥವಾ ವರ್ಗದ ವ್ಯತ್ಯಾಸವಿಲ್ಲದೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲ ಹಕ್ಕು ಎಂದು ಘೋಷಿಸುತ್ತದೆ. ಈ ಹಕ್ಕು ಶಾರೀರಿಕ, ಬೌದ್ಧಿಕ, ಮತ್ತು ಭಾವನಾತ್ಮಕ ಅಡಚಣೆಗಳನ್ನು ಅನುಭವಿಸುತ್ತಿರುವ ಅಂಗವಿಕಲ ಮಕ್ಕಳಿಗೂ ಹೋಲಿಕೆಯ ರೀತಿಯಲ್ಲಿ ಅನ್ವಯಿಸಬೇಕಾಗಿದೆ. ಆದರೆ ನೆಲೆನಿಂತಿರುವ ನೈಜತೆ ಬೇರೆಯೇ ಹೇಳುತ್ತದೆ.

ಸಮಾನತೆ ನೀಡುವ ಸಂವಿಧಾನ ವ್ಯತ್ಯಾಸ ತೋರುವ ನೈಜತೆ

ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆ 2009 (ಆರ್‌ಟಿಇ ಆಕ್ಟ್), ಅಂಗವಿಕಲರ ಹಕ್ಕುಗಳು ಕಾಯಿದೆ 2016 (ಆರ್‌ಪಿಡಬ್ಲ್ಯೂಡಿ ಆಕ್ಟ್) ಗಳು ಪ್ರತಿಯೊಬ್ಬ ಅಂಗವಿಕಲ ಮಗುವಿಗೆ ಸಮಾನತೆ ಮತ್ತು ಸೂಕ್ತ ಶಿಕ್ಷಣವನ್ನು ಒದಗಿಸಬೇಕು ಎಂದು ಹೇಳುತ್ತವೆ. ಯಾವುದೇ ಅಂಗವಿಕಲ ಮಗು ಕೇವಲ ತನ್ನ ವಿಕಲತೆಯ ಕಾರಣಕ್ಕೆ ಶಾಲೆಯಿಂದ ಹೊರಗಡೆಯಾಗಬಾರದು ಎಂಬುದು ಕಾನೂನು.

ಈ ಕಾಯಿದೆಗಳ ಫಲವಾಗಿ, ಕೆಲವೊಂದು ಕಡಿಮೆ ತೀವ್ರತೆಯ ಅಂಗವಿಕಲತೆ ಹೊಂದಿದ ಮಕ್ಕಳಿಗೆ ಸಾಮಾನ್ಯ ಶಾಲೆಗಳಲ್ಲಿ ಪ್ರವೇಶ ಲಭಿಸುತ್ತಿದೆ. ಹಲವೆಡೆ ವಿಶೇಷ ಶಿಕ್ಷಕರ ನೇಮಕಾತಿ, ಇಳಿಜಾರುಗಳು, ವಿಶೇಷ ಶೌಚಾಲಯಗಳು, ಮತ್ತು ಕಲಿಕಾ ಸಾಮಗ್ರಿಗಳ ವ್ಯವಸ್ಥೆ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಈ ಬೆಳವಣಿಗೆಗಳು ಪ್ರಶಂಸನೀಯವೂ ಹೌದು.

ಆದರೆ ತೀವ್ರ ವಿಕಲತೆ ಹೊಂದಿದ ಮಕ್ಕಳಿಗೆ?

ಸಾಮಾನ್ಯವಾಗಿ, ದೈಹಿಕ ವಿಕಲತೆ, ಅಂಧತೆ, ಕಲಿಕಾತೊಂದರೆ, ಅಥವಾ ಮೆದುಳುವಾತ ಇರುವ ಮಕ್ಕಳು ಇನ್ನುಮಟ್ಟಿಗೆ ಸಾಮಾನ್ಯ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಆದರೆ ತೀವ್ರತರದ ಬೌದ್ಧಿಕ ವಿಕಲತೆ, ಬಹುವಿಧದ ಅಂಗವಿಕಲತೆ, ಆಟಿಸಂ ಇತ್ಯಾದಿಗಳಂತಹ ಸಮಸ್ಯೆಗಳಿರುವ ಮಕ್ಕಳಿಗೆ ಇನ್ನೂ ಸಮನ್ವಯ ಶಿಕ್ಷಣ ಮರೀಚಿಕೆಯಾಗಿದೆ.

ಅವರಿಗೆ ಬೇಕಾದ ವಿಶೇಷ ಶಾಲೆಗಳಿವೆ ಆದರೆ ಹೆಚ್ಚಿನದು ಖಾಸಗಿಯಾಗಿವೆ. ಈ ಶಾಲೆಗಳು ಸಾಮಾನ್ಯವಾಗಿ ನಗರಗಳಲ್ಲಿ ಮಾತ್ರ ಲಭ್ಯ. ಗ್ರಾಮೀಣ ಭಾಗದ ಮಕ್ಕಳಿಗೆ ಮಾತ್ರವಲ್ಲ ನಗರ ಪ್ರದೇಶದ ಮಕ್ಕಳಿಗೂ ಸಹ ಈ ಶಾಲೆಗಳ ಪ್ರವೇಶ ಪಡೆಯುವಲ್ಲಿ ಹಲವಾರು ಸಮಸ್ಯೆಗಳು ನಮಗೆ ಎದ್ದು ಕಾಣುತ್ತವೆ.

- ★ ಸಾರಿಗೆ ವ್ಯವಸ್ಥೆಯ ಕೊರತೆ
- ★ ಆರ್ಥಿಕ ಬಡತನ
- ★ ಪೋಷಕರ ಅಜ್ಞಾನ ಅಥವಾ ನಿರ್ಲಕ್ಷ್ಯ
- ★ ಆರೋಗ್ಯದ ಸಮಸ್ಯೆಗಳು
- ★ ಸೂಕ್ತವಾಗಿ ತರಬೇತಿ ಪಡೆದ ವಿಶೇಷ ಶಿಕ್ಷಕರ ಕೊರತೆ

ಶಿಕ್ಷಣ ಎಂದರೆ ಅಕ್ಷರಚಿಂತನೆ ಮಾತ್ರವಲ್ಲ

ಒಂದು ಮಗು ಪಾಠ ಓದಿದರೆ ಮಾತ್ರವೇ ಅದು ಕಲಿತಂತಾಗುವುದಿಲ್ಲ. ಒಬ್ಬ ಪರಿಚಿತನನ್ನು ನೋಡಿ ನಗು ಬೀರುವ ಕ್ರಿಯೆ, ಸ್ವತಂತ್ರವಾಗಿ ಕೆಲಸ ನಿರ್ವಹಿಸುವ ಹಂಬಲ, ಸನ್ನೆ ಅಥವಾ ಬಾಯಿಮಾತು ಮೂಲಕ ತನ್ನ ಅವಶ್ಯಕತೆಗಳನ್ನು ತಿಳಿಸುವ ಶಕ್ತಿ ಇವುಗಳೂ ಸಹ ಅತ್ಯಗತ್ಯವಾದ ಕಲಿಕೆಗಳು.

ಇವುಗಳನ್ನು ಕಲಿಸಲು ಸಹಾನುಭೂತಿಯುಳ್ಳ ಶಿಕ್ಷಕರು, ಸಂಬಂಧಿತ ತರಬೇತಿಗಳು, ಮತ್ತು ಸಮರ್ಥವಾದ ಶಿಕ್ಷಣ ವ್ಯವಸ್ಥೆ ಅವಶ್ಯಕ. ಆದರೆ ಇದಕ್ಕೆ ಬೇಕಾದ ನೀತಿಯನ್ನು ರೂಪಿಸುವಲ್ಲಿ, ಪೋಷಕರು, ಶಿಕ್ಷಕರು, ಸರ್ಕಾರ, ಸ್ಥಳೀಯ ಸಂಸ್ಥೆಗಳು, ಅಂಗವಿಕಲ ಕ್ಷೇತ್ರದ ತಜ್ಞರು ಹಾಗೂ ಅಂಗವಿಕಲತೆ ಕ್ಷೇತ್ರದ ಕುರಿತು ಕಾಳಜಿಯುಳ್ಳವರು ಎಲ್ಲರೂ ಸೇರಿ ಚಿಂತನೆ ಮಾಡಬೇಕಾದ ಅಗತ್ಯವಿದೆ.

ಅಂಗವಿಕಲ ಮಕ್ಕಳ ಹಕ್ಕುಗಳ ಕಾವಲುಗಾರರು ನಾವೆಲ್ಲರೂ

ಇದು ಯಾರ ಒಬ್ಬರ ಹೊಣೆಗಾರಿಕೆಯಾಗಬಾರದು.

ಪೋಷಕರೊಬ್ಬರ ಗೌರವ ಅಥವಾ ಪ್ರತಿಷ್ಠೆ ಎಂಬ ಮುಸುಕುಕವಚದಲ್ಲಿ ಮಕ್ಕಳ ಹಕ್ಕುಗಳನ್ನು ಮುಚ್ಚಿಹಾಕುವುದನ್ನು ನಿಲ್ಲಿಸಬೇಕು. ಅಂಗವಿಕಲ ಮಗು ಎಂದರೆ ಅಪೂರ್ಣ ಮನುಷ್ಯ ಎಂಬ ಕಲ್ಪನೆಗೆ ಸ್ಥಳವಿಲ್ಲ.

ಅವರಿಗೂ ಇತರ ಮಗುವಿನಂತೆ ಪ್ರೀತಿ, ಗೌರವ ಮತ್ತು ಶಿಕ್ಷಣದ ಹಕ್ಕು ಸಿಗಬೇಕು.

ಪೋಷಕರು ತಮ್ಮ ಮಕ್ಕಳ ಹಕ್ಕುಗಳಿಗಾಗಿ ಧ್ವನಿಯಾಗಬೇಕು, ಆದರೆ ಅದು ಅವರ ಹೊಣೆಗಾರಿಕೆಗೆ ಸೀಮಿತವಲ್ಲ ಇದು ನಮ್ಮ, ನಿಮ್ಮ, ಎಲ್ಲರ ಸಾಮಾಜಿಕ ಕರ್ತವ್ಯ.

ಅವರ ಹಕ್ಕುಗಳು ಕೇವಲ ಪುಸ್ತಕದಲ್ಲಿ ಬರೆದಿಟ್ಟ ದಾಖಲೆಗಳಾಗಬಾರದು. ಸಮಾನತೆ ಎಂಬ ಶಬ್ದವನ್ನು ಕೇವಲ ಧ್ವನಿಯೆಂದು ನಿಲ್ಲಿಸದೆ, ನೈಜ ರೀತಿಯಲ್ಲಿ ಪ್ರತಿದಿನದ ಜೀವನದಲ್ಲಿ ಅನ್ವಯಿಸುವ ಹಾದಿಯನ್ನು ನಾವು ನಿರ್ಮಿಸಬೇಕಾಗಿದೆ. ಅಂಗವಿಕಲ ಮಕ್ಕಳಿಗೂ ಕನಸುಗಳಿರುತ್ತವೆ ಅವರನ್ನು ಸಾಧಿಸಲು ಸಹಾಯಹಸ್ತ ಬೇಕಾಗಿರುವಷ್ಟೇ.

**- ರಶ್ಮಿ** ಎಂ ಟಿ

## ಈ ಮನೆ

ದೊಡ್ಡದಾದ ಒಂದು ಊರಿನಲ್ಲಿ ಎರಡು ಮನೆಗಳನ್ನು ಜನರು ಕಟ್ಟಿದ್ದಾರೆ. ತುಂಬಾ ಅದ್ಭುತವಾದ ಮನೆ ಆ ಎರಡು ಮನೆಗಳಿಗೆ ಬಂದು ಹೋಗುವವರಿಗೆ ಅವರು ಜೀವನದಲ್ಲಿ ಬಯಸಿದಂತಹ ಎಲ್ಲಾ ಖುಷಿಗಳು ಸಿಕ್ತಾ ಇತ್ತು ನೋವುಗಳು ಮಾಯವಾಗ್ತಾ ಇತ್ತು. ಅದು ಎಲ್ಲರ ಮನೆಯ ಆಗಿತ್ತು. ಆ ಊರಿನ ಸರಕಾರಕ್ಕೆ ಹೆಚ್ಚು ದುಡ್ಡು ಬೇಕಾಗಿತ್ತು. ಒಂದು ಮನೆಯನ್ನ ತನ್ನ ವಶಕ್ಕೆ ಪಡೆದುಕೊಂಡಿತು. ಆ ಮನೆಯನ್ನ ನೋಡುವುದಕ್ಕೆ ಬರುವ ಎಲ್ಲರೂ ಹಾಕಿದಂತಹ ದುಡ್ಡಿನಲ್ಲಿ ಆ ಮನೆಯನ್ನ ನಡೆಸುವುದಕ್ಕೆ ಸ್ವಲ್ಪ ಹಣ ನೀಡಿ ಉಳಿದದ್ದನ್ನು ತಮ್ಮ ಸರ್ಕಾರ ನಡೆಸುವುದಕ್ಕೆ ಬಳಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದೆ. ಸರಕಾರ ನಡೆಸುತ್ತಿದ್ದ ಮನೆ ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿತು. ಆ ಮನೆಗೆ ಬಂದು ಹೋಗುವವರಿಗೆ ಸೂಕ್ತ ವ್ಯವಸ್ಥೆ ಇಲ್ಲ. ಆ ಮನೆಯಲ್ಲಿ ಸರಕಾರ ಹೆಚ್ಚು ಹೆಚ್ಚು ಹಣ ಸಂಪಾದನೆ ಮಾಡುವುದಕ್ಕೆ ಬೇರೆ ಬೇರೆ ಯೋಜನೆಗಳನ್ನೇ ರೂಪಿಸಿತೇ ಹೊರತು ಜನರ ಬಗ್ಗೆ ಗಮನ ಹರಿಸಲೇ ಇಲ್ಲ. ಅದರಿಂದ ಸಮಾಜಕ್ಕೂ ಏನು ಹೊಸತು ಸಿಗಲೇ ಇಲ್ಲ .ಅದೇ ಜನರೇ ನಡೆಸ್ತಾ ಇರುವಂತಹ ಪಕ್ಕದ ಮನೆಯನ್ನು ತುಂಬಾ ಅಚ್ಚುಕಟ್ಟಾಗಿ ಜನರಿಗೆ ಉಪಯೋಗ ಆಗವ ಹಾಗೆ ಮನೆಯನ್ನು ನಿರ್ವಹಿಸ್ತಾ ಹೋದರು. ಜನರೇ ನಡೆಸುವ ಆ ಮನೆಗೆ ಬಂದಾಗ ಅವರ ಬದುಕು ಬದಲಾಯಿತು, ಮನೆಯು ತುಂಬಾ ಚೆನ್ನಾಗಿ ಬೆಳೆದು ನಿಂತಿತು. ಹಾಗಾಗಿ ಮನೆ ಯಾರ ಕೈಯಲ್ಲಿರಬೇಕು ಅನ್ನೋದನ್ನ ನಾವೇ ನಿರ್ಧಾರ ಮಾಡಬೇಕು... ಸರಕಾರ ನಿರ್ವಹಿಸುವ ಮನೆ ಕೇಳಿಕೊಳ್ತಾ ಇದೆ ತನ್ನನ್ನಾ ಜನರೇ ತೆಗೆದುಕೊಳ್ಳಲಿ ಎಂದು.



**-ಧೀರಜ್** ಬೆಳ್ಳಾರೆ

# ಭಾವ ಲಹರಿ

# ಔರಂಗಜೇಬನ ಬದುಕಿನಲ್ಲೂ, ಸಾವಿನ ಬಳಿಕವೂ ಸತ್ಯವಾದ ಭವಿಷ್ಯವಾಣಿ

ಅಕ್ಬರ್ ನಾಮಾ
ಎಂ.ಜೆ.ಅಕ್ಬರ್

**ದೇವರಿಗೇ ಗೊತ್ತು!**

ಹಾಗಂತ ಉದ್ಗರಿಸಿದ ಜಹಾಂಗೀರ್. ಕುಡುಗೋಲಿನ ರೀತಿಯ ಧೂಮಕೇತುವೊಂದು ಆಗಸದಲ್ಲಿ ಕಾಣಿಸಿಕೊಂಡಾಗ ಅವನು ರಾಮಗಢದಲ್ಲಿದ್ದ. ಆ ದಿನ 1618ರ ಅಕ್ಟೋಬರ್ 20. ಅವನ ಜ್ಯೋತಿಷಿಗಳು ಈ ಧೂಮಕೇತು ಕಾಣಿಸಿಕೊಂಡಿದ್ದರ ಪರಿಣಾಮ ರಾಜನಿಗೆ ಅಪಶಕುನವೆಂತಲೂ, ಶತ್ರುಗಳಿಗೆ ಜಯವೆಂತಲೂ ಭವಿಷ್ಯ ನುಡಿದಿದ್ದರು.

ಜಹಾಂಗೀರ್‌ಗೆ ಆಗಸದಲ್ಲಿ ಧೂಮಕೇತು ಕಾಣಿಸಿದ್ದು ಸೂರ್ಯೋದಯಕ್ಕಿಂತ ಮೂರು ಘರಿ ಮೊದಲು. ಘರಿ ಅಂದರೆ 24 ನಿಮಿಷಗಳ ಪಂಚಾಂಗದ ಕಾಲ. ಮೊದಲಿಗೆ ಅದು ಹೊಳೆಯುವ ಕಂಬದಂತೆ ಕಾಣಿಸಿಕೊಂಡಿತ್ತು: ಅದು ಪೂರ್ಣರೂಪದಲ್ಲಿ ಗೋಚರಿಸಿದಾಗ ಈಟಿಯ ರೀತಿ ಕಾಣಿಸಿತ್ತು.

ಎರಡೂ ತುದಿಗಳಲ್ಲಿ ಸಪೂರವಾಗಿ, ಮಧ್ಯದಲ್ಲಿ ದಪ್ಪವಾಗಿತ್ತು. ಆದರೆ ಕುಡುಗೋಲಿನಂತೆ ಬಾಗಿತ್ತು. ಅದರ ಬಾಲ ದಕ್ಷಿಣಕ್ಕೂ, ತಲೆ ಉತ್ತರಕ್ಕೂ ಇತ್ತು. ಜ್ಯೋತಿಷಿಗಳು ಅದರ ಆಕಾರ ಮತ್ತು ಗಾತ್ರವನ್ನು ಗಮನಿಸಿ ಲೆಕ್ಕಾಚಾರ ಮಾಡಿದ್ದರು. ಬೇರೆ ಬೇರೆ ಸಮಯದಲ್ಲಿ ಅದು ತಾಳಿದ ರೂಪವನ್ನು ಗಮನಿಸಿದರೆ 24 ಅಂಶದಷ್ಟು ಬಾಗಿತ್ತು. ಸ್ವರ್ಗದ ತುತ್ತತುದಿಯಲ್ಲಿ ಅದು ಚಲಿಸಿತ್ತು.

ಅದಕ್ಕೆ ಅದರದೇ ಆದ ಚಲನೆಯಿತ್ತು. ಮೊದಲು ವೃಶ್ಚಿಕ ರಾಶಿಯಿಂದ ಪ್ರಯಾಣ ಆರಂಭಿಸಿ, ತುಲಾ ರಾಶಿಯನ್ನು ಪ್ರವೇಶಿಸಿತ್ತು. ಮುಖ್ಯವಾಗಿ ಅದು ದಕ್ಷಿಣಕ್ಕೆ ಇಳಿದಿತ್ತು. ಈ ವಿದ್ಯಮಾನ ಸಂಭವಿಸಿದ 16 ರಾತ್ರಿಗಳ ಬಳಿಕ ಅದೇ ಜಾಗದಲ್ಲಿ ಒಂದು ನಕ್ಷತ್ರ ಗೋಚರಿಸಿತ್ತು. ಅದರ ತಲೆ ಹೊಳೆಯುತ್ತಿತ್ತು.

ಅದರ ಬಾಲ 2 ಅಥವಾ 3 ಯಾರ್ಡ್‌ಗಳಷ್ಟು ಉದ್ದವಿತ್ತು. ಆದರೆ ಬಾಲ ಹೊಳೆಯುತ್ತಿರಲಿಲ್ಲ. ಅದು ಈಗ ಕಾಣಿಸಿಕೊಳ್ಳತೊಡಗಿ 8 ರಾತ್ರಿಗಳಾಗಿವೆ. ಯಾವಾಗ ಅದು ಕಣ್ಮರೆಯಾಗುತ್ತದೆ ಎಂಬುದರ ಮೇಲೆ ಅದರ ಫಲಾಫಲಗಳು ನಿರ್ಣಯವಾಗುತ್ತವೆ. ಕೆಲವೇ ದಿನಗಳಲ್ಲಿ ಜಹಾಂಗೀರನಿಗೆ ಮೊಮ್ಮಗ ಜನಿಸಿದ: ಭಾನುವಾರದ ದಿನ, ಅಬಾನ್‌ನ ಇಲಾಹಿ ತಿಂಗಳಿನಲ್ಲಿ, ನಾನು ಪಟ್ಟಕ್ಕೆ ಬಂದ ಹದಿಮೂರನೇ ವರ್ಷದಲ್ಲಿ, ಹಿಜರಿ ಶಕೆ 1027ರ 15ನೇ ಜಿ-ಐ-ಕಾದಾ ದಿನದಂದು, ತುಲಾ ರಾಶಿಯಿಂದ 19 ಅಂಶಗಳ ಓರೆಯಲ್ಲಿ, ನನಗೆ ಸಂಪತ್ತನ್ನು ಕರುಣಿಸುವ ದೇವರು ನನ್ನ ಪುತ್ರ ಶಹಜಹಾನನಿಗೆ ಅಸಾಫ್ ಖಾನನ ಪುತ್ರಿಯಿಂದ (ಮುಮ್ತಾಜ್ ಮಹಲ್) ಪುತ್ರರತ್ನವನ್ನು ಕರುಣಿಸಿದ. ಅವನ ಆಗಮನವು ರಾಜ್ಯಕ್ಕೆ ಸಮೃದ್ಧಿಯನ್ನು ತರಲಿ ಎಂದು ಆಶಿಸುತ್ತೇನೆ.

ಈ ಮೊಮ್ಮಗನೇ ಔರಂಗಜೇಬ್.

ಉಜ್ಜಯಿನಿಯಲ್ಲಿ ಶಹಜಹಾನ್ ತನ್ನ ಮಗನ ಹುಟ್ಟುಹಬ್ಬದ ಮೋಜಿನ ಕೂಟ ಆಯೋಜಿಸಿದ್ದ. ಆ ದಿನ ಸಂತೋಷದಲ್ಲಿ ಕಳೆಯಿತು. ಇಂಥ ಪಾರ್ಟಿ ಹಾಗೂ ಔತಣಗಳನ್ನು ನೋಡಿಕೊಳ್ಳುತ್ತಿದ್ದ ಅವನ ಖಾಸಗಿ ಸೇವಕರು ಫಳಫಳ ಹೊಳೆಯುವ ಹೊಸ ರೀತಿಯ ಕಪ್‌ಗಳನ್ನು ನೋಡಿ ಸಂತೋಷಗೊಂಡಿದ್ದರು.

ಶಹಜಹಾನ್ ಆ ಮಂಗಳಕರ ಮಗುವನ್ನು ಒಂದು ತಟ್ಟೆಯ ತುಂಬಾ ಆಭರಣಗಳು, ಮುತ್ತುರತ್ನಗಳು ಹಾಗೂ 50 ಆನೆಗಳೊಂದಿಗೆ- 30 ಗಂಡು ಮತ್ತು 20 ಹೆಣ್ಣು- ತಂದು ತಾತನ ಬಳಿ ಅವನಿಗೊಂದು ಹೆಸರಿಡುವಂತೆ ಕೇಳಿದ್ದ. ದೇವರ ದಯೆಯಿರಲಿ. ಅನುಕೂಲಕರ ಮುಹೂರ್ತದಲ್ಲಿ ಹೆಸರು ಇಡಲಾಗುವುದು ಎಂದು ಜಹಾಂಗೀರ್ ಹೇಳಿದ್ದ.

ಆ ಮುಹೂರ್ತವನ್ನು ಜ್ಯೋತಿಷಿಗಳು ನಿಗದಿಪಡಿಸಬೇಕಿತ್ತು. 7 ಆನೆಗಳನ್ನು ಅವನ ಖಾಸಗಿ ಕೊಟ್ಟಿಗೆಗೆ ಕಳುಹಿಸಲಾಯಿತು. ಇನ್ನುಳಿದವನ್ನು ಅಧಿಕಾರಿಗಳಿಗೆ ಹಂಚಲಾಯಿತು. ಅವನು ಸ್ವೀಕರಿಸಿದ ಕಾಣಿಕೆಯ ಮೌಲ್ಯ 200000 ರುಪಾಯಿ ಆಗಿತ್ತು. ಅದಕ್ಕಿಂತ 3 ವರ್ಷಗಳ ಮೊದಲು ದಾರಾ ಶುಕೋ ಜನಿಸಿದಾಗಲೂ ಆಕಾಶ ಸುಮ್ಮನಿರಲಿಲ್ಲ.

1616ರ ಮಾರ್ಚ್‌ನಲ್ಲಿ ಜಹಾಂಗೀರ್ ತನ್ನ ಹತ್ತನೇ ಪಟ್ಟಾಭಿಷೇಕೋತ್ಸವವನ್ನು ವಿಚಿತ್ರ ರೀತಿಯಲ್ಲಿ ಭರ್ಜರಿ ಸಂಭ್ರಮದೊಂದಿಗೆ ಆಚರಿಸಿಕೊಂಡಿದ್ದ. ಮಾರ್ಚ್ 29ರ ಭಾನುವಾರ ದಿನದ ಹನ್ನೆರಡು ಘರಿಗಳು ಕಳೆದಿರಲು ಪಶ್ಚಿಮದಿಂದ ಆರಂಭಿಸಿ, ಸೂರ್ಯನ ಐದನೇ ನಾಲ್ಕು ಭಾಗಕ್ಕೆ ಡ್ರ್ಯಾಗನ್ ಆಕಾರದಲ್ಲಿ ಗ್ರಹಣ ಕವಿದಿತ್ತು.

ಗ್ರಹಣ ಹಿಡಿಯಲು ಆರಂಭಿಸಿ, ಅದು ಬಿಡುವವರೆಗೆ ಎಂಟು ಘರಿಗಳು ಕಳೆದಿದ್ದವು. ಲೋಹ, ಪ್ರಾಣಿ, ತರಕಾರಿ ಸೇರಿದಂತೆ ಎಲ್ಲಾ ರೀತಿಯ ದಾನಗಳನ್ನು ಫಕೀರರಿಗೆ ಮತ್ತು ಬಡಬಗ್ಗರಿಗೆ ನೀಡಿ ಗ್ರಹಣದ ಕಂಟಕದಿಂದ ಪಾರಾಗಲು ಜಹಾಂಗೀರ್ ಪ್ರಯತ್ನಿಸಿದ್ದ. ಏಕೆಂದರೆ ಗ್ರಹಣವೆಂಬುದು ದುರದೃಷ್ಟದ ಪೂರ್ವಸೂಚನೆಯಾಗಿತ್ತು.

1615ರ ಮಾರ್ಚ್ 30ರ ರಾತ್ರಿ ದಾರಾ ಶುಕೋ ಧನುರ್ ರಾಶಿಯಲ್ಲಿ ಜನಿಸಿದ್ದ. ಗಂಡು ಮಗುವಿನ ಜನನದಿಂದ ತನ್ನ ರಾಜ್ಯ ಚಿರಸ್ಥಾಯಿಯಾಗಲಿ ಮತ್ತು ಮಗುವಿನ ತಂದೆಗೆ ಅದೃಷ್ಟ ಸುರಿಸಲಿ ಎಂಬ ಆಶಯದೊಂದಿಗೆ ಅವನಿಗೆ ದಾರಾ ಶುಕೋ ಎಂದು ಜಹಾಂಗೀರ್ ಹೆಸರಿಟ್ಟಿದ್ದ.

ಅಪಶಕುನ: ಆಗಸದಲ್ಲಿ ಸಂಭವಿಸಿದ ಎರಡೂ ವಿದ್ಯಮಾನಗಳು ತನ್ನ ರಾಜ್ಯಕ್ಕೆ ಅಪಶಕುನವೆಂದೇ ಜಹಾಂಗೀರ್ ಭಾವಿಸಿದ್ದ. ಇತಿಹಾಸವನ್ನು ಮಗುಚಿ ಹಾಕಿದರೆ ಅವನ ನಂಬಿಕೆ ನಿಜವೇ ಆಗಿತ್ತು. ದಾರಾ ಶುಕೋಗೆ ಗ್ರಹಣ ಹಿಡಿದಿತ್ತು, ಆದರೆ ಔರಂಗಜೇಬನ ಧೂಮಕೇತು ಇಡೀ ಸಾಮ್ರಾಜ್ಯವನ್ನೇ ಸುಟ್ಟುಹಾಕಿತ್ತು.

ಔರಂಗಜೇಬ ತನ್ನ ಜಾತಕವನ್ನು ಬಹಳ ನಂಬುತ್ತಿದ್ದ. ಅವನು ಹುಟ್ಟಿದಾಗಲೇ ಶಾಸಬದ್ಧವಾಗಿ ಅದನ್ನು ರಚಿಸಲಾಗಿತ್ತು. ಅವನ ಬದುಕಿನಲ್ಲಿ ಸಂಭವಿಸಿದ ಎಲ್ಲಾ ಘಟನೆಗಳನ್ನೂ ಆ ಜಾತಕದಲ್ಲಿ ಮೊದಲೇ ಹೇಳಲಾಗಿತ್ತು. ಅಷ್ಟೇ ಅಲ್ಲ, ಅವನು ಹೋದ ಮೇಲೆ ಮೊಘಲ್ ಸಾಮ್ರಾಜ್ಯಕ್ಕೆ ಬಂದೆರಗಲಿರುವ ಆಪತ್ತಿನ ಬಗ್ಗೆಯೂ ಅದರಲ್ಲಿ ತಿಳಿಸಲಾಗಿತ್ತು.

1695ರಲ್ಲೇ, ಅಂದರೆ ತನ್ನ ಸಾವಿಗೆ 12 ವರ್ಷಗಳ ಮುಂಚೆ, ಮುಂದೆ ತನ್ನ ಉತ್ತರಾಧಿಕಾರಿಯಾಗಲಿರುವ ಮಿರ್ಜಾ ಮುಹಮ್ಮದ್ ಮುಜ್ಜಾಮ್‌ಗೆ (1643-1712)- ಇವನೇ ಬಹಾದೂರ್ ಶಾ- ಆಜ್ ಮಸ್ತ್ ಹಮಾಹ್ ಫಸದ್ ಇ ಬಾಕಿ ಎಂದು ಔರಂಗಜೇಬ ಹೇಳಿದ್ದ. ಅಂದರೆ, ನನ್ನ ನಂತರ ಅಲ್ಲೋಲಕಲ್ಲೋಲ!

ಔರಂಗಜೇಬನ ಜಾತಕ ಬರೆದವನು ಮುಲ್ಲಾ ಅಲಾ ಉಲ್ ಮುಲ್ಕ್ ತುನಿ. ಶಹಜಹಾನ್‌ನ ಆಸ್ಥಾನದಲ್ಲಿದ್ದ ದೊಡ್ಡ ವಿದ್ವಾಂಸನಾಗಿದ್ದ ಆತ, ಅಲ್ಲೇ ಉನ್ನತ ಅಧಿಕಾರಿಯೂ ಆಗಿದ್ದ. ನಂತರ ಅವನಿಗೆ ಫಾಜಿಲ್ ಖಾನ್ ಎಂದು ಹೆಸರು ನೀಡಲಾಗಿತ್ತು. ಅವನು ಜಾತಕದಲ್ಲಿ ಹೇಳಿದ ಸಂಗತಿಗಳು ಎಷ್ಟು ನಿಖರವಾಗಿದ್ದವು ಎಂಬುದನ್ನು ಸಮಕಾಲೀನ ಇತಿಹಾಸಕಾರ ಹಮಿದ್ ಉದ್ ದಿನ್ ಖಾನ್ ಬಹಾದೂರ್ ಬರೆದ ಅಹ್‌ಕಾಮಿ ಅಲಾಮ್ ಗಿರಿ ಗ್ರಂಥದಲ್ಲಿ ಹೇಳಲಾಗಿದೆ. ಅದನ್ನು ಇಂಗ್ಲಿಷ್‌ಗೆ ಅನೆಕ್ಡೋಟ್ಸ್ ಆ- ಔರಂಗಜೇಬ ಹೆಸರಿನಲ್ಲಿ ಜಾದೂನಾಥ್ ಸರ್ಕಾರ್ ಅನುವಾದ ಮಾಡಿದ್ದಾರೆ.

ಫಾಜಿಲ್ ಖಾನ್‌ನನ್ನು ಔರಂಗಜೇಬ ತುಂಬಾ ನಂಬುತ್ತಿದ್ದ. 1658ರಲ್ಲಿ ಅವನಿಂದ ಶಹಜಹಾನ್ ಅಧಿಕಾರ ಕಿತ್ತುಕೊಂಡಾಗ ಔರಂಗಜೇಬ ಮತ್ತು ಶಹಜಹಾನ್ ನಡುವೆ ಮಧ್ಯವರ್ತಿಯಾಗಿ ಮಾತುಕತೆ ನಡೆಸಿದವನು ಇದೇ ಫಾಜಿಲ್ ಖಾನ್. 1663ರಲ್ಲಿ ಅವನ ಸಾವಿಗೂ ಮುನ್ನ ಅತ್ಯುನ್ನತ ವರ್ಜೀ ಪದವಿಯನ್ನು ಅವನಿಗೆ ನೀಡಲಾಗಿತ್ತು.

ಔರಂಗಜೇಬ ತನ್ನ ತಂದೆಯಿಂದ ಈ ಶಕ್ತಿಶಾಲಿ ಸಂಪ್ರದಾಯವನ್ನು ಬಳುವಳಿಯಾಗಿ ಪಡೆದಿದ್ದ. ಕ್ರಿಸ್ಟೋಫರ್ ಮಿನ್‌ಕೋವ್‌ಸ್ಕಿ ಬರೆಯುತ್ತಾರೆ: ಸಮಕಾಲೀನ ಪರ್ಷಿಯನ್ ಇತಿಹಾಸದ ಗ್ರಂಥಗಳನ್ನು ಗಮನಿಸಿದರೆ ಮೊಘಲ್ ರಾಜರು ತಮ್ಮ ಜಾತಕ ಬರೆಯಲು ಹಿಂದೂ ಜ್ಯೋತಿಷಿಗಳನ್ನು ನೇಮಿಸಿಕೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅವರಿಗೆ ಜ್ಯೋತಿಕ್ ರಾಯಿ ಅಥವಾ ಜ್ಯೋತಿಷ್ಯರಾಜ ಎಂಬ ಬಿರುದು ನೀಡಲಾಗುತ್ತಿತ್ತು. ಈ ಜ್ಯೋತಿಕ್ ರಾಯಿಗಳು ಚಕ್ರವರ್ತಿ ಯುದ್ಧಕ್ಕೆ ಹೋಗುವಾಗಲೂ ಜತೆಗೆ ಹೋಗುತ್ತಿದ್ದರು.

■ ಶಹಜಹಾನ್ ಆ ಮಂಗಳಕರ ಮಗುವನ್ನು ಒಂದು ತಟ್ಟೆಯ ತುಂಬಾ ಆಭರಣಗಳು, ಮುತ್ತುರತ್ನಗಳು ಹಾಗೂ 50 ಆನೆಗಳೊಂದಿಗೆ- 30 ಗಂಡು ಮತ್ತು 20 ಹೆಣ್ಣು- ತಂದು ತಾತನ ಬಳಿ ಅವನಿಗೊಂದು ಹೆಸರಿಡುವಂತೆ ಕೇಳಿದ್ದ. ದೇವರ ದಯೆಯಿರಲಿ. ಅನುಕೂಲಕರ ಮುಹೂರ್ತದಲ್ಲಿ ಹೆಸರು ಇಡಲಾಗುವುದು ಎಂದು ಜಹಾಂಗೀರ್ ಹೇಳಿದ್ದ.



ರಾಜನ ಅರಮನೆಯಲ್ಲಿ ಯಾರೇ ಜನಿಸಿದರೂ ಅವರ ಜಾತಕ ಬರೆಯುವುದು ಇವರ ಕೆಲಸವಾಗಿತ್ತು. ಜ್ಯೋತಿಷ್ಯದ ಪ್ರಕಾರ ರಾಜನ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿತ್ತು. ಶುಭಕಾರ್ಯಗಳನ್ನು ಅಥವಾ ಮಹತ್ವದ ಕೆಲಸಗಳನ್ನು ಮಾಡಲು ಮುಹೂರ್ತ ನಿಗದಿಪಡಿಸುವುದು ಕೂಡ ಇವರ ಕೆಲಸವಾಗಿತ್ತು. ರಾಜಮನೆತನದವರಿಗೆ ದಿನನಿತ್ಯದ ಕಾರ್ಯಗಳಲ್ಲೂ ಸಲಹೆ ಸೂಚನೆಗಳನ್ನು ನೀಡುವುದು ಮತ್ತು ರಾಜನ ವೈಯಕ್ತಿಕ ಹಾಗೂ ರಾಜಕೀಯ ಬದುಕಿಗೆ ಮಾರ್ಗದರ್ಶನ ಮಾಡುವುದು ಕೂಡ ಇವರ ಜವಾಬ್ದಾರಿಯಾಗಿತ್ತು.

ಪಟ್ಟಾಭಿಷೇಕ: ಔರಂಗಜೇಬನ ಪಟ್ಟಾಭಿಷೇಕದ ವಿಷಯದಲ್ಲೂ ಜ್ಯೋತಿಷಿಗಳ ಮಾತೇ ಅಂತಿಮವಾಗಿತ್ತು. 1659ರ ಮೇ 12ರಂದು ಔರಂಗಜೇಬ ದೆಹಲಿಯನ್ನು ಪ್ರವೇಶಿಸಿದಾಗ ಬಾಜಾ ಭಜಂತ್ರಿ, ಕಹಳೆ, ತುತ್ತೂರಿಗಳು ಮೊಳಗಿದ್ದವು. ಆಭರಣಗಳಿಂದ ಅಲಂಕೃತ ಗಜ, ಅಶ್ವದಳಗಳು ಸ್ವಾಗತ ನೀಡಿದ್ದವು. ಅವನ ಸೇವಕರು ಜನರ ಮೇಲೆ ನಾಣ್ಯಗಳನ್ನು ಎರಚಿದ್ದರು. ನಂತರ ಔರಂಗಜೇಬ ಪಟ್ಟಕ್ಕೇರಲು 24 ದಿನಗಳ ಕಾಲ ಕಾದಿದ್ದ. ಆಸ್ಥಾನ ಜ್ಯೋತಿಷಿಗಳು 1659ರ ಜೂನ್ 5ರ ಭಾನುವಾರ ಒಳ್ಳೆಯ ದಿನ ಎಂದು ಹೇಳಿದ್ದರು. ಆ ದಿನ ಔರಂಗಜೇಬನ ಪಟ್ಟಾಭಿಷೇಕಕ್ಕೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಯಿತು ಎಂದು ಜಾದೂನಾಥ್ ಸರ್ಕಾರ್ ಬರೆಯುತ್ತಾರೆ. ಸೂರ್ಯೋದಯ ವಾದ ಬಳಿಕ 3 ಗಂಟೆ 15 ನಿಮಿಷಕ್ಕೆ ಮುಹೂರ್ತ ನಿಗದಿಯಾಗಿತ್ತು.

ಔರಂಗಜೇಬ ಜೂನ್ 5ರ ಬೆಳ್ಳಂಬೆಳಗ್ಗೆ ಪ್ರಶಾಂತ ವದನದೊಂದಿಗೆ ಆನೆಯ ಮೇಲೆ ಕುಳಿತು ಕೊಂಡು ಕೋಟೆಯೊಳಗೆ ಆಗಮಿಸಿದ. ಅಲ್ಲಿ ಮೊಘಲರ ಸರ್ವಸಂಪತ್ತನ್ನೂ ಪ್ರದರ್ಶನಕ್ಕೆ ಇರಿಸಲಾಗಿತ್ತು. ದಿವಾನಿ-ಇ-ಆಮ್‌ನ ಚಾವಣಿ ಹಾಗೂ ನಲವತ್ತು ಕಂಬಗಳನ್ನು ಗುಜರಾತಿನಿಂದ ತರಿಸಿದ ಕಸೂತಿಯ ರೇಷ್ಮೆ ಬಟ್ಟೆ, ಪರ್ಷಿಯಾದ ಚಿನ್ನ ಮತ್ತು ಬೆಳ್ಳಿಯ ಬಟ್ಟೆ, ಎಂಬ್ರಾಯ್ಡರಿ ಮಾಡಿದ ವೆಲ್ವೆಟ್ ಬಟ್ಟೆ, ಯುರೋಪಿನ ಪರದೆಗಳು, ಚೀನಾ ಮತ್ತು ಟರ್ಕಿಯ ಚಿನ್ನದ ಹಾಳೆಗಳಿಂದ ಅಲಂಕೃತಗೊಳಿಸಲಾಗಿತ್ತು.

ಜ್ಯೋತಿಷಿಗಳ ಹಸಿರು ನಿಶಾನೆಗೆ ದರ್ಬಾರು ಕಾಯುತ್ತಿತ್ತು. ಜ್ಯೋತಿಷಿಗಳು ಸೂರ್ಯೋದಯದ ಬಳಿಕ 3 ಗಂಟೆ 15 ನಿಮಿಷಕ್ಕೆ ಶುಭ ಮುಹೂರ್ತವಿದೆ ಎಂದು ಹೇಳಿದ್ದರು. ಅದರಂತೆ ಅವರ ತುಟಿ ಅಲುಗಾಡುವುದನ್ನೇ ಇಡೀ ಸಭೆ ಕಾಯುತ್ತಿತ್ತು. ಜ್ಯೋತಿಷಿಗಳು ತದೇಕಚಿತ್ತದಿಂದ ತಮ್ಮ ನೀರಿನ ಗಡಿಯಾರ ಮತ್ತು ಮರಳಿನ ಗಡಿಯಾರವನ್ನೇ ನೋಡುತ್ತಿದ್ದರು. ಕೊನೆಯಲ್ಲಿ ಅವರು ಹಸಿರು ನಿಶಾನೆ ತೋರಿದರು. ಶುಭ ಮುಹೂರ್ತ ಆಗಮಿಸಿತ್ತು.

ಸರ್ವಾಲಂಕಾರಭೂಷಿತನಾಗಿ ಪರದೆಯ ಹಿಂದೆ ಕುಳಿತಿದ್ದ ಚಕ್ರವರ್ತಿಗಳು ದರ್ಬಾರಿಗೆ ಆಗಮಿಸಿ ಸಿಂಹಾಸನಾರೋಹಣ ಮಾಡಿದರು. ತಾಂತ್ರಿಕವಾಗಿ ನೋಡಿದರೆ ಇದು ಔರಂಗಜೇಬನ ಎರಡನೇ ಪಟ್ಟಾಭಿಷೇಕವಾಗಿತ್ತು. 1658ರ ಜುಲೈನಲ್ಲೇ ಶಾಲಿಮಾರ್ ಬಾಗ್‌ನಲ್ಲಿ ಮೊದಲ ಸಂಕ್ಷಿಪ್ತ ಪಟ್ಟಾಭಿಷೇಕ ನಡೆದಿತ್ತು. ಶಹಜಹಾನನನ್ನು ಸಿಂಹಾಸನದಿಂದ ಕೆಳಗಿಳಿಸಿದ ಮೇಲೆ ರಾಜನ ಸ್ಥಾನವನ್ನು ಖಾಲಿ ಬಿಡಬಾರದು ಎಂದು ಅಧಿಕಾರ ಗ್ರಹಣಕ್ಕಾಗಿ ಆಗ ಪಟ್ಟಾಭಿಷೇಕ ನಡೆಸಲಾಗಿತ್ತು.

ಮುಹಮ್ಮದ್ ಕಂಬು ಪ್ರಕಾರ ಆಗಲೂ ಜ್ಯೋತಿಷಿಗಳೇ 1658ರ ಜುಲೈ 21ನ್ನು ಶುಭದಿನ ಎಂದು ಪಟ್ಟಾಭಿಷೇಕಕ್ಕೆ ನಿಗದಿಪಡಿಸಿದ್ದರು. ಅಂದರೆ ಔರಂಗಜೇಬನ ಪಟ್ಟಾಭಿಷೇಕಕ್ಕೆ ಎರಡು ಬಾರಿಯೂ ಜ್ಯೋತಿಷಿಗಳೇ ಮುಹೂರ್ತ ಸೂಚಿಸಿದ್ದರು. ಮಜಾ ಏನೆಂದರೆ, ಇಸ್ಲಾಮಿಕ್ ಕಾನೂನಿನ ಪ್ರಕಾರವೇ ನಡೆದುಕೊಳ್ಳುತ್ತಿದ್ದ ಚಕ್ರವರ್ತಿ ಔರಂಗಜೇಬ, ಇಸ್ಲಾಮಿಕ್ ಸಿದ್ಧಾಂತಗಳಿಗೆ ವಿರುದ್ಧವಾದ ನಿರ್ಧಾರಗಳನ್ನು ಮಾತ್ರ ಪದೇಪದೆ ಕೈಗೊಳ್ಳುತ್ತಿದ್ದ.

ಹೀಗಾಗಿ ಆಚರಣೆಯಲ್ಲಿ ಕುರಾನಿನ ಸುರಾ ಯೂನುಸ್, 101ನೇ ಶ್ಲೋಕದಲ್ಲಿ ಹೇಳಿದ, ಸ್ವರ್ಗ ಮತ್ತು ಭೂಮಿಯಲ್ಲಿರುವ ಎಲ್ಲವನ್ನೂ ಗಮನಿಸಿ. ಆದರೆ ನಂಬಿಕೆಯಿಲ್ಲದವರನ್ನು ಯಾವುದೇ ಶಕುನವಾಗಲೀ ಎಚ್ಚರಿಕೆಗಳಾಗಲೀ ರಕ್ಷಿಸುವುದಿಲ್ಲ ಎಂಬ ಮಾತನ್ನು ಸಂಪೂರ್ಣ ನಿರ್ಲಕ್ಷಿಸಿದ್ದ. ನಂಬಿಕೆ ಸ್ವಲ್ಪ ಆಚೆ-ಈಚೆ ಆಗುತ್ತದೆ ಬಿಡಿ.

1658ರಲ್ಲಿ ಔರಂಗಜೇಬ ತನ್ನ ಸಾಮ್ರಾಜ್ಯಕ್ಕೆ ಸಂಪೂರ್ಣ ಸಾರ್ವಭೌಮತೆಯನ್ನೇನೂ ಘೋಷಿಸಿಕೊಳ್ಳಲಿಲ್ಲ. ಅಷ್ಟರಮಟ್ಟಿಗೆ ಅವನು ವಾಸ್ತವವಾದಿಯಾಗಿದ್ದ. ಅವನ ಹೆಸರಿನಲ್ಲಿ ಖುತ್ಬಾ ಪ್ರಾರ್ಥನೆ ಓದುತ್ತಿರಲಿಲ್ಲ. 1660ರಲ್ಲಿ ರಚಿಸಿದ, ಈಗ ಸೇಂಟ್ ಪೀಟರ್ಸ್‌ಬರ್ಗ್ ಆಲ್ಬಮ್‌ನಲ್ಲಿರುವ ಒಂದು ಕಲಾಕೃತಿಯಲ್ಲಿ ಯುವ ಔರಂಗಜೇಬನು ಸ್ವರ್ಗದ ಬೆಳಕಿನಲ್ಲಿ ಮೆತ್ತನೆಯ ಆಸನದ ಮೇಲೆ ಕುಳಿತು ಇಬ್ಬರು ರಾಣಿಯರ ಮುಂದೆ ಸ್ನಾನ ಮಾಡುವ ದೃಶ್ಯವಿದೆ.

ಅವನ ಪಕ್ಕದಲ್ಲಿ ಸಣ್ಣದೊಂದು ಪೆಟ್ಟಿಗೆ ಮತ್ತು ರುದ್ರವೀಣೆಯೂ ಕಾಣಿಸುತ್ತದೆ. ಎರಡನೇ ಪಟ್ಟಾಭಿಷೇಕದ ವೈಭವವು ಅಲ್ಲಿಯವರೆಗೆ ಔರಂಗಜೇಬನ ಸರಳ ವ್ಯಕ್ತಿತ್ವದ ಬಗ್ಗೆ ಕೃತಕವಾಗಿ ಮೂಡಿಸಿದ್ದ ಜನಾಭಿಪ್ರಾಯವನ್ನು ಸುಳ್ಳು ಮಾಡಿತು. ಔರಂಗಜೇಬ ರಾಜನಂತಿಲ್ಲ, ಅವನು ತುಂಬಾ ಸರಳವಾಗಿ ಬದುಕುತ್ತಾನೆ, ಪ್ರಾರ್ಥನೆಯ ಟೋಪಿಗಳನ್ನು ಹೊಲಿದು ಅದರಿಂದ ಬಂದ ಹಣದಲ್ಲಿ ಜೀವನ ನಡೆಸುತ್ತಾನೆ ಎಂದೆಲ್ಲಾ ಆವರೆಗೆ ಸುದ್ದಿ ಹಬ್ಬಿಸಲಾಗಿತ್ತು.

ಆಭರಣಗಳ ವ್ಯಾಪಾರಿ ಜೀನ್ ಬಾಪ್ಟಿಸ್ಟೆ ಟ್ಯಾವರ್ನಿಯರ್ (1605-1689) ಔರಂಗಜೇಬನು ಚಿನ್ನದ ಹೊದಿಕೆಯ ಹರಳಿನ ಕಪ್‌ನಲ್ಲಿ ನೀರು ಕುಡಿಯುವುದನ್ನು ನೋಡಿದ್ದ. ಆದರೆ ಅವನು ಯಾವತ್ತೂ ಚಿನ್ನ ಮತ್ತು ಬೆಳ್ಳಿಯ ಪಾತ್ರೆಗಳನ್ನು ಬಳಸುವುದಿಲ್ಲ ಎಂದು ಪ್ರಚಾರ ಮಾಡಲಾಗಿತ್ತು.

1665ರಲ್ಲಿ ಬಹಳ ದೊಡ್ಡ ಧೂಮಕೇತು ನಾಲ್ಕು ವಾರಗಳ ಕಾಲ ಆಗಸದಲ್ಲಿ ಕಾಣಿಸಿಕೊಂಡಾಗ ಔರಂಗಜೇಬನಿಗೆ ಭಯ ಶುರುವಾಯಿತು. ಅವನು ಏಕಾಏಕಿ ತಪಸ್ವಿಯಂತೆ ಆಗಿಬಿಟ್ಟ. ಮಾಂಸ ತಿನ್ನುವುದನ್ನು ಬಿಟ್ಟ. ಊಟವನ್ನು ಬಹಳ ಕಡಿಮೆ ಮಾಡಿ, ಕೇವಲ ಧಾನ್ಯದ ರೊಟ್ಟಿ ಮತ್ತು ನೀರಿಗೆ ಸೀಮಿತಗೊಳಿಸಿದ. ಹುಲಿಯ ಚರ್ಮವನ್ನು ನೆಲದ ಮೇಲೆ ಹಾಸಿಕೊಂಡು ಅದರ ಮೇಲೆ ಮಲಗತೊಡಗಿದ. ಧೂಮಕೇತು ಕಾಣಿಸಿಕೊಳ್ಳುವುದು ರಾಜರಿಗೆ ಅಪಾಯಕಾರಿ ಶಕುನವಾಗಿತ್ತು.

ಔರಂಗಜೇಬನಿಗೆ ಜ್ಯೋತಿಷ್ಯದಲ್ಲಿ ಇದ್ದ ಅಪಾರ ನಂಬಿಕೆಯನ್ನು ಫ್ರಾಂಕೋಯಿಸ್ ಬರ್ನಿಯರ್ ಕೂಡ ಖಚಿತಪಡಿಸಿದ್ದಾನೆ. ಅವನು ಅದರ ಹಿಂದಿನ ವರ್ಷ ರಾಜನ ಪರಿವಾರದಲ್ಲಿದ್ದ.

ಅಂತ್ಯ: ಇಸ್ಲಾಮಿನ ಸಂಪ್ರದಾಯಗಳನ್ನು ಕಿಂಚಿತ್ತು ಉಲ್ಲಂಘಿಸಿದರೂ ತನ್ನ ಜೀವಕ್ಕೆ ಆಪತ್ತು ಬರುತ್ತದೆ ಎಂಬ ಭಯ ಔರಂಗಜೇಬನಿಗಿತ್ತು. ಮಹತ್ತು ಇದ್ದಲ್ಲಿ ಅಪಾಯವೂ ಇರುತ್ತದೆ ಎಂದು ಅವನು ನಂಬಿದ್ದ. ಅವನಲ್ಲಿದ್ದ ದೊಡ್ಡ ದೌರ್ಬಲ್ಯವೆಂದರೆ ತೀರಾ ಸಣ್ಣ ಸಣ್ಣ ವಿಷಯಗಳನ್ನೂ ತಾನೇ ನಿರ್ಧರಿಸಬೇಕು ಎಂಬ ಹಪಾಹಪಿ, ಮಂತ್ರಿಗಳು ಮತ್ತು ಸೇನಾಪತಿಗಳಿಗೆ ನಿರ್ಧಾರ ಕೈಗೊಳ್ಳಲು ಬಿಡದೆ ಇರುವುದು ಹಾಗೂ ತುರ್ತು ಸಂದರ್ಭಗಳಲ್ಲಿ ಅವರ ಕೈಬಿಡುವುದು. ಅವನು ಅನುಮಾನದ ಪಿಶಾಚಿಯಾಗಿದ್ದ.

ಆ ಗುಣವು ಅವನ ಮಕ್ಕಳಲ್ಲಿದ್ದ ಸಾಮರ್ಥ್ಯವನ್ನೇ ಹೊಸಕಿ ಹಾಕಿತ್ತು. ರಾಜತಾಂತ್ರಿಕತೆಯಲ್ಲಿ ಅವನಿಗೆ ಸರಿಸಾಟಿ ಯಾರೂ ಇರಲಿಲ್ಲ. ಏನನ್ನು ಬೇಕಾದರೂ ರಹಸ್ಯವಾಗಿ ಬದಲಿಸುತ್ತಿದ್ದ. ಆದರೆ ಅವನ ಬೌದ್ಧಿಕತೆಯ ಮಟ್ಟ ಎತ್ತರದಲ್ಲಿರಲಿಲ್ಲ. ತನ್ನ ಹತ್ತಿರವಿರುವ ಹೊಗಳುಭಟರನ್ನೇ ನಂಬಿಬಿಡುತ್ತಿದ್ದ. ಔರಂಗಜೇಬನಲ್ಲಿ ಕರುಣೆ, ಕಲ್ಪನಾಶಕ್ತಿ, ದೂರದೃಷ್ಟಿ, ಹೊಂದಾಣಿಕೆಯ ಸ್ವಭಾವ, ದಾರಿಗಳ ಆಯ್ಕೆಯಲ್ಲಿ ವಿವೇಚನೆ ಮತ್ತು ತಲೆಯಲ್ಲಿ ಬರುವ ನೂರು ದುಷ್ಟ ಯೋಚನೆಗಳನ್ನು ನಿಗ್ರಹಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳುವ ವಿವೇಕ ಈ ಯಾವ ಗುಣಗಳೂ ಇರಲಿಲ್ಲ. ಅವನ ಈ ದೌರ್ಬಲ್ಯಗಳೇ ಮೊಘಲ್ ಸಾಮ್ರಾಜ್ಯಕ್ಕೆ ಮುಳುವಾದವು.

ಹೀಗಾಗಿ ಅವನ ಸಾವಿನ ನಂತರ ಮೊಘಲ್ ಸಾಮ್ರಾಜ್ಯ ಏಕಾಏಕಿ ಪಾತಾಳಕ್ಕೆ ಪತನಗೊಂಡಿತು. 1707ರಲ್ಲಿ 88 ವರ್ಷದ ಔರಂಗಜೇಬನಿಗೆ ತನ್ನ ಬದುಕು ಮುಗಿಯಿತು ಎಂಬುದು ಅರ್ಥವಾಗಿತ್ತು. ಹೀಗಾಗಿ ಆಜಮ್ ಶಾಗೆ ಬರೆದ ತನ್ನ ಕೊನೆಯ ಪತ್ರದಲ್ಲಿ ಹೀಗೆ ಬರೆದಿದ್ದ: ನಾನು ಒಬ್ಬನೇ ಬಂದಿದ್ದೇನೆ, ಈಗ ಒಬ್ಬನೇ ಹೋಗುತ್ತಿದ್ದೇನೆ. ನಾನು ಯಾರೆಂಬುದು ನನಗೆ ಗೊತ್ತಿಲ್ಲ. ನಾನೇನು ಮಾಡುತ್ತಿದ್ದೇನೆಂಬುದೂ ಗೊತ್ತಿಲ್ಲ... ನಾನು ಯಾವತ್ತೂ ಒಳ್ಳೆಯ ಆಡಳಿತ ನಡೆಸಲಿಲ್ಲ ಅಥವಾ ರೈತರಿಗೆ ಒಳ್ಳೆಯದನ್ನು ಮಾಡಲಿಲ್ಲ... ನಾನು ಬರುವಾಗ ನನ್ನೊಂದಿಗೆ ಏನನ್ನೂ ತರಲಿಲ್ಲ. ಈಗ ಹೋಗುವಾಗ ನನ್ನದೇ ಪಾಪದ ಫಲಗಳನ್ನು ಹೊತ್ತೊಯ್ಯುತ್ತಿದ್ದೇನೆ.

ನನಗೇನು ಶಿಕ್ಷೆ ಕಾದಿದೆಯೋ ಗೊತ್ತಿಲ್ಲ. ಕಾಮ್ ಬಕ್ಷನಿಗೆ ಬರೆದ ಪತ್ರದಲ್ಲೂ ಇಂಥದ್ದೇ ಪಶ್ಚಾತ್ತಾಪದ ಮಾತುಗಳಿವೆ. ನಾನು ಮಾಡಿದ ಎಲ್ಲಾ ಪಾಪದ ಫಲಗಳನ್ನೂ ನನ್ನೊಂದಿಗೆ ಹೊತ್ತುಕೊಂಡು ಹೋಗುತ್ತಿದ್ದೇನೆ... ಜಮಖಾನ ಎಷ್ಟು ಅಗಲವಿದೆಯೋ ಅದರ ಮಿತಿಯಲ್ಲೇ ನಿನ್ನ ಕಾಲುಗಳನ್ನು ನಿಯಂತ್ರಿಸಿಕೋ.

ಔರಂಗಜೇಬನ ಹಾಸಿಗೆಯ ದಿಂಬಿನ ಕೆಳಗೆ ಸಿಕ್ಕಿದ್ದು ಎನ್ನಲಾದ ಅವನದೇ ಕೈಬರಹದ ಹೇಳಿಕೆಯೊಂದಿದೆ. ಅದು ಈಗ ಬ್ರಿಟನ್ನಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿದೆ. ಅದರಲ್ಲಿ ಅವನು ತನ್ನ ಮಕ್ಕಳಿಗೆ, ಸಿಂಹಾಸನಕ್ಕಾಗಿ ಮನುಕುಲವನ್ನು ಕೊಲ್ಲಬೇಡಿ. ಅಧಿಕಾರವನ್ನು ಹಂಚಿಕೊಳ್ಳಿ ಎಂದು ಬರೆದಿದ್ದಾನೆ. ಅದಕ್ಕಾಗಿ ಒಂದು ಸೂತ್ರವನ್ನೂ ಅವನು ನೀಡಿದ್ದ. ಆದರೆ ಅವನದು ಮೊಘಲ್ ವಂಶವಲ್ಲವೇ? ಮಕ್ಕಳು ಅವನ ಸಲಹೆಯನ್ನು ಮನಸಾರೆ ನಿರ್ಲಕ್ಷಿಸಿದ್ದರು.

ಅವನ ಹನ್ನೊಂದನೇ ಸಂದೇಶ ಅತ್ಯಂತ ಕುತೂಹಲಕರವಾಗಿದೆ: ಯಾವತ್ತೂ ನಿಮ್ಮ ಮಕ್ಕಳನ್ನು ನಂಬಬೇಡಿ. ಅವರನ್ನು ಮೆಚ್ಚಿಸಲು ಏನನ್ನೂ ಮಾಡಬೇಡಿ.

1687ರ ಫೆಬ್ರವರಿ 21ರಿಂದ ಜೈಲಿನಲ್ಲಿದ್ದ ತನ್ನ ಉತ್ತರಾಧಿಕಾರಿ ಬಹಾದೂರ್ ಶಾನನ್ನು 1695ರ ಮೇ 9ರಂದು ಬಿಡುಗಡೆ ಗೊಳಿಸಿದ ಔರಂಗಜೇಬನು ಅವನನ್ನು ತನ್ನ ಬಳಿಗೆ ಕರೆಸಿಕೊಂಡು ಸೆರೆಯಲ್ಲಿರಿಸಿದ್ದಕ್ಕೆ ಕಾರಣ ಹೇಳಿದ. ಜೈಲುವಾಸ ಬಹಳ ಜನರಿಗೆ ಒಳ್ಳೆಯದನ್ನೇ ಮಾಡಿದೆ. ಪ್ರವಾದಿ ಜೋಸೆಫ್ ಕೂಡ ಈಜಿಪ್ಟ್‌ನ ರಾಜನಾಗುವುದಕ್ಕೂ ಮುನ್ನ ಜೈಲಿನಲ್ಲಿದ್ದ. ಹೀಗಾಗಿ, ಇದೇ ಭರವಸೆಯಲ್ಲಿ ನಾನು ಜೀವಂತವಾಗಿರುವಾಗಲೇ ನಿನಗೆ ಸ್ವರ್ಗದಂಥ ಹಿಂದುಸ್ತಾನವನ್ನು ಒಪ್ಪಿಸುತ್ತಿದ್ದೇನೆ ಎಂದು ಅಪ್ಪಣೆ ಮಾಡಿದ.

ನಂತರ ಔರಂಗಜೇಬ ತನ್ನ ಮಗನಿಗೆ ಅಚ್ಚರಿಯ ಸತ್ಯವೊಂದನ್ನು ಹೇಳಿದ: ನನ್ನ ಜಾತಕದಲ್ಲಿ ಹೇಳಿದ ಎಲ್ಲವೂ ಇಲ್ಲಿಯವರೆಗೆ ಕರಾರುವಾಕ್ಕಾಗಿ ಹಾಗೇ ನಡೆದಿದೆ. ಫಾಜಿಲ್ ಖಾನ್ ರಚಿಸಿದ ಜಾತಕ ತುಂಬಾ ನಿಖರವಾಗಿತ್ತು. ನಾನು ಹುಟ್ಟಿದ ದಿನದಿಂದ ಇಲ್ಲಿಯವರೆಗಿನ ಪ್ರತಿಯೊಂದು ಘಟನೆಯನ್ನೂ ನೆನಪಿಸಿಕೊಂಡು ಪರಿಶೀಲಿಸಿದ್ದೇನೆ. ಎಲ್ಲವೂ ಅವನು ಹೇಳಿದಂತೆಯೇ ನಡೆದಿವೆ. ನನ್ನ ಸಾವಿನ ನಂತರ ಏನಾಗುತ್ತದೆ ಎಂಬುದನ್ನು ಕೂಡ ಜಾತಕದಲ್ಲಿ ಹೇಳಲಾಗಿದೆ. ಆಜ್ ಮಸ್ತ್ ಹಮಾಹ್ ಫಸದ್ ಇ ಬಾಕಿ. ನಾನು ಹೋದ ನಂತರ ಎಲ್ಲವೂ ಅಲ್ಲೋಲಕಲ್ಲೋಲವಾಗಲಿದೆ!

ಮುಂದೆ ಬಂದೆರಗಲಿರುವ ದುರದೃಷ್ಟದ ಬಗ್ಗೆ ಔರಂಗಜೇಬ ಬಹಳ ಪ್ರಾಮಾಣಿಕವಾಗಿ ಹೇಳಿದ್ದ: ನನ್ನ ನಂತರ ಬರುವ ಚಕ್ರವರ್ತಿ ಅಜ್ಞಾನಿ, ಸಂಕುಚಿತ ಮನೋಭಾವದವನಾಗಿರುತ್ತಾನೆ ಎಂದು ಜಾತಕದಲ್ಲಿ ಬರೆದಿದೆ. ಅವನು ಆಡುವ ಮಾತುಗಳು ಸರಿಯಾಗಿರುವುದಿಲ್ಲ. ಅವನು ರೂಪಿಸುವ ಯೋಜನೆಗಳು ಅಪ್ರಬುದ್ಧವಾಗಿರುತ್ತವೆ.

ಕೆಲವರ ಮೇಲೆ ಅವನು ಅವರನ್ನೇ ಮುಳುಗಿಸುವಷ್ಟು ಸಂಪತ್ತನ್ನು ಖರ್ಚು ಮಾಡುತ್ತಾನೆ. ಇನ್ನುಳಿದವರ ಜತೆಗೆ ಅವರನ್ನು ಸರ್ವನಾಶ ಮಾಡುವಷ್ಟು ಕಠೋರವಾಗಿ ನಡೆದುಕೊಳ್ಳುತ್ತಾನೆ. ಈ ಎಲ್ಲಾ ಅದ್ಭುತ ಗುಣಗಳೂ ನಿನ್ನಲ್ಲಿ ಈಗಾಗಲೇ ಇವೆ! ನಾನೇನೋ ನಿನ್ನ ಜತೆಗೆ ಒಳ್ಳೆಯ ಮಂತ್ರಿಯನ್ನೇ ಬಿಟ್ಟು ಹೋಗುತ್ತೇನೆ. ಅಸಾದ್ ಖಾನ್ ಸಮರ್ಥ ವಾಜಿರ್. ನನ್ನ ಆಡಳಿತಾವಧಿಯಲ್ಲಿ ಅವನನ್ನು ಸುರಕ್ಷಿತವಾಗಿ ನೋಡಿಕೊಂಡಿದ್ದೇನೆ. ಆದರೆ ಅವನಂಥ ಮಂತ್ರಿಯಿದ್ದರೂ ಅದರಿಂದ ಏನು ಪ್ರಯೋಜನ? ಸಾಮ್ರಾಜ್ಯದ ನಾಲ್ಕು ಕಂಬಗಳಂತೆ ನೀವು ನಾಲ್ಕು ಮಕ್ಕಳಿದ್ದೀರಿ.

ನೀವು ಆ ಬಡಪಾಯಿಗೆ ಅವನ ಕೆಲಸ ಮಾಡಲು ಎಲ್ಲಿ ಬಿಡುತ್ತೀರಿ! ಔರಂಗಜೇಬ ಸತ್ಯವನ್ನೇ ಹೇಳಿದ್ದ. ಸಾಕಷ್ಟು ಅಧಿಕಾರಿಗಳು ನಾನು ಆದಷ್ಟು ಬೇಗ ಸಾಯಲಿ ಎಂದು ರಹಸ್ಯವಾಗಿ ದೇವರಲ್ಲಿ ಬೇಡಿಕೊಳ್ಳುತ್ತಿದ್ದಾರೆ. ಆದರೆ ನಾನು ಸತ್ತ ನಂತರ ಅವರೇ ದೇವರ ಬಳಿ ತಮಗೆ ಬೇಗ ಸಾವು ಕೊಡು ಎಂದು ಬೇಡಿಕೊಳ್ಳುವ ಪರಿಸ್ಥಿತಿ ಬರುತ್ತದೆ.

ನೀನು ಪ್ರಜೆಗಳನ್ನು ತಂದೆಯಂತೆ ಪ್ರೀತಿಯಿಂದ ನೋಡಿಕೊಳ್ಳುವಾಗ ಅವರು ನುಂಗಲಾಗದೆ ಉಗಿಯುವಷ್ಟು ಉಪ್ಪಾಗಬೇಡ, ಹಾಗೆಯೇ ಅವರು ನುಂಗಿಬಿಡುವಷ್ಟು ಸಿಹಿಯೂ ಆಗಬೇಡ ಎಂದು ಬಹಾದೂರ್ ಶಾಗೆ ಉಪದೇಶ ಮಾಡಿದ್ದ.

**(ಎಂ.ಜೆ.ಅಕ್ಬರ್ ಬರೆದ ಆಫರ್ ಮಿ, ಕೇಯಾಸ್: ಆಸ್ಟ್ರಾಲಜಿ ಇನ್ ದಿ ಮುಘಲ್ ಎಂಪೈರ್ ಎಂಬ ಹೊಸ ಪುಸ್ತಕದ ಆಯ್ದ ಭಾಗವಿದು).**


## ಕನ್ನಡ ಕವನಗಳು ★★★★★★

# ಮುನಿಸು ತರವೆ

ಮುನಿಸು ನೀನು ತೊರೆಯೆ ನೀರೆ
ಮನಕೆ ಹಗುರ ಕೇಳಲೆ
ಮನದ ಪ್ರೇಮ ಬಾಳಿಗೊದಗೆ
ಮನೆಗೆ ಹರುಷ ಹೇಳಲೆ
ತನುವಿನೊಳಗೆ ಮತ್ತೆ ಸಿಡುಕು
ಕನಲಿ ಕೊಂದ ಹೂಬನ
ಕನಸ ವೇಷದೊಳಗೆ ಬದುಕು
ಮಿನುಗದಾಯ್ತು ಮೈಮನ

ಮುನಿಸಿನೊಳಗೆ ಕುಳಿತೆಯಿರಲು
ಮನಕೆ ಬರಡು ಬಂಧನ
ಮನಸಿನೊಳಗೆ ದೇಹ ಬಾಧೆ
ತನುವಲಿಹುದೆ ಜೀವನ
ಮುನಿಯ ಬೇಡ ಒಲವ ತೋರು
ಮನದ ಒಲುಮೆ ಸುಂದರಿ
ಮನಸಿನಾಟ ಒಡಲೆ ಸವಿಯು
ನನಸ ಬಾಳ್ವೆ ಕಿನ್ನರಿ

- ಹಾ ಮ ಸತೀಶ ಬೆಂಗಳೂರು



# ಕೃಷಿ ಜೀವನೋಪಾಯ ಅಲ್ಲ, ನೆಮ್ಮದಿಯ ತಪಸ್ಸು

ಕೃಷಿ ಮಾಡಿ, ನಿಮ್ಮ ಆಹಾರ ನೀವೇ ಬೆಳೆಸಿ ಎಂದಾಗ, ಹಲವರು ಅದೆಲ್ಲ ಆಗೋದಿಲ್ಲ ಅಂತಾರೆ. ಯಾಕೆ? ಎಂದು ಪ್ರಶ್ನಿಸಿದರೆ, ಅವರು ಪಟ್ಟಿ ಮಾಡುವ ಕಾರಣಗಳು: ಜಮೀನು ಇಲ್ಲ; ಮಣ್ಣು ಚೆನ್ನಾಗಿಲ್ಲ; ಗೊಬ್ಬರ ಇಲ್ಲ; ದೈಹಿಕ ಕೆಲಸ ಮಾಡಿ ಅಭ್ಯಾಸವಿಲ್ಲ; ಕೆಲಸಕ್ಕೆ ಜನ ಸಿಗೋದಿಲ್ಲ; ಹೆಚ್ಚುವರಿ ಫಸಲಿಗೆ ಮಾರುಕಟ್ಟೆ ಇಲ್ಲ; ಸಮಯವಿಲ್ಲ ಇತ್ಯಾದಿ.

ಈ ಎಲ್ಲ ಕಾರಣಗಳನ್ನು ಮೆಟ್ಟಿ ನಿಂತು ಕೃಷಿ ಮಾಡುತ್ತಿದ್ದಾರೆ ಶ್ರೀಧರ ಕಾರಂತ್. ವಯಸ್ಸು 60 ದಾಟಿದ್ದರೂ ಲವಲವಿಕೆಯಿಂದ ತರಕಾರಿಗಳನ್ನು ವರುಷವಿಡೀ ಬೆಳೆಸುತ್ತಿದ್ದಾರೆ! ಮಳೆಗಾಲದಲ್ಲಿ ಸಸಿ ನಾಟಿ ಮಾಡಿ ಭತ್ತವನ್ನೂ ಬೆಳೆಸುತ್ತಿದ್ದಾರೆ!

ಶ್ರೀಧರ ಕಾರಂತರ ಬಳಿ ಜಮೀನು ಇಲ್ಲ ಎಂಬ ನೆವನವಿಲ್ಲ. ಕೇರಳದ ಉತ್ತರದ ಕಾಸರಗೋಡು ಜಿಲ್ಲೆಯ ಮಂಜೇಶ್ವರ ತಾಲೂಕಿನ ಕಣ್ವತೀರ್ಥ ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ಅವರ ವಾಸ. (ಮಂಗಳೂರಿನಿಂದ ಕಣ್ವತೀರ್ಥಕ್ಕೆ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ವಾಹನದಲ್ಲಿ ಅರ್ಧ ಗಂಟೆಯ ಪ್ರಯಾಣ.) ಅಲ್ಲೇ ಸುತ್ತಮುತ್ತಲು ಐದು ಜನರ ತಲಾ ಸುಮಾರು ಒಂದೆಕರೆ ಜಮೀನು ಲೀಸಿಗೆ ಪಡೆದು ತರಕಾರಿ ಕೃಷಿ: ಟೊಮೆಟೋ, ಎಲೆಕೋಸು, ಅಲಸಂಡೆ, ಕೆಂಪು ಬೆಂಡೆಕಾಯಿ, ಹಸುರು ಬೆಂಡೆಕಾಯಿ, ಬದನೆ, ಸೌತೆ, ಮುಳ್ಳುಸೌತೆ, ಚೀನಿಕಾಯಿ, ಕುಂಬಳಕಾಯಿ, ಇಬ್ಬಡ್ಲ, ಹರಿವೆ, ಗೆಣಸು, ಮೆಣಸು.

ಮಣ್ಣು ಚೆನ್ನಾಗಿಲ್ಲ ಎಂಬ ನೆವನವೂ ಕಾರಂತರ ಬಳಿ ಇಲ್ಲ. ಅವರು ತರಕಾರಿ ಬೆಳೆಸುವುದು ಸಮುದ್ರದ ಹತ್ತಿರದ ಜಮೀನುಗಳಲ್ಲಿ. ಅಲ್ಲಿನದು ಮರಳುಮಣ್ಣು ಅಂದರೆ ನಿಸ್ಸಾರವಾದ ಮಣ್ಣು. ಅಂತಹ ಫಲವತ್ತತೆಯೇ ಇಲ್ಲದ ಜಮೀನಿನಲ್ಲಿ ಬಾವಿಯಿಂದ ನೀರು ಹಾಯಿಸಿ, ಉತ್ತಮ ತರಕಾರಿ ಫಸಲು ಪಡೆಯುತ್ತಿರುವ ಶ್ರೀಧರ ಕಾರಂತರದು ಸಾಹಸವೇ ಸೈ. ಒಬ್ಬರು ಭೂಮಾಲೀಕರಿಗೆ ಕಾರಂತರು ವರುಷಕ್ಕೆ ಪಾವತಿಸುವ ಜಮೀನಿನ ಬಾಡಿಗೆ ರೂ.25,000. ಉಳಿದ ನಾಲ್ವರಿಗೆ ಪಾವತಿಸುವ ಜಮೀನಿನ ಬಾಡಿಗೆ ವರುಷಕ್ಕೆ ತಲಾ ರೂ.5,000.

ಗೊಬ್ಬರ ಇಲ್ಲ ಎಂಬ ನೆವನ ಶ್ರೀಧರ ಕಾರಂತರು ಹೇಳೋದಿಲ್ಲ. ತರಕಾರಿ ಸಸಿಗಳಿಗೆ ಪೋಷಕಾಂಶ ಒದಗಿಸಲು ಅವರು ಹಾಕುವುದು ಜೀವಾಮೃತ. ಅವರು ಸಾಕುವ 60 ದೇಸಿ ದನಗಳ ಸೆಗಣಿಯಿಂದ ಜೀವಾಮೃತ ತಯಾರಿ. ಆ ದನಗಳನ್ನು ಅವರು ಸಾಕುತ್ತಿರುವುದು ಹಾಲಿಗಾಗಿ ಅಲ್ಲ, ಸೆಗಣಿಗಾಗಿ! ಕಾರಂತರು ದನಗಳ ಹಾಲು ಕರೆಯೋದೇ ಇಲ್ಲ ಎಂದರೆ ನಂಬುತ್ತೀರಾ? ದನದ ಹಾಲೆಲ್ಲ ಅದರ ಕರುವಿಗೆ ಎಂಬುದು ಅವರ ನಂಬಿಕೆ.

ತರಕಾರಿ ಫಸಲಿಗೆ ಮಾರುಕಟ್ಟೆ ಇಲ್ಲ ಎಂಬ ತಕರಾರನ್ನೂ ಶ್ರೀಧರ ಕಾರಂತರು ಎತ್ತೋದಿಲ್ಲ. ತಾವು ಬೆಳೆಸಿದ ತರಕಾರಿಗಳನ್ನು ಕೆಲವೊಮ್ಮೆ ಅವರು ಹತ್ತಿರದ ಕೆಲವು ಅಂಗಡಿಗಳಿಗೆ ಮಾರೋದುಂಟು. ಮುಖ್ಯವಾಗಿ ಅವರ ತರಕಾರಿ ಮಾರಾಟ ಮಂಗಳೂರಿನಲ್ಲಿ - ಅಲ್ಲಿನ ಪಂಜೆ ಮಂಗೇಶ ರಾವ ರಸ್ತೆ ಪಕ್ಕದಲ್ಲಿ ಸಾವಯವ ಕೃಷಿಕ ಗ್ರಾಹಕ ಬಳಗ (ರಿ.) ಪ್ರತಿ ಭಾನುವಾರ ಮುಂಜಾನೆ 6ರಿಂದ 9 ಗಂಟೆ ಅವಧಿಯಲ್ಲಿ ಸಂಘಟಿಸುವ ಸಾವಯವ ಸಂತೆಯಲ್ಲಿ. ಅವರು ಬೆಳೆಸುವುದೆಲ್ಲ ಸಾವಯವ ತರಕಾರಿಗಳು; ಹಾಗಾಗಿ ಸಂತೆಯಲ್ಲಿ ಆ ತರಕಾರಿಗಳಿಗೆ ಭಾರಿ ಬೇಡಿಕೆ.



ಇದಕ್ಕೆಲ್ಲ ಸಮಯ ಹೇಗೆ ಹೊಂದಿಸಿಕೊಳ್ಳುತ್ತೀರಿ, ಕಾರಂತರೇ? ಎಂದು ಕೇಳಿದಾಗ ಆ ವೃದ್ಧರು ಮುಗುಳ್ನಗುತ್ತಾ ಉತ್ತರಿಸುತ್ತಾರೆ, ನಮಗೆ ಪ್ರತಿ ದಿನವೂ 24 ಗಂಟೆ ಇದೆಯಲ್ಲ... ಮಳೆಗಾಲ ಬಂತೆಂದರೆ, ಅದೇ ಜಮೀನಿನಲ್ಲಿ ಬೀಜ ಬಿತ್ತಿ ಭತ್ತ ಬೆಳೆಸುವ ಕಾಯಕ ಅವರದು.

ಶ್ರೀಧರ ಕಾರಂತರಿಗೆ ಕೃಷಿಯೇ ತಪಸ್ಸು. ಈ ತಪಸ್ಸಿಗೆ ಮಾರ್ಗದರ್ಶನ ಸ್ವಾಮಿ ಮಂಗಳತೀರ್ಥ ಅವರದು. ಕಳೆದ 20 ವರುಷಗಳಿಂದ ಲಕ್ನೋ ಮೂಲದ ಇವರ ವಾಸ ಕಣ್ವತೀರ್ಥದಲ್ಲಿ. ಮೊದಲ 6 ವರುಷ ಮೌನ ಸಾಧನೆ ಮಾಡಿದ ಸ್ವಾಮಿಗಳು ಮುಂದಿನ 6 ವರುಷ ಅಧ್ಯಯನದಲ್ಲಿ ನಿರತರಾದರು. ಅಧ್ಯಾತ್ಮದ ಬಗ್ಗೆ ಹಲವಾರು ಗ್ರಂಥಗಳನ್ನು ಓದಿ ಅರ್ಥ ಮಾಡಿಕೊಂಡರು. ಅಧ್ಯಾತ್ಮದ ಸಾಧನೆಗೆ ಕೃಷಿ ಪೂರಕ ಎಂದು ಅವರಿಗೆ ತಿಳಿಯಿತು. ಅಲ್ಲಿಂದೀಚೆಗೆ, ಸಮಾಜಕ್ಕೆ ತಾನು ಹೇಗೆ ಸೇವೆ ಸಲ್ಲಿಸಬಹುದೆಂದು ಪ್ರಯೋಗಗಳಲ್ಲಿ ತೊಡಗಿದರು. ಈ ಹಂತದಲ್ಲಿ ಅವರಿಗೆ ಶ್ರೀಧರ ಕಾರಂತರ ಪರಿಚಯ. ಈಗ ಇಬ್ಬರೂ ಜೊತೆಗೂಡಿ ಸಾವಯವ ಕೃಷಿಯ ಸಾಧನೆಯಲ್ಲಿ ತೊಡಗಿದ್ದಾರೆ. ಜನರಿಗೆ ವಿಷಮುಕ್ತ ಅನ್ನ-ಆಹಾರ ಒದಗಿಸುವ ಪುಣ್ಯದ ಕಾಯಕವೇ ಜನಸೇವೆ ಎಂದು ನಂಬಿ ನಡೆಯುತ್ತಿದ್ದಾರೆ.



ಹೀಗಿರುವ ತಮಗೂ ಮೋಸ ಮಾಡುವ ಜನರಿದ್ದಾರೆ ಎಂದು ಶ್ರೀಧರ ಕಾರಂತರು ಸಂಕಟದಿಂದ ಹೇಳುತ್ತಾರೆ. ಭಾನುವಾರದ ಸಂತೆಯಲ್ಲಿ ಕೆಲವರು ತರಕಾರಿಗಳನ್ನು ತಮ್ಮ ಚೀಲಕ್ಕೆ ಹಾಕಿಕೊಂಡು ಹಣ ಪಾವತಿಸದೆ ಹೋಗಿಬಿಡುತ್ತಾರೆ. ಒಂದು ಭಾನುವಾರ ನನಗೆ 800 ರೂಪಾಯಿಗಳಷ್ಟು ಮೋಸವಾಯಿತು ಎನ್ನುವಾಗ ಅವರ ಮುಖದಲ್ಲಿತ್ತು ನೋವು.

ಇತ್ತೀಚೆಗೆ ಕಣ್ವತೀರ್ಥಕ್ಕೆ ಸಾವಯವ ಕೃಷಿಕ ಗ್ರಾಹಕ ಬಳಗದ ಪದಾಧಿಕಾರಿಗಳೊಂದಿಗೆ ಹೋಗಿ, ಶ್ರೀಧರ ಕಾರಂತರ ತರಕಾರಿ ಕೃಷಿಯನ್ನು ಕಣ್ಣಾರೆ ನೋಡಿದೆ. ಆ ಮರಳುಮಣ್ಣಿನ ಕಣಕಣ, ಅಲ್ಲಿ ಬೆಳೆಸಿದ ಗಿಡಬಳ್ಳಿಗಳು, ತರಕಾರಿಗಳು ಇದು ಕೇವಲ ಕೃಷಿಯಲ್ಲ, ನೆಮ್ಮದಿಯ ತಪಸ್ಸು ಎಂದು ಸಾರಿ ಹೇಳುತ್ತಿದ್ದವು.

## ಹಣ ಕೊಡ್ತಾರೆ !

ಶ್ರೀಮತಿ ತರಕಾರಿ ಹೆಚ್ಚುತ್ತಾ ಕುಳಿತಿದ್ದಳು. ಪಕ್ಕದಲ್ಲಿದ್ದ ಸೂರಿ, ಟೀವಿಯಲ್ಲಿ ರೊಮ್ಯಾನ್ಸ್ ಸಾಂಗ್ ನೋಡಿ ಖುಷಿ ಪಡುತ್ತಿದ್ದ.

ಶ್ರೀಮತಿ: ಟಿ ವಿಯಲ್ಲಿ ಹೀರೋ, ಹೀರೋಯಿನ್ ರೊಮ್ಯಾನ್ಸ್ ಸಾಂಗ್ ನೋಡಿ ಖುಷಿ ಪಡುವ ಬದಲು ನನ್ನ ಜೊತೆಯೂ ರೊಮ್ಯಾನ್ಸ್ ಸಾಂಗ್ ಹಾಡಬಹುದಪ್ಪ.

ಸೂರಿ: ರೊಮ್ಯಾನ್ಸ್ ಸಾಂಗ್ ಮಾಡುವುದಕ್ಕೆ ಅವರಿಗೆ ದುಡ್ಡು ಕೊಡುತ್ತಾರೆ. ನೀನೇನಾದ್ರೂ ಕೊಡ್ತಿಯೇನು?

★★★★★★★★★★★

## ಅಪಾಯ

ಶ್ರೀಮತಿ: ರೀ, ಕಟ್ಟಿ ಕೊಂಡ ಹೆಂಡತಿ ಹಾಗೂ ಹೆಲ್ಮೆಟ್ ಎರಡು ಒಂದೇ ನೋಡಿ.

ಸೂರಿ: ಅದೆಂಗೆ ಹೇಳುತ್ತೀಯಾ?

ಶ್ರೀಮತಿ: ಎರಡನ್ನೂ ತಲೆ ಮೇಲೆ ಇಟ್ಟುಕೊಳ್ಳದಿದ್ದರೆ ನಿಮ್ಮ ಜೀವಕ್ಕೇ ಅಪಾಯ!



# ಬಸವಣ್ಣನನ್ನು ನಕ್ಸಲ್ ನಾಯಕ ಮಾಡಲು ಹೊರಟಿದ್ದಾರೆ

## ಸಮಾಜ ಒಡೆಯುವ ಕೆಲಸ ಈಡೇರಲ್ಲ | ಎಡಪಂಥಿಯರ ವಿರುದ್ಧ ಅರವಿಂದ ಬೆಲ್ಲದ್ ಅಸಮಾಧಾನ

• ಪ್ರಜೋದಯ ವರದಿ

**ಹಾಸನ:** ಬಸವಣ್ಣ ಎಲ್ಲಾ ಜನರನ್ನು ಒಗ್ಗೂಡಿಸುವ ಕೆಲಸ ಮಾಡಿದರೆ, ಎಡಪಂಥಿಯರು ಬಸವಣ್ಣನನ್ನು ನಕ್ಸಲ್ ನಾಯಕನಾಗಿ ಮಾಡಲು ಹೊರಟಿದ್ದಾರೆ ಎಂದು ವಿಧಾನಸಭೆ ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ್ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಶನಿವಾರ ಹಾಸನಾಂಬೆ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲಿಂಗಾಯಿತ ಪ್ರತ್ಯೇಕ ಧರ್ಮದ ಬಗ್ಗೆ ಪ್ರತಿಕ್ರಿಯಿಸಿ, ದೇಶದಲ್ಲಿ ಇರುವವರೆಲ್ಲ ಹಿಂದೂಗಳೇ, ಬಸವಣ್ಣ ಎಲ್ಲಿಯೂ ಸಹಿತ ಸನಾತನ ಧರ್ಮ ಅನುಸರಿಸಬೇಡಿ, ಆಚಾರ ಮಾಡಬೇಡಿ ಅಂಥ ಹೇಳಿಲ್ಲ, ಬಸವಣ್ಣ ಕೂಡಲ ಸಂಗಮ ಹೆಸರು ತಗೊಂಡು ಎಲ್ಲಾ ವಚನ ಬರೆದರು. ಅಕ್ಕಮಹಾದೇವಿ ಚನ್ನಮಲ್ಲಿಕಾರ್ಜುನ ಹೆಸರು ತಗೊಂಡು ವಚನ ಬರೆದರು. ಆದರೆ, ಎಡಪಂಥೀಯ ಚಿಂತನೆ ಬಸವಣ್ಣ ಅವರನ್ನು ನಕ್ಸಲ್ ಹೀರೋ ಮಾಡಲು ಹೊರಟಿದ್ದಾರೆ ಎಂದು ಹೇಳಿದರು.

ಬಸವಣ್ಣನವರಿಗೆ ಧಾರ್ಮಿಕ ವಿಚಾರದ ಚಿಂತನೆಗಳೇ ಇರಲಿಲ್ಲ. ಆದರೀಗ ಎಡಪಂಥೀಯರು ಧರ್ಮದ ಭಾವನೆಯನ್ನು ಜನರಲ್ಲಿ ಬಿತ್ತುವ ಕೆಲಸ ಮಾಡುತ್ತಿದ್ದಾರೆ. ಬಸವಣ್ಣನವರು ಸಮಾಜದಲ್ಲಿದ್ದ ಕೆಟ್ಟ ಆಚರಣೆಯನ್ನು ಸರಿಪಡಿಸಲು, ದೇವರು ಮತ್ತು ಜನರ ನಡುವೆ ಇದ್ದ ಕಂದಕವನ್ನು ಸರಿಪಡಿಸುವ ಕೆಲಸ ಮಾಡಿದರು. ಎಲ್ಲರಿಗೂ ಇಷ್ಟ ಲಿಂಗ ನೀಡಿದರು, ಜಾತಿ ವ್ಯವಸ್ಥೆ ತೊಲಗಿಸುವ ಕೆಲಸ ಮಾಡಿದರು. ಬಸವಣ್ಣ ಜನರನ್ನು ಒಗ್ಗೂಡಿಸುವ ಕೆಲಸ ಮಾಡಿದರೆ, ಇವರು ಸಮಾಜವನ್ನು ಒಡೆಯುವ ಕೆಲಸ ಮಾಡುತ್ತಿದ್ದಾರೆ.



ಇದು ಬಹಳ ದಿನ ನಡೆಯುವುದಿಲ್ಲ, 2018 ರಲ್ಲಿ ಇದೇ ಕೆಲಸ ಮಾಡಿದರು, ಆಗ ಜನ ಅವರಿಗೆ ಬುದ್ಧಿ ಕಲಿಸಿದರು, ಈಗಲೂ ಜನ ಅವರಿಗೆ ಬುದ್ಧಿ ಕಲಿಸುತ್ತಾರೆ ಎಂದು ಎಚ್ಚರಿಸಿದರು.

ಬಿಜೆಪಿಯಲ್ಲಿ ಬಣ ರಾಜಕೀಯ ವಿಚಾರವಾಗಿ ಪ್ರತಿಕ್ರಿಯಿಸಿ, ಒಂದು ಮನೆ ಎಂದ ಮೇಲೆ ಬೇರೆ ಬೇರೆ ವಿಚಾರಗಳು ಇರುತ್ತದೆ. ಐದೂ ಬೆರಳು ಒಂದೇ ರೀತಿ ಇರಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಅದೆಲ್ಲ ಸರಿ ಹೋಗುತ್ತೆ ಅನ್ನುವ ಭರವಸೆ ಇದೆ ಎಂದರು.

**ಸರ್ಕಾರ ಜನರ ದುಡ್ಡು ತಿಂದು ತೇಗಿ ಭ್ರಷ್ಟಾಚಾರ ಮಾಡುತ್ತಿದೆ. ಅಧಿಕಾರಕ್ಕಾಗಿ ಕುರ್ಚಿ ಸಂಬಂಧ ಹೊಡೆದಾಡುತ್ತಿದ್ದಾರೆ. ಎರಡೂವರೆ ವರ್ಷವಾಯಿತು ಹತ್ತು ಕೋಟಿ ಬಿಟ್ಟು ಬೇರೆ ಅನುದಾನ ಕೊಟ್ಟಿಲ್ಲ. ಈಗೇನೋ 25 ಕೋಟಿ ಕೊಡುತ್ತಿದ್ದಾರೆ, ಅದು ಟೆಂಡರ್ ಆಗಿ ಕೆಲಸ ಮಾಡುವುದರೊಳಗೆ ಚುನಾವಣೆ ಬರುತ್ತದೆ. ಅನುದಾನ ಎನ್ನುವುದು ಇಲ್ಲವೇ ಇಲ್ಲ.**

**- ಅರವಿಂದ ಬೆಲ್ಲದ್, ವಿಧಾನಸಭೆ ಪ್ರತಿಪಕ್ಷ ಉಪನಾಯಕ**

**ಅತಿವೃಷ್ಟಿಗೆ ಸರ್ಕಾರ ಸ್ಪಂದಿಸಿಲ್ಲ:**

ರಾಜ್ಯದ ಹಲವೆಡೆ ಭಾರೀ ಮಳೆಯಿಂದ ಹಾನಿಯಾಗಿರುವ ಬಗ್ಗೆ ಪ್ರತಿಕ್ರಿಯಿಸಿ ನಮ್ಮ ಪಕ್ಷದ ವತಿಯಿಂದ ರಾಜ್ಯಾದ್ಯಂತ ಪ್ರವಾಸ ಮಾಡಿದ್ದೇವೆ. ಅತಿವೃಷ್ಟಿಗೆ ಸರ್ಕಾರ ಯಾವುದೇ ರೀತಿಯ ಸ್ಪಂದನೆ ಮಾಡಿಲ್ಲ, ಭತ್ತ, ಹೆಸರು, ತೊಗರಿ, ಅಡಿಕೆ ಬೆಳೆಗಳು ಹಾಳಾಗಿವೆ. ಸಾಮಾನ್ಯ ಜನರಿಗೆ ತೊಂದರೆ ಆಗಿದೆ, ರೈತರ ಬೆಳೆ, ರಸ್ತೆಗಳು ಹಾಳಾಗಿವೆ. ಆದರೂ ರಾಜ್ಯ ಸರ್ಕಾರ ಒಂದು ಪೈಸೆ ಸ್ಪಂದನೆ ಮಾಡಿಲ್ಲ ಎಂದು ಅವರು ದೂರಿದರು.

ಮುಖ್ಯಮಂತ್ರಿಗಳು ಇಡೀ ರಾಜ್ಯಾದ್ಯಂತ ಪ್ರವಾಸ ಮಾಡಬೇಕಿತ್ತು, ಅವರು ಪ್ರವಾಸ ಮಾಡುತ್ತಿಲ್ಲ. ಜಿಲ್ಲಾ ಮಂತ್ರಿಗಳು ಕೂಡ ಪ್ರವಾಸ ಮಾಡಿಲ್ಲ. ಸರ್ಕಾರಕ್ಕೆ ರೈತರ ಬಗ್ಗೆ, ಜನರ ಬಗ್ಗೆ ಸಂಪೂರ್ಣ ತಾತ್ಸಾರ ಮಾಡಿದೆ.

ಸರ್ಕಾರ ಇದೆ ಎನ್ನುವ ಕುರುಹು ನಮಗೆ ಕಾಣುತ್ತಿಲ್ಲ, ಅಧಿವೇಶನದಲ್ಲಿ ಸರ್ಕಾರದ ಲೋಪದೋಷ ಎತ್ತಿ ತೋರಿಸಿದ್ದೇವೆ ಆದರೂ ಎಚ್ಚೆತ್ತುಕೊಂಡಿಲ್ಲ. ಅತಿವೃಷ್ಟಿ ಆಗಿರುವ ಎಲ್ಲಾ ಕಡೆ ಪ್ರವಾಸ ಮಾಡಿ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡಿದ್ದೇವೆ. ಅದು ಗೊತ್ತಾಗುತ್ತಿದ್ದಂತೆಯೇ ಇತ್ತೀಚೆಗೆ ನೋಡಿ ಬಂದಿದ್ದಾರೆ. ಆದರೂ ನಾವು ವಿರೋಧ ಪಕ್ಷವಾಗಿ ಏನು ಕೆಲಸ ಮಾಡಬೇಕು ಮಾಡುತ್ತೇವೆ ಎಂದು ಅವರು ತಿಳಿಸಿದರು.

### ಜಿಲ್ಲಾಡಳಿತದಿಂದ ಉತ್ತಮ ವ್ಯವಸ್ಥೆ

ಹಾಸನಾಂಬೆ ಜಾತ್ರೆಯಲ್ಲಿ ಈ ಬಾರಿ ಜಿಲ್ಲಾಡಳಿತ ಉತ್ತಮ ವ್ಯವಸ್ಥೆ ಮಾಡಿದೆ. ಸಚಿವ ಕೃಷ್ಣ ಬೈರೇಗೌಡ ನೇತೃತ್ವದಲ್ಲಿ ಒಳ್ಳೆಯ ವ್ಯವಸ್ಥೆ ಮಾಡಿದ್ದಾರೆ. ಎಲ್ಲರೂ ಸಮಾಧಾನದಿಂದ ದರ್ಶನ ಮಾಡುತ್ತಿದ್ದಾರೆ. ಕಳೆದ ಬಾರಿ ವಿವಿಐಪಿ ಪಾಸ್‌ಗಳಿಂದ ದೊಡ್ಡ ಪ್ರಮಾಣದಲ್ಲಿ ತೊಂದರೆ ಆಗಿತ್ತು, ಈ ಸಲ ಸಾರ್ವಜನಿಕರಿಗೆ ತೊಂದರೆ ಆಗದಂತೆ ವ್ಯವಸ್ಥೆ ಮಾಡಿದ್ದಾರೆ, ವಿವಿಐಪಿ ಗಳಿಂದ ಸಾಮಾನ್ಯ ಜನಕ್ಕೆ ತೊಂದರೆ ಆಗದಂತೆ ಈ ರೀತಿಯ ವ್ಯವಸ್ಥೆ ಮಾಡಬೇಕು ಎಂದು ಬೆಲ್ಲದ್ ಅವರು ಸಲಹೆ ನೀಡಿದರು.

# ಹಾಸನಾಂಬ ದೇವಿ ದರ್ಶನಕ್ಕೆ ಲಕ್ಷಕ್ಕೂ ಅಧಿಕ ಭಕ್ತರ ಆಗಮನ

» ಮೊದಲನೇ ಪುಟದಿಂದ

ಬೆಳಿಗ್ಗೆ 5 ರಿಂದ ಮಧ್ಯಾಹ್ನ 2 ಗಂಟೆವರೆಗೆ ಅರ್ಧ ದಿನದಲ್ಲಿ 91 ರಿಂದ 92 ಸಾವಿರ ಜನರು ದೇವಿ ದರ್ಶನ ಪಡೆದುಕೊಂಡರು. ಮಧ್ಯಾಹ್ನ 3.30ರವರೆಗೆ ನೈವೇದ್ಯಕ್ಕಾಗಿ ಗರ್ಭಗುಡಿ ಬಾಗಿಲು ಬಂದ್ ಮಾಡಲಾಗಿತ್ತು. ಮಧ್ಯಾಹ್ನ 3.30 ರಿಂದ ಮತ್ತೆ ಆರಂಭಗೊಂಡ ದರ್ಶನ ಭಾನುವಾರ ಮುಂಜಾನೆ 3ರ ವರೆಗೆ ಭಕ್ತರಿಗೆ ದೇವಿ ದರ್ಶನ ಕರುಣಿಸಲಿದ್ದಾಳೆ.

ಭಾನುವಾರ ರಜೆ ಕಾರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆಯಿದ್ದು ದಿನದ 24 ಗಂಟೆಯೂ ದೇವಿ ದರ್ಶನಕ್ಕೆ ಜಿಲ್ಲಾಡಳಿತ ವ್ಯವಸ್ಥೆ ಮಾಡಿದೆ. ಹೀಗಾಗಿ ಭಕ್ತರ ಜೊತೆಗೆ ವಿವಿಧ ಕ್ಷೇತ್ರದ ಗಣ್ಯರು ಸಹ ಆಗಮಿಸಿ ದೇವಿಯ ದರ್ಶನ ಪಡೆಯಲಿದ್ದಾರೆ.

**ಕೋಮು ಸೌಹಾರ್ದತೆ ಸಾಕ್ಷಿ**

ಧರ್ಮ ದರ್ಶನ ಸಾಲಿನಲ್ಲಿ ವಿಶೇಷವಾಗಿ ವಿಜಯಪುರ ಜಿಲ್ಲೆ ಸಿಂದಗಿಯಿಂದ ಬಂದ ವಕೀಲರ ತಂಡದೊಂದಿಗೆ ಮುಸ್ಲಿಂ ಸಮುದಾಯದ ವ್ಯಕ್ತಿ ಅನ್ವರ್ ಹುಸೇನ್ ಎಂಬುವವರು ಹಾಸನಾಂಬ ದರ್ಶನ ಪಡೆದು ಮಾತನಾಡಿ, ಎಲ್ಲಾ ವ್ಯವಸ್ಥೆ ಚೆನ್ನಾಗಿ ಮಾಡಿದ್ದಾರೆ. 3 ವರ್ಷಗಳಿಂದ ದೇವಿ ದರ್ಶನಕ್ಕೆ ಬರುತ್ತದ್ದೇವೆ. ಎಲ್ಲಿ ಭಕ್ತಿ ಇದೆಯೋ ಅಲ್ಲಿ ದೇವರಿದ್ದಾನೆ, ನಾವು ಸೌಹಾರ್ದತೆಯಿಂದ ಇರುತ್ತೇವೆ. ಭೂತ, ಭವಿಷ್ಯ, ವರ್ತಮಾನದಲ್ಲೂ ನಾವು ಸೌಹಾರ್ದತೆಯಿಂದ ಇರುತ್ತೇವೆ. ಭಕ್ತಿ ಇರುವ ಕಡೆ ದೇವರು ಇರುತ್ತಾನೆ. ಎಲ್ಲಾ ದೇವರು ಒಂದೇ, ಎಲ್ಲಾ ಶಕ್ತಿ ದೇವತೆಗಳೂ ಒಂದೇ. ಸೃಷ್ಟಿಕರ್ತ ಒಬ್ಬನೇ ಎಂದು ಸೌಹಾರ್ದತೆಯ ಸಂದೇಶವನ್ನು ಸಾರಿದರು.

ಸಕಲೇಶಪುರ ಉರುಡಿಯಿಂದ ಬಂದಿದ್ದ ಮುಸ್ಲಿಂ ಮಹಿಳೆ ಹಸೀನಾ ಲತೀಫ್, ತಮ್ಮ ಗೆಳತಿ ದೀಪಾ ಮಂಜುಳಾ ಅವರೊಂದಿಗೆ ಹಾಸನಾಂಬ ದರ್ಶನ ಪಡೆದು ಸಂತಸ ವ್ಯಕ್ತಪಡಿಸಿ, ಕಳೆದ ಮೂರು ವರ್ಷಗಳಿಂದ ಹಾಸನಾಂಬ ದರ್ಶನಕ್ಕೆ ಬರುತ್ತಿದ್ದೇನೆಂದು ತಿಳಿಸಿದರು.

**ಕಡಿಮೆಯಾದ ಗಣ್ಯರ ಸಂಖ್ಯೆ**

ವಿವಿಐಪಿ, ವಿಐಪಿ ಪಾಸ್ ರದ್ದುಗೊಳಿಸಿರುವುದರಿಂದ ಗಣ್ಯರ ಸಂಖ್ಯೆ ಕಡಿಮೆಯಾಗಿದೆ. ಶಾಸಕರು, ಸಚಿವರು, ಸಂಸದರು, ನ್ಯಾಯಾಧೀಶರು, ಅಧಿಕಾರಿಗಳಿಗೆ ನಗರದ ಪ್ರವಾಸಿ ಮಂದಿರದಲ್ಲಿ ಶಿಷ್ಟಾಚಾರದ ವ್ಯವಸ್ಥೆ ಮಾಡಿ, ಸಮಯ ನಿಗದಿಗೊಳಿಸಿರುವುದರಿಂದ ಗಣ್ಯರು, ಬೆಂಬಲಿಗರ ಸಂಖ್ಯೆ ಕ್ಷೀಣಿಸಿ, ಸಾಮಾನ್ಯ ಭಕ್ತರಿಗೆ ಅನುಕೂಲವಾಗಿದೆ.

# ಭಕ್ತರು ಖುಷಿಯಾಗಿ ದರ್ಶನ ಪಡೆಯಲಿ

» ಮೊದಲನೇ ಪುಟದಿಂದ

ಜನರಿಗಾಗಿ ಬದಲಾವಣೆ ಮಾಡಿದ್ದೇವೆ. ಸಮಸ್ಯೆ ಆದ ಮೇಲೆ ಹೋಗಿ ಪರಿಹಾರ ಮಾಡೋದಲ್ಲ, ಸಮಸ್ಯೆ ಆಗದ ಹಾಗೆ ವ್ಯವಸ್ಥೆ ಮಾಡೋದು ಮುಖ್ಯ ಎಂದು ಹೇಳಿದ್ದೇವೆ ಎಂದರು.

1000 ರೂ. ವಿಶೇಷ ದರ್ಶನ 2-3 ನಿಮಿಷದಲ್ಲಿ ಆಗಿದೆ, 300 ರೂ.ವಿಶೇಷ ದರ್ಶನ ಹತ್ತು ನಿಮಿಷ ದಲ್ಲಿ ಆಗಿದೆ. ಹಿಂದೆ ಆರೇಳು ಗಂಟೆ ಆಗುತ್ತಿತ್ತು. ಇದು ನಮಗೆ ಸಾರ್ಥಕತೆ ಎನಿಸುತ್ತಿದೆ. ಸಾಮಾನ್ಯ ಜನರಿಗೆ ತುಂಬಾ ಚೆನ್ನಾಗಿ ದರ್ಶನ ಆಗುತ್ತಿದೆ. ಅದಕ್ಕಿಂದ ನಮಗೆ ಖುಷಿಯ ವಿಚಾರ ಇಲ್ಲ. ನಾವು ತಂದಿರುವ ಬದಲಾವಣೆಗಳು ಭಕ್ತರಿಗೆ ಅನುಕೂಲ ವಾಗಿವೆ. ರಾಜ್ಯದ ಮೂಲೆ ಮೂಲೆಗಳಿಂದ ಬಂದು ಭಕ್ತರು ದರ್ಶನ ಮಾಡಿದ್ದಾರೆ. ಇದು ನಮಗೆ ಸಂತೋಷದ ವಿಷಯ ಎಂದು ಹೇಳಿದರು.

ಅರ್ಧ ದಿನದಲ್ಲಿ 91 ಸಾವಿರ ಭಕ್ತರು ಹಾಸ ನಾಂಬ ದರ್ಶನ ಪಡೆದಿದ್ದಾರೆ. ಕಳೆದ ಐದಾರು ವರ್ಷಗಳಿಗೆ ಹೋಲಿಸಿದರೆ ಇದು ದಾಖಲೆ. ಸಾರ್ವಜನಿಕರು ಧರ್ಮ ದರ್ಶನ ಕೂಡ ಕೇವಲ ಅರ್ಧ ಗಂಟೆಯಿಂದ ಒಂದೂವರೆ ಗಂಟೆಯಲ್ಲಿ ಮುಗಿಯುತ್ತಿದೆ. ಅದರಿಂದ ನಮಗೆ ಸಾರ್ಥಕತೆ ಭಾವ ಮೂಡಿದೆ. ನಾವು ಮಾಡಿದ ಬದಲಾವಣೆ, ಅದರ ಸಮರ್ಪಕ ಜಾರಿ ಸಾಮಾನ್ಯ ಜನರಿಗೆ ತುಂಬಾ ಅನುಕೂಲವಾಗಿದೆ. ಗಣ್ಯರೂ ಕೂಡ ತುಂಬಾ ಖುಷಿ ಪಟ್ಟಿದ್ದಾರೆ. ಪಕ್ಷಾತೀತವಾಗಿ ಎಲ್ಲರೂ ಸೇರಿ ತೆಗೆದುಕೊಂಡ ತೀರ್ಮಾನ ಒಮ್ಮತವಾಗಿ ಜಾರಿ ಆಗಿದೆ ಎಂದು ತಿಳಿಸಿದರು.

ಸಂಸದ ಶ್ರೇಯಸ್ ಪಟೇಲ್, ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ಜಿಲ್ಲಾಧಿಕಾರಿ ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ, ದೇವಸ್ಥಾನ ಆಡಳಿತಾಧಿಕಾರಿ ಮಾರುತಿ, ಜಿಪಂ ಸಿಇಒ ಬಿ.ಆರ್.ಪೂರ್ಣಿಮಾ ಮತ್ತಿತರರು ಹಾಜರಿದ್ದರು.

# ಪ್ಲಸ್‌ಗೆ ಫಲಾನುಭವಿಗಳ ನಿರಾಸಕ್ತಿ

» ಮೊದಲನೇ ಪುಟದಿಂದ

**ತರಬೇತಿಗೆ ನಿರಾಸಕ್ತಿ ಏಕೆ:** ಯುವನಿಧಿ ಫಲಾನುಭವಿಗಳು ಯುವನಿಧಿ ಪ್ಲಸ್ ಅಡಿಯಲ್ಲಿ ತರಬೇತಿಗೆ ಸ್ಕಿಲ್ ಕನೆಕ್ಟ್ ಪೋರ್ಟ್‌ನಲ್ಲಿ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇಲ್ಲಿ ನೋಂದಣಿಯಾದರೆ ಅಂತಹವರಿಗೆ ಆಸಕ್ತಿಗನುಸಾರವಾಗಿ ಸರ್ಕಾರವೇ ವೃತ್ತಿ ತರಬೇತಿ ನೀಡಲಿದೆ.

ತರಬೇತಿಗೆ ಆಯ್ಕೆ ಯಾದವರನ್ನು ಯುವನಿಧಿ ಲಾಭದಿಂದ ಹೊರಗಿಡಲಾಗುತ್ತದೆಂಬ ವದಂತಿ ಹರಡಿ ಬಹುತೇಕರು ನಿರಾಸಕ್ತಿ ತೋರುತ್ತಿದ್ದಾರೆ ಎನ್ನಲಾಗಿದೆ.

# 2ನೇ ಟೆಸ್ಟ್: ವಿಂಡೀಸ್‌ಗೆ 378 ರನ್ ಹಿನ್ನಡೆ

## 3 ವಿಕೆಟ್ ಕಬಳಿಸಿದ ರವೀಂದ್ರ ಜಡೇಜಾ



• ಪ್ರಜೋದಯ ವರದಿ

**ನವದೆಹಲಿ:** ವೆಸ್ಟ್ ಇಂಡೀಸ್ ವಿರುದ್ಧದ 2ನೇ ಟೆಸ್ಟ್ ಪಂದ್ಯದ 2ನೇ ದಿನದಾಟ ಅಂತ್ಯವಾಗಿದ್ದು, ಮೊದಲ ಇನ್ನಿಂಗ್ಸ್ ಆರಂಭಿಸಿರುವ ವಿಂಡೀಸ್ ಪಡೆ 4 ವಿಕೆಟ್ ನಷ್ಟಕ್ಕೆ 140 ರನ್ ಕಲೆಹಾಕಿದೆ.

ದೆಹಲಿ ಅರುಣ್ ಜೇಟ್ಲಿ ಮೈದಾನದಲ್ಲಿ ನಡೆಯುತ್ತಿರುವ 2ನೇ ಟೆಸ್ಟ್ ಪಂದ್ಯದ 2ನೇ ದಿನದಾಟ ಅಂತ್ಯವಾಗಿದ್ದು, ವಿಂಡೀಸ್ ಮೊದಲ ಇನ್ನಿಂಗ್ಸ್ ಬ್ಯಾಟಿಂಗ್‌ನಲ್ಲೂ ಭಾರತೀಯ ಬೌಲರ್‌ಗಳ ಆರ್ಭಟ ಮುಂದುವರೆದಿದೆ.

ವಿಂಡೀಸ್‌ನ 4 ಪ್ರಮುಖ ವಿಕೆಟ್‌ಗಳು ಪತನವಾಗಿದ್ದು ವೆಸ್ಟ್ ಇಂಡೀಸ್ ಇನ್ನೂ 378 ರನ್‌ಗಳ ಹಿನ್ನಡೆಯಲ್ಲಿದೆ.

ವಿಂಡೀಸ್ ಪರ ಆರಂಭಿಕ ಬ್ಯಾಟರ್ ಜಾನ್ ಕಾಂಪ್ಬೆಲ್ 10 ರನ್, ಚಂದ್ರಪಾಲ್ 34 ರನ್, ಅಲಿಕ್ ಅಥನಾಜೆ 41 ರನ್, ರೋಸ್ಟನ್ ಚೇಸ್ ಶೂನ್ಯ ಸಂಪಾದನೆ ಮಾಡಿದ್ದಾರೆ.

31 ರನ್ ಗಳಿಸಿರುವ ಶಾಯ್ ಹೋಪ್ ಮತ್ತು 14 ರನ್ ಗಳಿಸಿರುವ ಇಮ್ಲಾಚ್ 3ನೇ ದಿನಕ್ಕೆ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಭಾರತದ ಪರ ರವೀಂದ್ರ ಜಡೇಜಾ 3 ವಿಕೆಟ್ ಮತ್ತು ಕುಲದೀಪ್ ಯಾದವ್ 1 ವಿಕೆಟ್ ಪಡೆದಿದ್ದಾರೆ.

# ಅ.17ಕ್ಕೆ ನೌಕರರ ಸಂಘದ ಪದಾಧಿಕಾರಿಗಳಿಗೆ ಅಭಿನಂದನೆ

• ಪ್ರಜೋದಯ ವರದಿ

**ಹಾಸನ:** ನಗರದ ವಿಶ್ವೇಶ್ವರಯ್ಯ ಭವನದಲ್ಲಿ ಅ.17ರ ಶುಕ್ರವಾರ ಸಂಜೆ 5 ಗಂಟೆಗೆ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಜಿಲ್ಲೆಯಿಂದ ಆಯ್ಕೆಯಾಗಿರುವ ಪದಾಧಿಕಾರಿಗಳಿಗೆ ಅಭಿನಂದನೆ ಸಮಾರಂಭ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಸರ್ಕಾರಿ ನೌಕರರ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಂ.ಎನ್.ಪರಮೇಶ್ ಅವರು ಹೇಳಿದರು.




ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳು, ಸರ್ಕಾರಿ, ಅರೆ ಸರ್ಕಾರಿ ಇಲಾಖೆ ನೌಕರರ ಸಂಘಗಳ ವತಿಯಿಂದ ಸಮಾರಂಭ ಹಮ್ಮಿಕೊಳ್ಳಲಾಗಿದೆ. ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ನೇತೃತ್ವದಲ್ಲಿ ರಾಜ್ಯ ಮಟ್ಟದ ಸಂಘದಲ್ಲಿ ಜಿಲ್ಲೆಯಿಂದ ಹಲವರು ಸ್ಥಾನ ಪಡೆದಿದ್ದಾರೆ. ಜಿಲ್ಲಾ ನೌಕರರ ಕೋ-ಆಪರೇ ಟಿವ್ ಸೊಸೈಟಿ ಹಾಗು ಜಿಲ್ಲಾ ರಾಜ್ಯ ಸರ್ಕಾರಿ, ಅರೆ ಸರ್ಕಾರಿ ಹಾಗು ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷ ಮತ್ತು ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಕೆ.ಎಂ.ಶ್ರೀನಿವಾಸ್ ರಾಜ್ಯ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆಂದರು.

ಸೊಸೈಟಿ ಗೌರವಾಧ್ಯಕ್ಷ ಜಿ.ಪಿ. ವಿಶ್ವನಾಥ ಅವರು ರಾಜ್ಯ ಸಂಘಟನಾ ಕಾರ್ಯದರ್ಶಿ, ಸೊಸೈಟಿ ನಿರ್ದೇಶಕ ಎಸ್.ಮಧು ಅವರು ರಾಜ್ಯ ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಹಾಗೂ ಟಿ.ರಾಜು ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ ಎಂದರು.

ನಮ್ಮ ಸೊಸೈಟಿ ವತಿಯಿಂದ ಹಾಗು ವಿವಿಧ ವೃಂದ ಸಂಘಗಳು, ಇಲಾಖೆಯ ಆತ್ಮೀಯರು ಮತ್ತು ಸ್ವಾಭಿಮಾನಿ ಸ್ನೇಹ ಬಳಗದ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯಿಂದ ರಾಜ್ಯ ಸಂಘದ ವಿವಿಧ ಹುದ್ದೆಗಳಿಗೆ ಆಯ್ಕೆಯಾಗಿರುವವರಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ. ಎಲ್ಲರೂ ಬಂದು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಅಭಿನಂದನಾ ಸಮರ್ಪಣೆಯನ್ನು ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ, ರಾಜ್ಯ ಉಪಾಧ್ಯಕ್ಷ ಕೆ.ಎಂ. ಶ್ರೀನಿವಾಸ್ ನಡೆಸಿಕೊಡಲಿದ್ದಾರೆ. ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಟಿ.ರಾಜು, ಜಿ.ಪಿ.ವಿಶ್ವನಾಥ, ರಾಜ್ಯ ಸಾಂಸ್ಕೃತಿಕ ಕಾರ್ಯದರ್ಶಿ ಎಸ್.ಮಧು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಸರ್ಕಾರಿ ನೌಕರರ ಕೋ-ಆಪರೇಟಿವ್ ಸೊಸೈಟಿ ಗೌರವಾಧ್ಯಕ್ಷ ಬಿ.ಎನ್.ರಾಜ ಶೇಖರಪ್ಪ, ನಿರ್ದೇಶಕ ಎನ್.ಪಾಲಾಕ್ಷ, ಉಪಾಧ್ಯಕ್ಷ ಬಿ.ಆರ್.ಧರ್ಮ, ಗೌರವ ಕಾರ್ಯದರ್ಶಿ ಸತೀಶ್, ಉಪಾಧ್ಯಕ್ಷ ಗೋಪಾಲಕೃಷ್ಣ ಮತ್ತಿತರರಿದ್ದರು.

# ಕೋಟಿ ಕೋಟಿ ದೋಚಿದ್ದ ಸೈಬರ್ ವಂಚಕ ಸೆರೆ

» ಮೊದಲನೇ ಪುಟದಿಂದ

ಸುಮಾರು 150 ಕೋಟಿ ರೂ. ಆನ್‌ಲೈನ್ ವಂಚನೆಯ ಹಣ ಜಮೆಯಾಗಿದೆ. ಆರೋಪಿಗಳು 132 ಕೋಟಿ ರೂ. ಹಣ ವಿತ್ ಡ್ರಾ ಮಾಡಿದ್ದು, ಖಾತೆಯಲ್ಲಿ 18 ಕೋಟಿ ರೂ. ಹಾಗೆ ಇದೆ. ಆ ಖಾತೆಗಳನ್ನು ಪೊಲೀಸರು ಫ್ರೀಜ್ ಮಾಡಿದ್ದಾರೆ.

ಆರೋಪಿಗಳು ದಾವಣಗೆರೆ ನಗರದ ನಿಟ್ಟುವಳ್ಳಿ ಕೆನರಾ ಬ್ಯಾಂಕ್ ಪ್ರಮೋದ್ ಎಂಬುವವರ ಖಾತೆಯಿಂದ 52,60, 523 ರೂ. ಹಣವನ್ನು ಎಗರಿಸಿದ್ದರು. ಈ ಸಂಬಂಧ ದಾವಣಗೆರೆ ಸೈಬರ್ ಕ್ರೈಮ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಆರೋಪಿಗಳ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದರು. ಆರೋಪಿಯ ಮೊಬೈಲ್ ಪರಿಶೀಲನೆ ವೇಳೆ ಬಹುದೊಡ್ಡ ಪ್ರಕರಣದ ರಹಸ್ಯ ಬಯಲಾಗಿದೆ.

ಉತ್ತರ ಪ್ರದೇಶದ ಗಾಜೀಯಬಾದ್, ಜಮ್ಮು ಮತ್ತು ಕಾಶ್ಮೀರದ ಶ್ರೀನಗರ, ಆಂಧ್ರ ಪ್ರದೇಶದ ಏಲೂರು, ಮಹಾರಾಷ್ಟ್ರದ ಮುಂಬೈ ನಗರ, ಬೆಂಗಳೂರು ನಗರ, ದಾವಣಗೆರೆಯ ಸೈಬರ್ ಕ್ರೈಂ ಠಾಣೆಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಆರೋಪಿಗಳು ಭಾಗಿಯಾಗಿದ್ದಾರೆ ಎಂದು ತಿಳಿದು ಬಂದಿದೆ.

# 12 ಅಡಿ ಉದ್ದದ ಕಾಳಿಂಗ ಸರ್ಪ ಸೆರೆ



**ಸಕಲೇಶಪುರ:** ಯಸಳೂರು ಹೋಬಳಿ ವಣಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಂಬಲಗೇರಿ ಗ್ರಾಮದಲ್ಲಿ 12 ಅಡಿ ಉದ್ದದ ಕಾಳಿಂಗ ಸರ್ಪವನ್ನು ಹಿಡಿದು ಬಿಸ್ಲೆ ರಕ್ಷಿತಾರಣ್ಯಕ್ಕೆ ಬಿಡಲಾಯಿತು. ಶನಿವಾರ ಮುಂಜಾನೆ ಕಾಳಿಂಗ ಸರ್ಪ ಕಾಣಿಸಿಕೊಂಡಿದ್ದು ಗ್ರಾಮಸ್ಥರು, ಕಾಫಿ ತೋಟಕ್ಕೆ ಹೋಗುವ ಕೂಲಿ ಕಾರ್ಮಿಕರಿಗೆ ಆತಂಕ ಉಂಟಾಗಿತ್ತು. ಉರಗ ತಜ್ಞ ಹರೀಶ್ ಅವರ ಸಹಾಯದಿಂದ ಸರ್ಪವನ್ನು ಹಿಡಿಯಲಾಯಿತು.

ಮಲೆನಾಡು ವ್ಯಾಪ್ತಿಯಲ್ಲಿ ಕಾಣಿಸಿಕೊಳ್ಳುತ್ತಿರುವ ಕಾಳಿಂಗ ಸರ್ಪಗಳು ಭಯ ಉಂಟು ಮಾಡಿದ್ದು, ಈ ಹಾವುಗಳು ಎಲ್ಲಿಂದ ಬರುತ್ತಿವೆ. ಯಾರು ತಂದು ಬಿಡುತ್ತಿದ್ದಾರೆ ಎಂಬುದರ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕೂಲಿ ಕಾರ್ಮಿಕರು ಹಾಗೂ ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಸಿಎಂ ಔತಣಕೂಟದಲ್ಲಿ ವಿಶೇಷತೆ ಏನಿಲ್ಲ

• ಪ್ರಜೋದಯ ವರದಿ

**ಹಾಸನ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಯೋಜಿಸಿರುವ ಔತಣಕೂಟದಲ್ಲಿ ವಿಶೇಷತೆ ಏನಿಲ್ಲ ಎಂದು ಚಾಮರಾಜನಗರ ಸಂಸದ ಸುನಿಲ್ ಬೋಸ್ ಅವರು ಹೇಳಿದರು.

ಶನಿವಾರ ಹಾಸನಾಂಬ ದರ್ಶನ ಪಡೆದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿನ್ನರ್ ಪಾರ್ಟಿ ಲಿಕ್ಸ್ ಹೊಸದೇನಲ್ಲ. ನಮ್ಮ ಮನೆಗೂ ಹಿರಿಯ ಸಚಿವರು ಬರುತ್ತಾರೆ, ನಮ್ಮ ತಂದೆ ಹೆಚ್.ಸಿ.ಮಹದೇವಪ್ಪ ಅವರು ಕೂಡ ಭಾಗವಹಿಸುತ್ತಿರುತ್ತಾರೆ ಅದರಲ್ಲಿ ವಿಶೇಷ ಏನೂ ಇಲ್ಲ. ರಾಜಕೀಯ ಚರ್ಚೆಯೂ ಇಲ್ಲ, ಆಗಾಗ್ಗೆ ಊಟಕ್ಕೆ ಸೇರ್ತಾರೆ ಅದು ಎಲ್ಲರಿಗೂ ಗೊತ್ತಿದೆ. ಸ್ನೇಹಿತರಾಗಿಯೂ ಅವಾಗವಾಗ ಸೇರುತ್ತಿರುತ್ತಾರೆ. ಅದಕ್ಕೆ ವಿಶೇಷವಾದ ಅರ್ಥ ಏನೂ ಇಲ್ಲ. ಎಂದರು.



ರಾಜ್ಯದಲ್ಲಿ ಮಳೆಯಿಂದ ಹಾನಿ ನಿರ್ವಹಣೆ ಸರ್ಕಾರ ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿ, ಈ ಬಾರಿ ತುಂಬಾ ಮಳೆಯಾಗಿದೆ, ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ, ಮುಖ್ಯಮಂತ್ರಿಗಳು ಆಯಾ ಜಿಲ್ಲಾ ಉಸ್ತುವಾರಿ ಸಚಿವರಿಗೆ ಸೂಚನೆ ಕೊಟ್ಟಿದ್ದಾರೆ. ಅವರು ತಮ್ಮ ಜವಾಬ್ದಾರಿ ನಿರ್ವಹಿಸುತ್ತಿದ್ದು, ಸರ್ಕಾರ ಪರಿಹಾರ ಕೂಡ ಘೋಷಣೆ ಮಾಡಿದೆ ಎಂದು ಹೇಳಿದರು.

ಪ್ರತಿವರ್ಷ ನವರಾತ್ರಿ ಬಳಿಕ ವರ್ಷಕ್ಕೆ ಒಂದು ಬಾರಿ ದೇವಾಲಯ ತೆರೆಯುತ್ತೆ, ಇದು ಪವಾಡ ಇರುವಂತಹ ದೇವಸ್ಥಾನ, ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರಾದ ಕೃಷ್ಣ ಬೈರೇಗೌಡ ಬಹಳ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದಾರೆ. ಕಳೆದ ಬಾರಿ ಬಹಳ ಗೊಂದಲಗಳು ಸೃಷ್ಟಿ ಆಗಿತ್ತು. ಜನಸಾಮಾನ್ಯರು ಜಿಲ್ಲಾಡಳಿತಕ್ಕೆ ಶಾಪ ಹಾಕಿರುವುದನ್ನು ನೋಡಿದ್ದೇವೆ, ಆದರೆ ಈ ಬಾರಿ ಉತ್ತಮ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿದೆ. ತಾಯಿ ಹಾಸನಾಂಬ ಎಲ್ಲರಿಗೂ ಒಳ್ಳೆಯದು ಮಾಡಲಿ ಎಂದು ಆಶಿಸಿದರು.

# ಬಾಕಿ ವೇತನ ಬಿಡುಗಡೆಗಾಗಿ ಬಿಸಿಯೂಟ ನೌಕರರ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಬಾಕಿ ವೇತನ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ಜಿಲ್ಲೆಯ ಬಿಸಿಯೂಟ ನೌಕರರು ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಜಿಲ್ಲೆಯಲ್ಲಿ ನಾಲ್ಕು ಸಾವಿರ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅತ್ಯಲ್ಪ ವೇತನದಿಂದ ಕುಟುಂಬ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಕನಿಷ್ಠ ಸಂಬಳವೂ ಕಳೆದ ಎರಡು ತಿಂಗಳಿಂದ ಬಿಡುಗಡೆಯಾಗದೆ ಭಾರೀ ಸಮಸ್ಯೆಯಾಗುತ್ತಿದೆಯೆಂದರು.

ಅಕ್ಷರ ದಾಸೋಹ ನೌಕರರ ಸಂಘದ ಅಧ್ಯಕ್ಷೆ ಎಂ.ಬಿ.ಪುಷ್ಪ ಅವರು ಮಾತನಾಡಿ, 24 ವರ್ಷಗಳಿಂದ ಬಿಸಿಯೂಟ ಯೋಜನೆಯಡಿ ಶ್ರಮಿಸುತ್ತಿದ್ದೇವೆ. ಮಕ್ಕಳ ಅಪೌಷ್ಟಿಕತೆ ನಿವಾರಣೆ, ಶಿಕ್ಷಣಕ್ಕೆ ಪ್ರೋತ್ಸಾಹ ಮತ್ತು ಸಾಮಾಜಿಕ ಸಮಾನತೆಯ ಅಭಿವೃದ್ಧಿಗೆ ನಾವೇ ಬೆನ್ನೆಲುಬು. ಸರ್ಕಾರದ ನಿರ್ಲಕ್ಷ್ಯದಿಂದ ನಾವು ಬಾಕಿ ವೇತನಕ್ಕಾಗಿ ಬೀದಿಗಿಳಿಯಬೇಕಾದ ಪರಿಸ್ಥಿತಿ ಬಂದಿದೆಯೆಂದು ಕಿಡಿಕಾರಿದರು.




ಪ್ರತಿ ತಿಂಗಳ 5ನೇ ತಾರೀಖಿನೊಳಗೆ ವೇತನ ನೀಡಬೇಕೆಂದು ನಿಯಮ ವಿದ್ದರೂ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಸಂಬಳ ಇಂದಿಗೂ ಬಿಡುಗಡೆಯಾಗಿಲ್ಲ. ಅಲ್ಪ ಸಂಬಳದಲ್ಲಿ ಬದುಕುತ್ತಿರುವ ಸಾವಿರಾರು ಮಹಿಳೆಯರು ಸಾಲಬಾಧೆ, ಕುಟುಂಬ ನಿರ್ವಹಣೆ ತೊಂದರೆಯಿಂದ ನರಳುತ್ತಿದ್ದಾರೆ ಎಂದು ಹೇಳಿದರು.

ಕಾರ್ಪೊರೇಟ್ ಕಂಪನಿಗಳಿಗೆ ಸಾವಿರಾರು ಕೋಟಿ ರೂ. ತೆರಿಗೆ ರಿಯಾಯಿತಿ ಕೊಡುತ್ತಿದ್ದರೆ ಬಿಸಿಯೂಟ ನೌಕರರಿಗೆ ಕನಿಷ್ಠ ವೇತನ ನೀಡಲು ಸರ್ಕಾರ ಹಿಂಜರಿಯುತ್ತಿದೆ. ಮೋದಿ ಸರ್ಕಾರ 29 ಕಾರ್ಮಿಕ ಕಾನೂನು ರದ್ದುಮಾಡಿ 4 ಸಂಹಿತೆ ತರಲು ಮುಂದಾಗಿದೆ. ಅದರ ಪರಿಣಾಮ ಶೇ.70 ಕಾರ್ಮಿಕರಿಗೆ ಸೌಲಭ್ಯಗಳು ಅನ್ವಯವಾಗುವುದೇ ಇಲ್ಲ ಎಂದು ವಕ್ತಾರರು ಆರೋಪಿಸಿದರು. ಹಿಂದಿನಂತೆ ಮುಷ್ಕರ ನಡೆಸಿ ಹಕ್ಕು ಪಡೆಯುವ ವ್ಯವಸ್ಥೆಯನ್ನೇ ಸರ್ಕಾರ ಕುಂಠಿತಗೊಳಿಸಿದೆಯೆಂದರು.

2025ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಬಾಕಿ ವೇತನವನ್ನು ತಕ್ಷಣ ಬಿಡುಗಡೆ ಮಾಡಬೇಕು. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ವೇತನ ವಿತರಣೆ ಖಚಿತಪಡಿಸಬೇಕು. ಬಿಸಿಯೂಟ ನೌಕರರಿಗೆ 26 ಸಾವಿರ ರೂ. ಕನಿಷ್ಠ ವೇತನ, 10 ಸಾವಿರ ರೂ. ಪಿಂಚಣಿ ನೀಡಬೇಕು. ಅಡುಗೆ ಕೇಂದ್ರಗಳನ್ನು ಸುಸಜ್ಜಿತವಾಗಿ ನಿರ್ಮಿಸಬೇಕು. ಉತ್ತರ ಪ್ರದೇಶ ಮತ್ತು ಪಂಜಾಬ್ ಹೈಕೋರ್ಟ್ ತೀರ್ಪಿನಂತೆ 12 ತಿಂಗಳ ಕೆಲಸ ಮತ್ತು ಕೂಲಿ ಜಾರಿ ಮಾಡಬೇಕೆಂದರು.

ಕೆಲಸದ ಅವಧಿಯನ್ನು 4 ಗಂಟೆಯಿಂದ 6 ಗಂಟೆ ಮಾಡಲು ಅಕ್ಷರ ದಾಸೋಹ ಕೈಪಿಡಿಯಲ್ಲಿ ತಿದ್ದುಪಡಿ ತರಬೇಕು. ಯೋಜನೆಯನ್ನು ಶಿಕ್ಷಣ ಇಲಾಖೆಯಡಿ ಸಂಪೂರ್ಣವಾಗಿ ನಡೆಸಬೇಕು. ಖಾಸಗಿ ಸಂಸ್ಥೆಗಳಿಗೆ ಹಸ್ತಾಂತರ ಮಾಡಬಾರದೆಂದು ಒತ್ತಾಯಿಸಿದರು.

ಅಕ್ಷರ ದಾಸೋಹ ಅಧಿಕಾರಿ ಮಂಜುಳಾಗೆ ಮನವಿ ಸಲ್ಲಿಸಲಾಯಿತು. ಸಿಐಟಿಯು ಪ್ರಧಾನ ಕಾರ್ಯದರ್ಶಿ ಅರವಿಂದ್ ಇನ್ನಿತರರಿದ್ದರು.

# ಸುಳ್ಳು ಸುದ್ದಿಗಳು ಹರಿದಾಡದಂತೆ ಪತ್ರಕರ್ತರು ಎಚ್ಚರಿಕೆ ವಹಿಸಿ

• ಪ್ರಜೋದಯ ವರದಿ

**ಬೇಲೂರು:** ಮಾಧ್ಯಮ ಎಂಬುದು ಸಮಾಜದ ಕಣ್ಣಿದ್ದಂತೆ. ಆದ್ದರಿಂದ ಪತ್ರಕರ್ತರು ಸಮಾಜವನ್ನು ತಿದ್ದುವ ಮೂಲಕ ಸಾರ್ವಜನಿಕರಿಗೆ ನ್ಯಾಯ ಕೊಡಿಸಬಹುದು ಎಂದು ಜೆ.ಎಂ.ಎಫ್.ಸಿ. ನ್ಯಾಯಾಲಯದ ಹಿರಿಯ ನ್ಯಾಯಾಧೀಶೆ ಎಂ.ಎಸ್.ಶಶಿಕಲಾ ಹೇಳಿದರು.

ತಾಲ್ಲೂಕು ಕಾನೂನು ಸೇವಾ ಸಮಿತಿ, ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ವಕೀಲರ ಸಂಘ ಮತ್ತು ಪೊಲೀಸ್ ಇಲಾಖೆ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಶನಿವಾರ ಆಯೋಜಿಸಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ದೃಶ್ಯ ಮತ್ತು ಪತ್ರಿಕಾ ಮಾಧ್ಯಮ. ದೃಶ್ಯ ಮಾಧ್ಯಮದ ನಡುವೆಯೂ ಪತ್ರಿಕಾ ಮಾಧ್ಯಮ ಸಾರ್ವಜನಿಕರಲ್ಲಿ ನಂಬಿಕೆ ಉಳಿಸಿಕೊಂಡಿದೆ. ಪತ್ರಕರ್ತರ ವೃತ್ತಿ ಸವಾಲಿನ ವೃತ್ತಿಯಾಗಿದೆ. ಇಲ್ಲಿ ಬೆದರಿಕೆ ಕಷ್ಟ ನಷ್ಟಗಳು ಹಾಗೂ ಚಾಕಚಕ್ಕತೆ ಹೊಂದಿರಬೇಕು. ಮತ್ತು ಸುದ್ದಿಗಳನ್ನು ತ್ವರಿತವಾಗಿ ಕೊಡುವ ಸಂದರ್ಭ ಸತ್ಯಾಸತ್ಯತೆಯನ್ನು ಅರಿತು ಕೊಡಬೇಕು.



ಸುದ್ದಿ ಕೊಡುವ ಭರದಲ್ಲಿ ಕೆಲವೊಂದು ಸಾರಿ ಸುಳ್ಳು ಸುದ್ದಿಗಳು ಹರಿದಾಡಿ ಸಮಾಜದ ಮೇಲೆ ದುಷ್ಪರಿಣಾಮಗಳು ಬೀರುತ್ತದೆ. ಆದ್ದರಿಂದ ಕೆಲವೊಂದು ಸಾರಿ ಸುದ್ದಿ ಕೊಡುವ ಮುನ್ನ ಚಿಂತಿಸಬೇಕು ಎಂದರು.

ಸುದ್ದಿ ಬರೆಯುವ ಸಂದರ್ಭ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಸುದ್ದಿಗಳಲ್ಲಿ ಅವಾಚ್ಯ ಶಬ್ದಗಳನ್ನು ಬಳಸದೆ ಸಾರ್ವಜನಿಕರಿಗೆ ಹಾಗೂ ಸಮಾಜಕ್ಕೆ ಮನಮುಟ್ಟುವ ರೀತಿ ಬರೆದರೆ ಅದು ಸಾಕಷ್ಟು ಬದಲಾವಣೆಗೆ ಕಾರಣವಾಗುತ್ತದೆ. ಮತ್ತು ಕೆಲವೊಂದು ಬಾರಿ ಒಬ್ಬ ವ್ಯಕ್ತಿಯ ವಿರುದ್ಧ ಕೆಟ್ಟ ಪದಗಳಿಂದ ಬಯಸಿದರೆ ಅದು ಕಾನೂನು ವ್ಯಾಪ್ತಿಯಲ್ಲಿ ತೊಂದರೆಯಾಗುತ್ತದೆ. ಆದ್ದರಿಂದ ಬರೆಯುವ ಬರದಲ್ಲಿ ಯೋಚನೆ ಮಾಡಬೇಕು. ಪತ್ರಿಕೆ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಬರುವ ಸುದ್ದಿಗಳು ಸಮಾಜವನ್ನು ಬದಲಾಯಿಸುವಂತಿರ ಬೇಕು. ಒಂದು ಘಟನೆ ಮತ್ತಷ್ಟು ನಕರಾತ್ಮಕ ಘಟನೆಗಳಿಗೆ ಕಾರಣವಾಗಬಾರದು. ಆ ರೀತಿಯಲ್ಲಿ ಪದ ಬಳಕೆಯನ್ನು ಸಮಯೋಚಿತವಾಗಿ ಬಳಸಿ ಬರೆಯಬೇಕು. ಅವಸರ ಅವಸರವಾಗಿ ಬರೆಯದೆ ಏನು ನಡೆದಿದೆ ಎಂಬ ಸತ್ಯವನ್ನು ತಿಳಿದು ಬರೆಯಬೇಕು ಎಂದರು.

ಪ್ರತಿ ಪತ್ರಕರ್ತರು ತಮ್ಮ ಕುಟುಂಬಕ್ಕೆ ಸಮಯ ನೀಡಬೇಕು. ಸಮಾಜಮುಖಿ ಕೆಲಸದ ಜೊತೆಗೆ ಕುಟುಂಬದ ನಿರ್ವಹಣೆ ನಿಮ್ಮ ಕರ್ತವ್ಯ ಆಗ ಮಾತ್ರ ವೃತ್ತಿ ಮತ್ತು ಕುಟುಂಬ ಎರಡಕ್ಕೂ ಸಮಾನ ನ್ಯಾಯ ದೊರಕಿಸಿ ಕೊಟ್ಟಂತಾಗುತ್ತದೆ ಎಂದು ಅವರು ತಿಳಿಸಿದರು.

ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಬಿ. ಶಿವರಾಜ್ ಪ್ರಾಸ್ತಾವಿಕ ನುಡಿಗಳನ್ನಾಡಿ, ಪತ್ರಕರ್ತರು ದಿನನಿತ್ಯ ಮಾನಸಿಕ ಒತ್ತಡದ ನಡುವೆ ಕೆಲಸ ಮಾಡುತ್ತಿದ್ದಾರೆ. ಅನಾರೋಗ್ಯಕ್ಕೆ ತುತ್ತಾದಾಗ ಅವರಿಗೆ ಸಹಾಯ ನೀಡಲು ಸಂಘದಲ್ಲಿ ಆರೋಗ್ಯ ನಿಧಿ ಪ್ರಾರಂಭಿಸಿದ್ದು ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಎರಡು ಲಕ್ಷ ಹಾಗೂ ಎಚ್‌ಡಿಸಿ ಬ್ಯಾಂಕಿನ ನಿರ್ದೇಶಕ ಎಂ.ಎ. ನಾಗರಾಜ್ ಅವರು 1 ಲಕ್ಷ ಮತ್ತು ಪತ್ರಿಕಾಗೋಷ್ಠಿಗಳಿಂದ ಬಂದ ಒಂದು ಲಕ್ಷ ಸೇರಿ 5 ಲಕ್ಷ ಹಣ ಶೇಖರಿಸಿರುವದಾಗಿ ತಿಳಿಸಿದರಲ್ಲದೆ, ಈ ಹಣವನ್ನು ಬೇರೆ ಕಾರ್ಯಕ್ರಮಗಳಿಗೆ ಬಳಸದೆ ಪತ್ರಕರ್ತರ ಆರೋಗ್ಯಕ್ಕಾಗಿ ಮೀಸಲಿಟ್ಟಿದೆ ಎಂದು ತಿಳಿಸಿದರು.

ಸಿ ಪಿ ಐ ರೇವಣ್ಣ ಮಾತನಾಡಿ, ಪತ್ರಕರ್ತರು ವಾಸ್ತವವಾಗಿ ನೈಜ ಸುದ್ದಿ ಬಿತ್ತರಿಸಿದಾಗ ನಮ್ಮ ಕರ್ತವ್ಯ ಎಚ್ಚರಿಸಿದಂತಾಗುತ್ತದೆ. ಜತೆಗೆ ಟಿಆರ್ ಪಿ. ಭರದಲ್ಲಿ ಯ್ಯುಟ್ಯೂಬ್ ಚಾನಲ್ ಕಡಿವಾಣ ಅತ್ಯವಶ್ಯ ಇದೆ ಅದು ಕಾನೂನು ರೀರಿ ಶೀಘ್ರ ಜಾರಿಯಾಗಬೇಕು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷ ರಘುನಾಥ್, ಪ್ರಧಾನ ವಕೀಲರ ಸಂಘದ ಅಧ್ಯಕ್ಷ ಸಿ.ಎಂ.ಪೃಥ್ವಿ, ಪ್ರಧಾನ ಕಾರ್ಯದರ್ಶಿ ಜಿ.ಸಿ.ಪುಟ್ಟಸ್ವಾಮಿಗೌಡ, ಪತ್ರಕರ್ತರಾದ ಜಗದೀಶ್, ಹೆಬ್ಬಾಳು ಹಾಲಪ್ಪ, ಎನ್. ಅನಂತು, ಬಿ.ಎಲ್.ಲಕ್ಷ್ಮಣ್, ಎಂ. ಸಿ. ಕುಮಾರ್, ಬಿ. ಎನ್ ಗಣೇಶ್, ವಿಜಯ್ ಕುಮಾರ್, ಕೇಬಲ್ ರಮೇಶ್, ರಾಘವೇಂದ್ರ ಹೊಳ್ಳ, ಪೇಂಟ್ ರವಿ, ಸೇರಿದಂತೆ ಕಾರ್ಯನಿರತ ಪತ್ರಕರ್ತರ ಸಂಘದ ಎಲ್ಲಾ ಸದಸ್ಯರು ಭಾಗವಹಿಸಿದ್ದರು,

# ಜಿಎಸ್‌ಟಿ ಇಳಿಕೆ ಮಧ್ಯಮ ವರ್ಗಕ್ಕೆ ಅನುಕೂಲ



• ಪ್ರಜೋದಯ ವರದಿ

**ಹಾಸನ:** ಪ್ರಧಾನಿ ನರೇಂದ್ರ ಮೋದಿ ಅವರು ಜಿಎಸ್‌ಟಿ ಹೊರೆ ಇಳಿಸುವ ಮೂಲಕ ಮಧ್ಯಮ ವರ್ಗಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ಹೇಳಿದರು.

ನಗರದ ಸೀತಾರಾಮಾಂಜನೇಯ ದೇವಸ್ಥಾನದ ಸಪ್ತಪದಿ ಸೌದಾಮಿನಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮೋದಿ ಸರ್ಕಾರಕ್ಕೆ ಧನ್ಯವಾದ ಹಾಗು ವಿಶೇಷ ಕಾರ್ಯಾಗಾರದಲ್ಲಿ ಮಾತನಾಡಿ, ಶೇ.18 ರಿಂದ ಶೇ.5ಕ್ಕೆ ತೆರಿಗೆ ಇಳಿಸಲಾಗಿದೆ. ಅಗತ್ಯ ವಸ್ತುಗಳ ಖರೀದಿಗೆ ಸಾರ್ವಜನಿಕರು ಪರದಾಡುತ್ತಿದ್ದರು. ಎಲೆಕ್ಟ್ರಿಕಲ್ ವಸ್ತುಗಳು, ದಿನಬಳಕೆ ವಸ್ತುಗಳ ಬೆಲೆ ಗಗನಕ್ಕೇರಿತ್ತು. ರಾಷ್ಟ್ರದ ಸುರಕ್ಷತೆ ದೃಷ್ಟಿಯಿಂದ ತೆರಿಗೆ ಮೂಲಕ ಹೆಚ್ಚಿನ ಹಣ ಸಂಗ್ರಹಿಸುವುದು ವಾಡಿಕೆ. ಅದನ್ನು ಮನಗಂಡ ಪ್ರಧಾನಿ ನರೇಂದ ಮೋದಿ ಅವರು ಜನರಿಗೆ ಅನುಕೂಲವಾಗಲೆಂದು ತೆರಿಗೆ ಹೊರೆ ಕಡಿಮೆ ಮಾಡಿದ್ದಾರೆಂದರು.

ಆರ್ಥಿಕ ಪ್ರಗೋಸ್ಟ ರಾಜ್ಯ ಸಂಚಾಲಕ ಜಿ.ಎಸ್.ಪ್ರಶಾಂತ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ನಗರ ಅಧ್ಯಕ್ಷ ಯೋಗೇಶ್‌ಗೌಡ ಇತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019